ಫೆಬ್ರವರಿ 15, 2026

41ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2024

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹ 20/-

## ಸದನದಲ್ಲೂ ಕಾವೇರಿದ ವಿಲಕ್ಷಣ ಪ್ರಸಂಗ!

# ಕಾಮುಕ ಜ್ಯೋತಿಷಿ ಕಮಲಾಕರ ಭಟ್ಟ ರೀಲ್ಸ್ ರಾಣಿ ಸುಚಿತ್ರ ಸಹವಾಸ ಮಾಡಿ ಕೆಟ್ಟ!





## ಲೇಡಿ ರೌಡಿ ಯಶಸ್ವಿನಿ 'ಕೋಕಾ' ಕಾಯ್ದೆಯಡಿ ಅಂದರ್!

## ಜಿ.ಟಿ. ದೇವೇಗೌಡರಿಗೆ ಜೆಡಿಎಸ್‌ನಿಂದ ಗೇಟ್‌ಪಾಸ್ ಕೊಡ್ತಾರಾ ದಳಪತಿಗಳು?!





## ಕಾವ್ಯಾಗೋಸ್ಕರ ಚಂದನಾಳಿಗೆ ಚಟ್ಟ ಕಟ್ಟಿದ!

## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಕ್ರೀಡೆ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಆಂಗ್ಲ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)

**ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......**



## ಲಯನ್ ಎಂ. ಮಲ್ಲಿಕಾರ್ಜುನಯ್ಯ

**ಸಂಸ್ಥಾಪಕ ಸಂಪಾದಕರು**

**ಜನನ : 29-03-1954  ಮರಣ : 22-11-2005**

**ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು**

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು - 1999
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ ಬಸವೇಶ್ವರನಗರ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಗೌರವಾಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'-1999**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯುರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'-2004**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'-2004**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'-2005**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'-2005**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'-1994**

# ಸತ್ಯ ಬರೆದರೆ ಮಾನಹಾನಿಯೇ? ಮಾಧ್ಯಮ ಸ್ವಾತಂತ್ರ್ಯ ಎತ್ತಿ ಹಿಡಿದ ತೀರ್ಪು...

ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳು ಅಥವಾ ಎಫ್‌ಐಆರ್‌ಗೆ ಸಂಬಂಧಿಸಿದ ಸತ್ಯಾಂಶಗಳನ್ನು ವರದಿ ಮಾಡುವುದು ಮಾನಹಾನಿಯಾಗುವುದಿಲ್ಲ ಎಂದು ಕರ್ನಾಟಕ ಹೈಕೋರ್ಟ್ ಮಹತ್ವದ ಹಾಗೂ ದೂರಗಾಮಿ ಪರಿಣಾಮ ಬೀರುವ ತೀರ್ಪು ನೀಡಿದೆ. ಈ ತೀರ್ಪು ಮುಂದಿನ ದಿನಗಳಲ್ಲಿ ಪತ್ರಕರ್ತರು ಮತ್ತು ಮಾಧ್ಯಮ ಸಂಸ್ಥೆಗಳ ವಿರುದ್ಧ ದಾಖಲೆಯಾಗುವ ಮಾನಹಾನಿ ಪ್ರಕರಣಗಳಿಗೆ ಮಾರ್ಗದರ್ಶಕ ತೀರ್ಪು ಆಗುವ ಎಲ್ಲ ಲಕ್ಷಣಗಳನ್ನು ಹೊಂದಿದೆ.

ಮಂಡ್ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ 'ನಮ್ಮ ಟಿವಿ' ನಿರ್ದೇಶಕ ಡಾ. ಶಿವಶರಣ ಶೆಟ್ಟಿ ಹಾಗೂ 'ಜಯಕಿರಣ' ಪತ್ರಿಕೆಯ ಪ್ರಕಾಶ್ ಪಾಂಡೇಶ್ವರ ಅವರ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಮಾನಹಾನಿ ಪ್ರಕರಣಗಳನ್ನು ನ್ಯಾಯಮೂರ್ತಿ ಎಂ.ಜಿ. ಉಮಾ ಅವರಿದ್ದ ಕರ್ನಾಟಕ ಹೈಕೋರ್ಟ್‌ನ ಏಕಸದಸ್ಯ ಪೀಠ ಸಂಪೂರ್ಣವಾಗಿ ರದ್ದುಪಡಿಸಿದೆ. ಈ ಮೂಲಕ ಸಂವಿಧಾನದ ವಿಧಿ 19(1)(a) ಅಡಿಯಲ್ಲಿ ಮಾಧ್ಯಮಗಳಿಗೆ ಇರುವ



ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹೈಕೋರ್ಟ್ ಪುನಃ ಬಲವಾಗಿ ಪ್ರತಿಪಾದಿಸಿದೆ.

### ಪ್ರಕರಣದ ಹಿನ್ನೆಲೆ

ಈ ಪ್ರಕರಣದ ಹಿನ್ನೆಲೆ 2015ನೇ ಇಸವಿಗೆ ಸೇರಿದೆ. ಮಂಗಳೂರಿನ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಸುಲಿಗೆ ಮತ್ತು ಬೆದರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿ. ಮಂಜುನಾಥ್ ಎಂಬುವವರು ಬಂಧನಕ್ಕೊಳಗಾಗಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಪೊಲೀಸ್ ದಾಖಲೆಗಳು ಮತ್ತು ತನಿಖಾ ವಿವರಗಳ ಆಧಾರದಲ್ಲಿ 'ನಮ್ಮ ಟಿವಿ' ವಾಹಿನಿ ಹಾಗೂ 'ಜಯಕಿರಣ' ಪತ್ರಿಕೆ ಸುದ್ದಿ ಪ್ರಕಟಿಸಿದ್ದವು.

ಈ ಸುದ್ದಿ ತನ್ನ ಗೌರವಕ್ಕೆ ಧಕ್ಕೆ ತಂದಿದೆ ಎಂದು ಆರೋಪಿಸಿದ ಬಿ. ಮಂಜುನಾಥ್ ಅವರು, ಮಂಡ್ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಮೇಲ್ಕಂಡ ಮಾಧ್ಯಮ ಸಂಸ್ಥೆಗಳ ವಿರುದ್ಧ ಖಾಸಗಿ ಮಾನಹಾನಿ ದೂರು ದಾಖಲಿಸಿದ್ದರು. ಇದನ್ನು ಪ್ರಶ್ನಿಸಿ ಮಾಧ್ಯಮ ಸಂಸ್ಥೆಗಳ ಮಾಲೀಕರು ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದ್ದರು.

### ಅರ್ಜಿದಾರರ ವಾದ

ಅರ್ಜಿದಾರರ ಪರವಾಗಿ ಹಿರಿಯ ನ್ಯಾಯವಾದಿ ಅರುಣ ಶ್ಯಾಮ್ ಅವರು ವಾದ ಮಂಡಿಸಿ, ಪತ್ರಿಕೆ ಮತ್ತು ವಾಹಿನಿಯಲ್ಲಿ ಪ್ರಕಟವಾದ ವರದಿ ಕೇವಲ ಪೊಲೀಸ್ ದಾಖಲೆಗಳು ಹಾಗೂ ಚಾರ್ಜ್‌ಶೀಟ್‌ನಲ್ಲಿರುವ ಸತ್ಯಾಂಶಗಳನ್ನೇ ಆಧರಿಸಿದೆ ಎಂದು ಸ್ಪಷ್ಟಪಡಿಸಿದರು. ಸಾರ್ವಜನಿಕ ದಾಖಲೆಗಳ ಆಧಾರದ

☞ 3

# ಕೊರಿಯನ್ ಗೇಮ್‌ಗೆ ಬಲಿಯಾದ ಸೋದರಿಯರ ಡೈರಿಯಲ್ಲಿದೆ ಬೆಚ್ಚಿಬೀಳಿಸುವ ಸಂಗತಿ....



ಸಂಪಾದಕ
**ಎಂ. ರಾಹುಲ್**

ಉತ್ತರ ಪ್ರದೇಶದ ಘಾಜಿಯಾಬಾದ್‌ನಲ್ಲಿ ನಡೆದ ಮೂವರು ಸಹೋದರಿಯರ ಆತ್ಮಹತ್ಯೆ ಪ್ರಕರಣ ಇದೀಗ ಭಾರೀ ಚರ್ಚೆಗೆ ಗ್ರಾಸವಾಗಿದ್ದು, ಈ ನಡುವೆ ಅವರ ಬಳಿ ದೊರೆತಿರುವ ಡೈರಿಯಲ್ಲಿ ಅವರಲ್ಲಿ ಬೆಳೆದಿದ್ದ ಕೊರಿಯನ್ ಸಂಸ್ಕೃತಿಯ ಗೀಳು ಎಷ್ಟರಮಟ್ಟಿಗಿತ್ತು ಎಂಬುದನ್ನು ಬಹಿರಂಗಪಡಿಸಿದೆ. 12 ವರ್ಷದ ಪಾಖಿ, 14 ವರ್ಷದ ಪ್ರಾಚಿ ಮತ್ತು 16 ವರ್ಷದ ನಿಶಿಕಾ ಎಂಬ ಮೂವರು ಸಹೋದರಿಯರು ಕಳೆದ ಬುಧವಾರ ಮುಂಜಾನೆ ಗಾಜಿಯಾಬಾದ್‌ನ 'ಭಾರತ್ ಸಿಟಿ' ವಸತಿ ಸಮುಚ್ಚಯದ 9ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದರು.

ಈ ಮೂವರು ಸಹೋದರಿಯರು ಕೊರಿಯನ್ ಹೆಸರುಗಳಾದ ಮಾರಿಯಾ, ಅಲಿಜಾ ಮತ್ತು ಸಿಂಡಿ ಬಳಸಿಕೊಂಡು ಸಾಮಾಜಿಕ ಮಾಧ್ಯಮ ಖಾತೆಯನ್ನು ಸಹ ರಚಿಸಿದ್ದು, ಅದು ಭಾರಿ ಸಂಖ್ಯೆಯ ಫಾಲೋವರ್ಸ್‌ಗಳನ್ನು ಹೊಂದಿತ್ತು. ಈಗ್ಗೆ 10 ದಿನಗಳ ಹಿಂದೆ ಅವರ ತಂದೆ ಈ ಖಾತೆಯ ಬಗ್ಗೆ ತಿಳಿದುಕೊಂಡು ಹರಸಾಹಸ ಪಟ್ಟು ಅದನ್ನು ಡಿಲೀಟ್ ಮಾಡಿಸಿದ್ದರು. ಇದರಿಂದ ಮನನೊಂದ ಮೂವರು ಸಹೋದರಿಯರು ಆತ್ಮಹತ್ಯೆಗೆ ಶರಣಾಗಿದ್ದರು. ಈ ನಡುವೆ ಪ್ರಕರಣದ ತನಿಖೆ ಕೈಗೊಂಡ ಪೋಲೀಸರು ಬಾಲಕಿಯರ ಬಳಿಯಿದ್ದ ಡೈರಿಯನ್ನು ವಶಕ್ಕೆ ಪಡೆದಿದ್ದು,ಆ ಡೈರಿಯಲ್ಲಿ ಹಲವು ಸತ್ಯಗಳು ಬಹಿರಂಗೊಂಡಿವೆ. ಎಂಟು ಪುಟಗಳ ಟಿಪ್ಪಣಿಯನ್ನು ಪಾಕೆಟ್ ಡೈರಿಯ ಪುಟಗಳಲ್ಲಿ ಬರೆಯಲಾಗಿದ್ದು, ಅವರ ಗೇಮಿಂಗ್ ಮತ್ತು ಮೊಬೈಲ್ ಚಟುವಟಿಕೆಗಳನ್ನು ವಿವರಿಸಲಾಗಿದೆ.

ಕೊರಿಯನ್ ಹೆಸರುಗಳೊಂದಿಗೆ ಇನ್‌ಸ್ಟಾ ಖಾತೆ ಹೊಂದಿದ್ದ ಈ ಸೋದರಿಯರಿಗಿದ್ದರು ಅತಿ ಹೆಚ್ಚಿನ ಫಾಲೋವರ್ಸ್. ಈ ಬಾಲಕಿಯರು ಕೇವಲ ಕೊರಿಯನ್ ಮಾತ್ರವಲ್ಲದೆ ಥಾಯ್, ಚೀನೀ ಮತ್ತು ಜಪಾನಿ ಸಂಗೀತ ಹಾಗೂ ಚಿತ್ರಗಳಿಗೂ ಮಾರು ಹೋಗಿದ್ದು, ಅವರ ಡೈರಿಯಲ್ಲಿ 'ಪಾಪಿ ಪ್ಲೇ ಟೈಮ್', 'ದ ಬೇಬಿ ಇನ್ ಯೆಲ್ಲೋ', 'ಇವಿಲ್ ಗೇಮ್' ಮತ್ತು 'ಐಸ್‌ಕ್ರೀಮ್ ಮ್ಯಾನ್ ಗೇಮ್'ನಂತಹ ಅಪಾಯಕಾರಿ ಸರ್ವೈವಲ್ ಗೇಮ್‌ಗಳ ಬಗ್ಗೆ ಬರೆದಿರುವುದಾಗಿ ತಿಳಿದುಬಂದಿದೆ.

ಕೋವಿಡ್ ಸಾಂಕ್ರಾಮಿಕ ರೋಗ ಸಮಯದಲ್ಲಿ ಇವರು 'ವಿ ಆರ್ ನಾಟ್ ಇಂಡಿಯನ್ಸ್' ಎಂಬ ಕೊರಿಯನ್ ಲವ್ ಗೇಮ್‌ಗೆ ದಾಸರಾಗಿದ್ದರು ಎಂಬುದಾಗಿ ತಿಳಿದುಬಂದಿದೆ. ಈ ಗೇಮ್‌ನಲ್ಲಿ ನೀಡಲಾಗುವ ಟಾಸ್ಕ್‌ಗಳೇ ಅವರನ್ನು ಸಾವಿನ ಅಂಚಿಗೆ ತಳ್ಳಿರಬಹುದು ಎಂದು ಶಂಕಿಸಲಾಗಿದೆ.



'ನಾವು ಕೊರಿಯಾವನ್ನು ಪ್ರೀತಿಸುತ್ತೇವೆ, ಲವ್ ಲವ್ ಲವ್' ಎಂದು ಡೈರಿಯ ಉದ್ದಕ್ಕೂ ಬರೆಯಲಾಗಿದೆ. ತಮ್ಮನ್ನು ಕೊರಿಯನ್ ಸಂಸ್ಕೃತಿಯಿಂದ ದೂರ ಮಾಡಲು ಪ್ರಯತ್ನಿಸಿದ್ದಕ್ಕೆ ಪೋಷಕರ ಮೇಲೆ ಸಿಟ್ಟು ವ್ಯಕ್ತಪಡಿಸಿರುವ ಬಾಲಕಿಯರು, 'ನಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ನಾವು ಕೊರಿಯನ್ ನಟರನ್ನು ಮತ್ತು ಕೆಪಾಪ್ ತಂಡವನ್ನು ಪ್ರೀತಿಸುತ್ತೇವೆ' ಎಂದು ಬರೆದಿದ್ದಾರೆ.

ನಮ್ಮ ಜೀವನವಾಗಿದ್ದ ಕೊರಿಯನ್ ಗೀಳನ್ನು ಬಿಡಿಸಲು ನೀವು ಯಾರು? ಈಗ ನೋಡಿ ಸಾಕ್ಷಿ ಸಿಕ್ಕಿದೆ. ಕೊರಿಯನ್ ಮತ್ತು ಕೆಪಾಪ್ ನಮ್ಮ ಜೀವನ ಎಂದು ಮನವರಿಕೆಯಾಗಿದೆ. ನಾವು ನಿಮ್ಮನ್ನು ಮತ್ತು ಕುಟುಂಬವನ್ನು ಕೊರಿಯನ್ ನಟ ಮತ್ತು ಕೆಪಾಪ್ ಗುಂಪನ್ನು ಪ್ರೀತಿಸಿದಷ್ಟು ಪ್ರೀತಿಸಲಿಲ್ಲ. ಕೊರಿಯನ್ ನಮ್ಮ ಜೀವನವಾಗಿತ್ತು. ನಾವು ಕೊರಿಯನ್ನರನ್ನು ಇಷ್ಟಪಟ್ಟೆವು ಮತ್ತು ಪ್ರೀತಿಸುತ್ತಿದ್ದೆವು, ಆದರೆ, ನೀವು ನಮ್ಮನ್ನು ಭಾರತೀಯರನ್ನು ಮದುವೆಯಾಗುವಂತೆ ಮಾಡಲು ಬಯಸಿದ್ದೀರಿ. ಭವಿಷ್ಯದಲ್ಲಿ ಭಾರತೀಯರನ್ನು ಮದುವೆಯಾಗುವ ಆಲೋಚನೆಯೇ ನಮಗೆ ಇಷ್ಟವಿರಲಿಲ್ಲ ಎಂದು ಬರೆದಿದ್ದಾರೆ.

ಇದಲ್ಲದೆ, ತಮ್ಮ ಕಿರಿಯ ಸಹೋದರಿ ದೇವೂಳನ್ನೂ ದ್ವೇಷಿಸುತ್ತಿರುವುದಾಗಿಯೂ ತಿಳಿಸಿದ್ದಾರೆ. 'ದೇವೂ'ಳನ್ನು ಕೂಡ ನಮ್ಮಂತೆಯೇ ಬದಲಾಯಿಸಲು ನಾವು ಪ್ರಯತ್ನಿಸಿದೆವು. ಆದರೆ ಪೋಷಕರು ಅದಕ್ಕೆ ಅಡ್ಡಿಪಡಿಸಿ ಆಕೆಗೆ ಶಿಕ್ಷಣದ ಬಗ್ಗೆ ಆಸಕ್ತಿ ಮೂಡಿಸಿದ್ದರು.

ನಮ್ಮ ಪ್ರೀತಿಯನ್ನು ಹಂಚಿಕೊಳ್ಳುವ ಬದಲು ಆಕೆಗೆ ಓದಿಸುವಂತೆ ನಮಗೆ ಹೇಳಿದ್ದಕ್ಕೆ ಬೇಸರವಾಯಿತು. ಅಂದಿನಿಂದ ನಾವು ದೇವೂಳನ್ನು ಶತ್ರುವಿನಂತೆ ನೋಡಿದೆವು. ನಾವೆಲ್ಲಾ 'ಕೊರಿಯನ್ ಮತ್ತು ಕೆಪಾಪ್', ನೀನು 'ಇಂಡಿಯನ್ ಮತ್ತು ಬಾಲಿವುಡ್' ಎಂದು ಆಕೆಯನ್ನು ದೂರ ಮಾಡಿದೆವು ಎಂದು ಬರೆದಿದ್ದಾರೆ. ಇಷ್ಟಕ್ಕೂ ಈ ಮೂವರು ಸೋದರಿಯರ ಸಾವಿಗೆ ಕೊರಿಯನ್ ಗೇಮ್ ಆ್ಯಪ್ ಕಾರಣವೆನ್ನಲು ಯಾವುದೇ ಪುರಾವೆ ಸಿಕ್ಕಿಲ್ಲವಂತೆ.

ಏತನ್ಮಧ್ಯೆ ಕೊರಿಯನ್ ಗೇಮ್ ಆ್ಯಪ್‌ನಿಂದ ಮೂವರು ಸಹೋದರಿಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂಬುದಕ್ಕೆ ಯಾವುದೇ ಸಾಕ್ಷಿಗಳು ಪತ್ತೆಯಾಗಿಲ್ಲ ಎಂದು ಉತ್ತರ ಪ್ರದೇಶ ಪೊಲೀಸರು ಹೇಳಿದ್ದಾರೆ. ಆ ಕುಟುಂಬವು ಆರ್ಥಿಕ ಸಂಕಷ್ಟದಲ್ಲಿ ಸಿಲುಕಿತ್ತು, ಹುಡುಗಿಯರು ಕಳೆದ ಎರಡು ವರ್ಷಗಳಿಂದ ಶಾಲೆಗೆ ಹೋಗುತ್ತಿರಲಿಲ್ಲ. ಸಾಲದ ಹೊರೆ ಇದಕ್ಕೆ ಕಾರಣ ಇರಬಹುದು ಎಂದು ತಿಳಿಸಿದ್ದಾರೆ.

ಸೊಸೈಟಿಯ ನಿವಾಸಿಗಳ ಸಂಘದ ಒಬ್ಬ ಪದಾಧಿಕಾರಿ (ಹೆಸರು ಬದಲಿಸಲಾಗಿದೆ) ಮಾತನಾಡಿ, ಸಹೋದರಿಯರ ತಂದೆ ಚೇತನಕುಮಾರ್ ಷೇರು ಮಾರುಕಟ್ಟೆಯಲ್ಲಿ ಭಾರೀ ನಷ್ಟ ಅನುಭವಿಸಿದ್ದರಿಂದ ಕುಟುಂಬ ಆರ್ಥಿಕ ಒತ್ತಡದಲ್ಲಿತ್ತು ಎಂದು ತಿಳಿಸಿದ್ದಾರೆ.

ಚೇತನ್ ಅವರು ಸುಮಾರು ರೂ. 2 ಕೋಟಿಗೂ ಹೆಚ್ಚು ಹಣ ಕಳೆದುಕೊಂಡಿದ್ದು, ಒಂದು ಹಂತದಲ್ಲಿ ವಿದ್ಯುತ್ ಬಿಲ್ ಪಾವತಿಸಲು ಮೊಬೈಲ್ ಫೋನ್ ಮಾರಾಟ ಮಾಡಬೇಕಾದ ಪರಿಸ್ಥಿತಿ ಎದುರಿಸಿದ್ದರು. ಈ ಆರ್ಥಿಕ ಸಂಕಷ್ಟವೇ ಮನೆಯೊಳಗಿನ ಆಗಾಗ್ಗೆ ಜಗಳಗಳಿಗೆ ಕಾರಣವಾಗಿತ್ತೆಂದು ತಿಳಿದುಬಂದಿದೆ.

ಮೂವರು ಪುತ್ರಿಯರ ಸಾವಿನ ಬಳಿಕ ಚೇತನ ಕುಮಾರ್, ತಮ್ಮ ಮಕ್ಕಳು ಕಳೆದ ಎರಡು ವರ್ಷಗಳಿಂದ ಕೊರಿಯನ್ ಆಟವೊಂದರಲ್ಲಿ ತೊಡಗಿಸಿಕೊಂಡಿದ್ದು, ಶಾಲೆಗೆ ಹೋಗುವುದನ್ನೇ ನಿಲ್ಲಿಸಿದ್ದರು ಎಂದು ಪೊಲೀಸರಿಗೆ ತಿಳಿಸಿದ್ದರು. ಆದರೆ ಇದಕ್ಕೆ ಸಂಬಂಧಿಸಿದ ಯಾವುದೇ ತಾಂತ್ರಿಕ ಪುರಾವೆಗಳು ಇದುವರೆಗೆ ಪತ್ತೆಯಾಗಿಲ್ಲ ಎಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ.

ಮರಣೋತ್ತರ ಪರೀಕ್ಷೆಯ ಬಳಿಕ, ಬುಧವಾರ ಸಂಜೆ ದೆಹಲಿಯ ನಿಗಮ್ ಬೋಧ್ ಘಾಟ್‌ನಲ್ಲಿ ಮೂವರು ಸಹೋದರಿಯರ ಅಂತ್ಯಕ್ರಿಯೆ ನೆರವೇರಿಸಲಾಯಿತು. ಅಂತ್ಯಸಂಸ್ಕಾರವನ್ನು ಅವರ ತಂದೆಯೇ ನೆರವೇರಿಸಿದರು. ಮರಣೋತ್ತರ ವರದಿಯಲ್ಲಿ ಮೂವರೂ ತಲೆಗೆ ಉಂಟಾದ ಗಂಭೀರ ಗಾಯಗಳಿಂದ ಮೃತಪಟ್ಟಿದ್ದಾರೆ ಎಂದು ಯುಪಿ ಪೊಲೀಸರು ಮಾಹಿತಿ ನೀಡಿದ್ದಾರೆ. ಏನೇ ಆಗಲಿ,ನಮ್ಮ ಮಕ್ಕಳ ಬಗ್ಗೆ ಜಾಗ್ರತೆ ವಹಿಸಬೇಕು. ನಮ್ಮ ಮಕ್ಕಳು ಮೊಬೈಲ್ ದಾಸರಾಗುವುದನ್ನು ತಪ್ಪಿಸಬೇಕು. ಪ್ರಾರಂಭದಲ್ಲೇ ಸರಿಪಡಿಸದಿದ್ದರೆ ಮುಂದೆ ಭಾರೀ ಅನಾಹುತ ಎದುರಿಸಬೇಕಾಗುವುದು ನಿಶ್ಚಿತ. ಸೋ, ಪೋಷಕರೇ ಹುಷಾರಾಗಿರಿ......

-ಸಂ.

2 ☜



ಮೇಲೆ ಸತ್ಯ ಸುದ್ದಿಯನ್ನು ಪ್ರಕಟಿಸುವುದು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 499ರ ಅಡಿಯಲ್ಲಿ ಅಪರಾಧವಾಗುವುದಿಲ್ಲ ಎಂದು ಅವರು ಪ್ರತಿಪಾದಿಸಿದರು.

ವಿಶೇಷವಾಗಿ, ಸೆಕ್ಷನ್ 499ರ ಮೊದಲ ವಿನಾಯಿತಿ ಸಾರ್ವಜನಿಕ ಒಳಿತಿಗಾಗಿ ಸತ್ಯಾಂಶ ಪ್ರಕಟಿಸುವುದು ಮತ್ತು ನಾಲ್ಕನೇ ವಿನಾಯಿತಿ ನ್ಯಾಯಾಲಯದ ನಡಾವಳಿಗಳ ಸತ್ಯ ವರದಿ ಪ್ರಕಟಿಸುವುದು ಈ ಪ್ರಕರಣಕ್ಕೆ ಸಂಪೂರ್ಣವಾಗಿ ಅನ್ವಯವಾಗುತ್ತದೆ. ಹೀಗಾಗಿ ಇದನ್ನು ಮಾನಹಾನಿ ಎಂದು ಪರಿಗಣಿಸುವುದೇ ಸಾಧ್ಯವಿಲ್ಲ ಎಂದು ಅವರು ನ್ಯಾಯಾಲಯದ ಗಮನಕ್ಕೆ ತಂದರು.

**ಹೈಕೋರ್ಟ್‌ನ ಅಭಿಪ್ರಾಯ**

ವಾದಪ್ರತಿವಾದಗಳನ್ನು ಆಲಿಸಿದ ನ್ಯಾಯಮೂರ್ತಿ ಎಂ.ಜಿ. ಉಮಾ ಅವರು, ಪ್ರಕಟಿತ ಸುದ್ದಿಯಲ್ಲಿ ಸತ್ಯಾಂಶವಿದೆ ಮತ್ತು ದೂರುದಾರರು ಕ್ರಿಮಿನಲ್ ಪ್ರಕರಣವೊಂದರಲ್ಲಿ ಆರೋಪಿಯಾಗಿರುವುದು ದಾಖಲೆಗಳಿಂದ ಸಾಬೀತಾಗಿದೆ ಎಂದು ಅಭಿಪ್ರಾಯಪಟ್ಟರು. ಸಾರ್ವಜನಿಕ ದಾಖಲೆಗಳ ಆಧಾರದಲ್ಲಿ ಪ್ರಕಟವಾದ ಸತ್ಯ ವರದಿಯನ್ನು ಮಾನಹಾನಿ ಎಂದು ಕರೆಯಲು ಸಾಧ್ಯವಿಲ್ಲ ಎಂದು ಪೀಠ ಸ್ಪಷ್ಟವಾಗಿ ತಿಳಿಸಿತು.

ಇದಲ್ಲದೆ, ಸಂಪಾದಕರು ಅಥವಾ ವರದಿಗಾರರನ್ನು ಬಿಟ್ಟು ಕೇವಲ ಮಾಧ್ಯಮ ಸಂಸ್ಥೆಗಳ ಮಾಲೀಕರನ್ನೇ ಗುರಿಯಾಗಿಸಿಕೊಂಡು ದೂರು ದಾಖಲಿಸಿರುವುದು ಕಾನೂನುಬದ್ಧವಲ್ಲ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿತು. ದೂರುದಾರರ ಈ ನಡೆ ಮಾಧ್ಯಮಗಳ ಮೇಲೆ ಒತ್ತಡ ಹೇರುವ ಮತ್ತು ಅವರನ್ನು ಮೌನಗೊಳಿಸುವ 'ಆರ್ಮ್ ಟ್ವಿಸ್ಟಿಂಗ್' ತಂತ್ರದಂತಿದೆ ಎಂದು ಹೈಕೋರ್ಟ್ ಕಟುವಾಗಿ ತರಾಟೆಗೆ ತೆಗೆದುಕೊಂಡಿತು.



**ತೀರ್ಪಿನ ಮಹತ್ವ**

ಅಂತಿಮವಾಗಿ, ಮಂಡ್ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಬಾಕಿ ಇದ್ದ ಎಲ್ಲಾ ಕ್ರಿಮಿನಲ್ ಮಾನಹಾನಿ ನಡಾವಳಿಗಳನ್ನು ರದ್ದುಪಡಿಸಿದ ಹೈಕೋರ್ಟ್, ಮಾಧ್ಯಮ ಸ್ವಾತಂತ್ರ್ಯಕ್ಕೆ ಬಲವಾದ ಕಾನೂನು ರಕ್ಷಣೆ ಒದಗಿಸಿದೆ. ಸತ್ಯದ ಆಧಾರದ ಮೇಲೆ, ಸಾರ್ವಜನಿಕ ಹಿತದೃಷ್ಟಿಯಿಂದ ವರದಿ ಮಾಡುವ ಪತ್ರಕರ್ತರು ಮತ್ತು ಮಾಧ್ಯಮ ಸಂಸ್ಥೆಗಳನ್ನು ಕಾನೂನು ಭೀತಿಯಿಂದ ಬೆದರಿಸಲು ಸಾಧ್ಯವಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಈ ತೀರ್ಪು ನೀಡಿದೆ.

# ಕಾಮದಾಸೆಗೆ ಮಗು ಹೆತ್ತು 5 ಲಕ್ಷಕ್ಕೆ ಮಾರಾಟ ದಂಪತಿ ಸೇರಿ ಐವರು ಪೊಲೀಸ್ ಬಲೆಗೆ!

**ಮದುವೆಯಾಗಿ ಇಬ್ಬರು ಮಕ್ಕಳಿರುವ ಮಹಿಳೆಯೊಬ್ಬಳು ಗಂಡನನ್ನು ಬಿಟ್ಟು ಕಾಮದಾಸೆಗೆ ಇನ್ನೊಬ್ಬನೊಂದಿಗೆ ಓಡಿ ಹೋಗಿ ಅವನೊಂದಿಗೆ ಲಿವಿಂಗ್ ಟುಗೆದರ್‌ನಲ್ಲಿ ಸಂಬಂಧ ಬೆಳೆಸಿಕೊಂಡು ಗರ್ಭಿಣಿಯಾಗಿ ಮಗುವನ್ನು ಪೋಷಿಸಲಾಗದೆ ಹೆತ್ತ ನಂತರ ಮಗು ಮಾರಾಟದ ಪ್ಲಾನ್ ಮಾಡಿಕೊಂಡು ಮಕ್ಕಳ ಮಾರಾಟ ಜಾಲದ ಮಧ್ಯವರ್ತಿಯ ಮೂಲಕ ಆರು ದಿನದ ಗಂಡು ಮಗುವನ್ನು 5 ಲಕ್ಷ ರೂ.ಗಳಿಗೆ ಮಾರಾಟ ಮಾಡಿದ್ದು, ಮಗು ಕಾಣೆಯಾದ ಬಗ್ಗೆ ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಶ್ರೀನಿವಾಸಪುರ ಪೊಲೀಸರು ಮಗುವಿನ ತಂದೆ, ತಾಯಿ, ಮಧ್ಯವರ್ತಿ ಹಾಗೂ ಮಗುವನ್ನು ಖರೀದಿಸಿದವರನ್ನು ಬಂಧಿಸಿ ಸಾಕು ತಾಯಿಯಿಂದ ಮಗುವನ್ನು ಸುರಕ್ಷಿತವಾಗಿ ಹೆತ್ತ ತಾಯಿಯ ಮಡಿಲಿಗೆ ಸೇರಿಸಿರುವ ಹೃದಯ ವಿದ್ರಾವಕ ಘಟನೆಯೊಂದು ನಡೆದಿದೆ.**



ಕೋಲಾರ

✍ಕೋಲಾರ ಮಂಜು

ಮದುವೆಯಾಗಿ ವರ್ಷಗಳು ಕಳೆದರೂ ಮಗುವಾಗಿಲ್ಲ, ದೇವರೇ ಒಂದು ಮಗುವನ್ನು ಕರುಣಿಸಪ್ಪ ಎಂದು ದೇವಸ್ಥಾನ, ಆಸ್ಪತ್ರೆ ಅಂತ ಪ್ರತಿ ದಿನ ಅದೆಷ್ಟೋ ಹೆಣ್ಣು ಮಕ್ಕಳು ಸುತ್ತಾಡುತ್ತಿದ್ದಾರೆ. ಆದರೆ ಕೋಲಾರ ಜಿಲ್ಲೆ, ಶ್ರೀನಿವಾಸಪುರ ಪಟ್ಟಣದಲ್ಲಿ ವಾಸವಿರುವ ನೀತು ಎಂಬ ಮಹಿಳೆಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದರು. ಯಾವುದೋ ಸಂದರ್ಭದಲ್ಲಿ ಪರಿಚಯನಾದ ಡ್ರೈವರ್ ರಾಘವೇಂದ್ರ, ಎಂಬುವವರ ಜೊತೆ ಸ್ನೇಹವಾಗಿ ನಂತರ ಅಕ್ರಮ ಸಂಬಂಧ ಬೆಳೆಸಿಕೊಂಡ ನೀತು ಕೆಲವು ದಿನಗಳ ನಂತರ ಗಂಡ ಮತ್ತು ಇಬ್ಬರು ಮಕ್ಕಳನ್ನು ಬಿಟ್ಟು




ಎಸ್ಪಿ ಕನ್ನಿಕಾ ಸುಕ್ರಿವಾಲ್




ಎಎಸ್ಪಿ★ವಿಶಂಕರ್

ಪ್ರಿಯಕರನೊಂದಿಗೆ ಹೋಗಿ ಪ್ರತ್ಯೇಕವಾಗಿ ವಾಸವಾಗಿದ್ದಳು. ಕೆಲವು ತಿಂಗಳ ನಂತರ ಗಂಡನನ್ನು ಬಿಟ್ಟು ನಿನ್ನ ಜೊತೆ ಓಡಿ ಬಂದಿದ್ದೇನೆ. ಈಗ ನಾವಿಬ್ಬರು ಮದುವೆಯಾಗಿ ಗಂಡ ಹೆಂಡತಿಯಾಗಿ ಸಂಸಾರ ಮಾಡೋಣವೆಂದು ರಾಘವೇಂದ್ರನನ್ನು ಕೇಳಲಾಗಿ ಮದುವೆ, ಸಂಸಾರ, ಮಕ್ಕಳು ಯಾವುದು ಬೇಡ, ನಾವಿಬ್ಬರು ಫ್ರೆಂಡ್ಸ್ ಆಗಿ ಲಿವಿಂಗ್ ಟುಗೆದರ್ ನಲ್ಲಿ ಸಂಬಂಧ ಬೆಳೆಸಿಕೊಂಡು ಸುಖವಾಗಿ ಜೀವನ ಮಾಡೋಣವೆಂದು ಹೇಳಿದನು. ಆದರೆ ನೀತುಗೆ ಮದುವೆಯಾಗದೆ ಲಿವಿಂಗ್ ಟುಗೆದರ್‌ನಲ್ಲಿ ಇಬ್ಬರು ಒಟ್ಟಿಗೆ ಸಂಸಾರ ಮಾಡಿಕೊಂಡಿರುವುದು ಇಷ್ಟವಿರಲಿಲ್ಲ. ಆದರೂ ಗಂಡ, ಮಕ್ಕಳನ್ನು ಬಿಟ್ಟು ಬಂದಿರುವ ನೀತು ಮತ್ತೆ ಅಲ್ಲಿಗೆ ಹೋಗಲಾರದೆ ಅವನ ಜೊತೆ ದಿನಗಳು ಕಳೆದಂತೆ ಗರ್ಭಿಣಿಯಾದ ನೀತು ಈ ವಿಷಯ ಪ್ರಿಯಕರ ರಾಘವೇಂದ್ರನಿಗೆ ಹೇಳದೆ ಮುಚ್ಚಿಟ್ಟಳು. ನಾಲ್ಕು-ಐದು ತಿಂಗಳ ನಂತರ ಪ್ರಿಯಕರನಿಗೆ ಗೊತ್ತಾಗಿ ನೀತು ಜೊತೆ ಜಗಳವಾಡಿದನಲ್ಲದೆ ಮಗುವನ್ನು ತೆಗೆಸಿಬಿಡೋಣವೆಂದು ಹೇಳಿ ಶ್ರೀನಿವಾಸಪುರ ಪಟ್ಟಣದ ಖಾಸಗಿ ನರ್ಸಿಂಗ್ ಹೋಮ್‌ಗೆ ಕರೆದುಕೊಂಡು ಹೋಗಿ ಮಗುವನ್ನು ಮಗುವನ್ನು ತೆಗೆಸುವಂತೆ ಕೇಳಲಾಗಿ ಭ್ರೂಣ ಹತ್ಯೆ ಮಾಡುವುದು ಕಾನೂನು ಬಾಹಿರ. ಮಗುವನ್ನು ತೆಗೆಯುವುದಾಗಲಿ ನೀವು ಮಗುವನ್ನು ಗರ್ಭದಿಂದ ತೆಗೆಸಲು ಪ್ರಯತ್ನಿಸುವುದಾಗಲಿ ಮಾಡಿದರೆ ಇಬ್ಬರು ಜೈಲಿಗೆ ಹೋಗಬೇಕಾಗುತ್ತೆ. ಮಗು ಬೇಕು, ನಮಗೆ ಮಕ್ಕಳಾಗುತ್ತಿಲ್ಲವೆಂದು ಎಷ್ಟೋ ಹೆಣ್ಣು ಮಕ್ಕಳು ನಮ್ಮ ಬಳಿ ಬಂದು ಚಿಕಿತ್ಸೆ ಪಡೆದು ಹೋಗುತ್ತಾರೆ. ಆದರೆ ನೀವು ಮಾತ್ರ ದೇವರು ಕೊಟ್ಟಿರುವ ಫಲವನ್ನು ತೆಗೆಸಲು ಬಂದಿದ್ದೀರಿ. ನಿಮಗೆ ಮಗುವಾಗುವುದು ಬೇಡ ಎಂದಾಗ ಅದಕ್ಕೆ ಬೇಕಾದ ಮುಂಜಾಗ್ರತಾ ಕ್ರಮಗಳಿವೆ. ಅದು ಬಿಟ್ಟು ಗರ್ಭಧರಿಸಿದ ಮೇಲೆ ಒಂಭತ್ತು ತಿಂಗಳ ನಂತರ ಆಸ್ಪತ್ರೆಗೆ ಬರುವುದು ಹೆರಿಗೆಗೆ ಮಾತ್ರ ವಿನಃ ಮಗುವನ್ನು ಹತ್ಯೆ ಮಾಡುವುದಕ್ಕಲ್ಲ. ನೀವು ಇಲ್ಲಿಯೇ ಇದ್ದರೆ ಪೊಲೀಸರನ್ನು ಕರೆಸಬೇಕಾಗುವುದೆಂದು ಇಬ್ಬರಿಗೂ ಬುದ್ಧಿ ಹೇಳಿ ಕಳುಹಿಸಿದರು. ನೀತು ಮಾಡಿದ ಎಡವಟ್ಟಿನಿಂದ ಮಗುವನ್ನು ತೆಗೆಸಲಾಗದೆ ರಾಘವೇಂದ್ರನಿಗೆ ಒಂಭತ್ತು ತಿಂಗಳು ಸೇವೆ ಮಾಡುವಂತಾಯಿತು. ಮಗುವನ್ನು ಹೆತ್ತರು ನಾವಿಬ್ಬರು ತಂದೆ, ತಾಯಿಗಳಾಗಿರಲು ಸಾಧ್ಯವಿಲ್ಲ. ನನಗಿನ್ನು ಮದುವೆಯಾಗಿಲ್ಲ. ನನ್ನ ನಿನ್ನ ಸಂಬಂಧ ಲಿವಿಂಗ್ ಟುಗೆದರ್‌ಗೆ ಸೀಮಿತವಾಗಿ ಇಬ್ಬರು ಸುಖವಾಗಿ ಜೀವನ ಸಾಗಿಸೋಣ ಎಂದುಕೊಂಡಿದ್ದೇ ಆದರೆ ಮಗು ಬಂದರೆ ಮುಂದೆ ನನ್ನ ಭವಿಷ್ಯವನ್ನು ಹೇಗೆ ರೂಪಿಸಿಕೊಳ್ಳುವುದು ಎಂದಾಗ ನೀತು ಈಗ ಆಗಿದ್ದು ಆಯಿತು, ಹೆರಿಗೆಯಾದ ನಂತರ ಮಗುವನ್ನು ನಾವು ಇಟ್ಟುಕೊಳ್ಳದೆ ಯಾರಿಗಾದರೂ ಕೊಟ್ಟುಬಿಡೋಣವೆಂದು ಮಾತನಾಡಿಕೊಂಡಿರಲ್ಲದೆ ಮಕ್ಕಳನ್ನು ಮಾರಾಟ ಮಾಡುವ ಬ್ರೋಕರ್‌ಗಾಗಿ ಹುಡುಕಾಟ ನಡೆಸಿದರು.



ಡಿವೈಎಸ್ಪಿ ಎಂ.ಹೆಚ್. ನಾಗ್ತೆ



ಪಿಐ ಶಂಕರಾಚಾರಿ

## 5 ಲಕ್ಷಕ್ಕೆ ಮಗು ಮಾರಾಟ

ಶ್ರೀನಿವಾಸಪುರ ಪಟ್ಟಣದ ವೆಂಕಟೇಶ್ವರ ಬಡಾವಣೆಯಲ್ಲಿ ಫೆಬ್ರವರಿ 6ರಂದು ಶುಕ್ರವಾರ ರಾತ್ರಿ ಮಾನವೀಯತೆಯನ್ನೇ ಮರೆಸುವಂತಹ ಘಟನೆಯೊಂದು ಬೆಳಕಿಗೆ ಬಂದಿದೆ. ಅದು ಏನೆಂದರೆ ಅಂದು ರಾತ್ರಿ 12.30ರಲ್ಲಿ ಪಟ್ಟಣದ ಕೂಳ್ಳೂರು ರಸ್ತೆ ಕಡೆಯಿಂದ ಗಸ್ತು ಮುಗಿಸಿಕೊಂಡು ವೆಂಕಟೇಶ್ವರ ಬಡಾವಣೆ ಕಡೆಗೆ ಬಂದ ಪೊಲೀಸರಿಗೆ ಅಲ್ಲಿ ಅನುಮಾನಸ್ಪದವಾಗಿ ಗುಂಪೊಂದು ಸೇರಿಕೊಂಡು ಏನೋ ಚರ್ಚಿಸುವಂತೆ ಕಂಡು ಬಂದಿತ್ತು. ಅವರ ಬಳಿಗೆ ಹೋಗಿ ವಿಚಾರಿಸಲಾಗಿ ಏನು ಗೊತ್ತಿಲ್ಲವೆಂದು ಹೇಳಿದರು. ಆಗ ಪೊಲೀಸರು ನಿಜ ಹೇಳುವಂತೆ ಪೊಲೀಸ್ ಭಾಷೆಯಲ್ಲಿ ಕೇಳಿದ್ದಾಗ ಅಲ್ಲಿ ಕಾಣುತ್ತಿರುವ ಮನೆಯಲ್ಲಿ ಐದು ದಿನಗಳ ಹಿಂದೆ ಗಂಡು ಮಗುವಿಗೆ ಮಹಿಳೆಯೊಬ್ಬರು ಜನ್ಮ ನೀಡಿದ್ದು ಈ ವಿಚಾರ ಇಲ್ಲಿನ ಏರಿಯಾದವರಿಗೆಲ್ಲಾ ತಿಳಿದಿದ್ದು ಈಗ ಮಗು ಅವರ ಬಳಿ ಇರದೆ ನಾಪತ್ತೆಯಾಗಿದೆ. ನಾವು ಈಗಾಗಲೇ ಪೊಲೀಸ್ ಠಾಣೆಗೆ ಫೋನ್ ಮಾಡಿ ಮಗುವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿರುವ ಬಗ್ಗೆ ಹೇಳಿದರು.




ಹೆತ್ತ ಮಹಾತಾಯಿ ನೀತು



ಮಗುವಿನ ಜನ್ಮದಾತ ರಾಘವೇಂದ್ರ

ಕೂಡಲೇ ಎಚ್ಚೆತ್ತುಕೊಂಡು ಪೊಲೀಸರು ಈ ವಿಷಯವನ್ನು ಹಿರಿಯ ಅಧಿಕಾರಿಗಳಿಗೆ ತಿಳಿಸಿದ್ದು ಮಕ್ಕಳ ಮಾರಾಟ ಜಾಲವನ್ನು ಪತ್ತೆಹಚ್ಚಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕನ್ನಿಕಾ ಸುಕ್ತಿವಾಲ್, ಎಎಸ್ಪಿಗಳಾದ ರವಿಶಂಕರ್ ಮತ್ತು ಜಗದೀಶ್, ಡಿವೈಎಸ್ಪಿ ನಾಗ್ತೆರವರ ಮಾರ್ಗದರ್ಶನದಲ್ಲಿ ಶ್ರೀನಿವಾಸಪುರ ಪೊಲೀಸ್ ಠಾಣೆಯ ಪಿಐ ಶಂಕರಾಚಾರಿರವರ ನೇತೃತ್ವದಲ್ಲಿ ಪಿಎಸ್‌ಐ ಜಯರಾಮ್, ಎಎಸ್ಪಿ ಸುಬ್ಬಾರೆಡ್ಡಿ, ಸಿಬ್ಬಂದಿ ವರ್ಗದವರಾದ ಆರ್. ಮಂಜುನಾಥ್, ರಾಮಚಂದ್ರ, ರಮೇಶ್, ರಾಜು, ಮಂಜುನಾಥ್, ಮುಂತಾದವರ ತಂಡವನ್ನು ರಚಿಲಾಗಿದ್ದು, ಮೊದಲಿಗೆ ಮಗುವಿನ ತಂದೆ, ತಾಯಿಯಾದ ನೀತು ಮತ್ತು ರಾಘವೇಂದ್ರವರನ್ನು ವಶಕ್ಕೆ ಪಡೆದು ವಿಚಾರಣೆ ಮಾಡಲಾಗಿ ನಮ್ಮಿಬ್ಬರಿಗೂ ಮದುವೆಯಾಗಿಲ್ಲ. ಗಂಡ ಮತ್ತು ಮಕ್ಕಳನ್ನು ಬಿಟ್ಟು ಬಂದಿರುವ ಅವಳ ಜೊತೆ ಲಿವಿಂಗ್ ಟುಗೆದರ್‌ನಲ್ಲಿ ಸಂಸಾರ ಮಾಡಿಕೊಂಡಿದ್ದು, ಬೇಡವಾದ ಮಗು ನಮ್ಮ ಪಾಲಿಗೆ ಬಂದಿದ್ದು, ಕಷ್ಟದಲ್ಲಿ ಜೀವನ ಸಾಗಿಸುತ್ತಿರುವ ನಾವು ಈಗಾಗಲೇ ಸಾಲದ ಬಾಧೆಯಿಂದ ನರಳುತ್ತಿದ್ದೇವೆ. ಈ ಬಡತನದಲ್ಲಿ ಮಗುವನ್ನು ಸಾಕಲಾಗದೆ ಬೇರೆಯವರಿಗೆ ಕೊಟ್ಟುಬಿಡೋಣವೆಂದು ತೀರ್ಮಾನಿಸಿ ಮಗುವನ್ನು ಯಾರಾದರೂ ತೆಗೆದುಕೊಳ್ಳುತ್ತಾರಾ ಎಂದು ಹುಡುಕಾಡಿದ್ದಾಗ ನಾರಾಯಣಸ್ವಾಮಿ ಎನ್ನುವವರು ಪರಿಚಯವಾಗಿ ಮಕ್ಕಳಿಲ್ಲದ ಗಂಡ, ಹೆಂಡತಿ ನನಗೆ ಗೊತ್ತಿದ್ದಾರೆ. ಅವರಿಗೆ ಗಂಡು ಮಗು ಬೇಕೆಂದು ಕೇಳಿದ್ದಾರೆ. ನಾನು ಮಗುವಿಗಾಗಿ ಹುಡುಕಾಡುತ್ತಿದ್ದೆ. ಈಗ ನೀವು ಸಿಕ್ಕಿದ್ದೀರಿ. ನಿಮ್ಮ ಮಗುವನ್ನು ಅವರಿಗೆ ಕೊಟ್ಟರೆ 2 ಲಕ್ಷ ರೂ. ಹಣ ಕೊಡುತ್ತಾರೆಂದು ಹೇಳಿದರು. ಅದರಂತೆ ನಾವು ನಮ್ಮ ಮಗುವನ್ನು ಬ್ರೋಕರ್ ನಾರಾಯಣಸ್ವಾಮಿಗೆ ಕೊಟ್ಟು ಅವರಿಂದ 2 ಲಕ್ಷ ಹಣವನ್ನು ತೆಗೆದುಕೊಂಡಿರುವುದಾಗಿ ಹೇಳಿದರು. ಇದರಿಂದ ಹೇಳಿಕೆ ಪಡೆದ ಪೊಲೀಸರು ಮಗುವನ್ನು ತೆಗೆದುಕೊಂಡು ಹೋಗಿರುವ ಬ್ರೋಕರ್ ನಾರಾಯಣಸ್ವಾಮಿಗಾಗಿ ಬಲೆ ಬೀಸಿದರು.



ಮಗು ಮಾರಾಟ ಬ್ರೋಕರ್ ನಾರಾಯಣಸ್ವಾಮಿ

ಶ್ರೀನಿವಾಸಪುರದ ಆಂಧ್ರದ ಗಡಿಯಲ್ಲಿ ಬ್ರೋಕರ್ ನಾರಾಯಣಸ್ವಾಮಿಯನ್ನು ಬಂಧಿಸಿದ ಪೊಲೀಸರು ಠಾಣೆಗೆ ಕರೆದುಕೊಂಡು ಹೋಗಿ ವಿಚಾರಣೆಗೆ ಒಳಪಡಿಸಲಾಗಿ ಚಿಂತಾಮಣಿ ನಗರದ ವಾಸಿ ಕೃಷ್ಣ ಮತ್ತು ಮಂಜುಳಾ ದಂಪತಿಗಳಿಗೆ ಗಂಡು ಮಗು

☞14



ಮಗು ಖರೀದಿದಾರರಾದ ರಾಘವೇಂದ್ರ ಹಾಗೂ ಮಂಜುಳಾ

# ಬಸವೇಶ್ವರ ನಗರದ ಉದ್ಯಮಿ ಮನೋಜ್ ಕಿಡ್ನಾಪ್ ಮತ್ತು ಲೇಡಿ ರೌಡಿ ಯಶಸ್ವಿನಿ ಅರೆಸ್ಟ್ ಹಿಂದಿನ ಅಸಲಿ ಸ್ಟೋರಿ...



ಯಶಸ್ವಿನಿ ಅಲಿಯಾಸ್ ಮುನಿಯಮ್ಮ

**ಕಳೆದ ವರ್ಷ ಆಗಸ್ಟ್ 26ರಂದು ಮೋದಿ ಆಸ್ಪತ್ರೆ ಬಳಿ ಉದ್ಯಮಿ ಮನೋಜ್‌ಕುಮಾರ್ ಕಿಡ್ನಾಪ್ ಘಟನೆ ನಡೆದಿತ್ತು. ಈ ಮನೋಜ್ ಸ್ಯಾಂಡಲ್‌ವುಡ್ ಡೈರೆಕ್ಟರ್ ನಂದ ಕಿಶೋರನಿಗೆ ರಾಜೇಶ್ ಅನ್ನೋ ಮಧ್ಯವರ್ತಿ ಮೂಲಕ 1.5 ಲಕ್ಷ ರೂ ಸಾಲ ಕೊಟ್ಟಿದ್ದರಂತೆ. ಈ ಹಣ ವಾಪಸ್ ಬರದಿದ್ದಕ್ಕೆ ಮನೋಜ್ ರಾಜೇಶ್ (ಅಪ್ಪಿ)ಗೆ ಬೈದಿದ್ದು, ಈ ರಾಜೇಶ ರೌಡಿ ಬೇಕರಿ ರಘು, ಯಶಸ್ವಿನಿ ಸಂಪರ್ಕಿಸಿದ್ದು, ರಘು ಗ್ಯಾಂಗ್ ಮನೋಜ್‌ರನ್ನು ಕಿಡ್ನಾಪ್ ಮಾಡಿ ಹೆದರಿಸಿ ಜ್ಞಾನಭಾರತಿ ಕಡೆ ಬಿಟ್ಟು ಹೋಗಿತ್ತು ಎಂದು ಬಸವೇಶ್ವರನಗರದಲ್ಲಿ ಪ್ರಕರಣ ದಾಖಲಾಗಿತ್ತು. ಈ ಹಿನ್ನಲೆಯಲ್ಲಿ ಪೊಲೀಸರು ರಾಜೇಶ್, ಶ್ರೀನಿವಾಸ್, ಲೋಕೇಶ್, ಸೋಮಯ್ಯ, ನವೀನ್, ಯುಕೇಶ್ ಎಂಬುವರನ್ನು ಲಾಕ್ ಮಾಡಿದ್ರು. ನಂತರ ನಡೆದ ಸುದೀರ್ಘ ವಿಚಾರಣೆಯಲ್ಲಿ ಈ ಕಿಡ್ನಾಪ್ ಕೇಸ್‌ನಲ್ಲಿ ರೌಡಿ ಬೇಕರಿ ರಘು ಮತ್ತು ಲೇಡಿ ರೌಡಿ ಯಶಸ್ವಿನಿ ಪಾತ್ರವಿರುವುದು ಖಚಿತವಾಗಿದೆ.....**

ಬೆಂಗಳೂರಿನಂತಹ ಮಹಾನಗರಗಳಲ್ಲಿ ರಿಯಲ್ ಎಸ್ಟೇಟ್ ಮತ್ತು ಹಣದ ವಹಿವಾಟುಗಳು ಕೇವಲ ವ್ಯವಹಾರವಾಗಿ ಉಳಿದಿಲ್ಲ; ಅವುಗಳ ಹಿಂದೆ ಭೂಗತ ಲೋಕದ ಕರಾಳ ನೆರಳು ಸದಾ ಚಲಿಸುತ್ತಿರುತ್ತದೆ! ವ್ಯವಹಾರಿಕ ಭಿನ್ನಾಭಿಪ್ರಾಯಗಳು ನ್ಯಾಯಾಲಯದ ಮೆಟ್ಟಿಲೇರುವ ಬದಲು ರೌಡಿಗಳ 'ಸೆಟಲ್ಮೆಂಟ್' ಅಖಾಡಕ್ಕೆ ಇಳಿಯುತ್ತಿರುವುದು ನಗರದ ಕಾನೂನು ಸುವ್ಯವಸ್ಥೆಗೆ ಬಿದ್ದ ದೊಡ್ಡ ಪೆಟ್ಟು ಎಂದೇ ಹೇಳಬಹುದು. ಮಹಾಲಕ್ಷ್ಮಿ ಲೇಔಟ್‌ನಲ್ಲಿ ನಡೆದಿದ್ದ ಉದ್ಯಮಿ ಮನೋಜ್ ಅಪಹರಣ ಪ್ರಕರಣವು ಮೇಲ್ನೋಟಕ್ಕೆ ಒಂದು ಸಾಮಾನ್ಯ ಕಿಡ್ನಾಪ್ ಎನಿಸಿದರೂ, ಅದರ ಆಳಕ್ಕೆ ಇಳಿದಾಗ ಬೆಂಗಳೂರಿನ ಅಪರಾಧ ಜಗತ್ತಿನ ವಿಕೃತ ಮುಖಗಳು ಅನಾವರಣಗೊಳ್ಳುತ್ತವೆ. ಈ ಪ್ರಕರಣದಲ್ಲಿ ಲೇಡಿ ರೌಡಿಶೀಟರ್ ಯಶಸ್ವಿನಿಗೌಡ ಅಲಿಯಾಸ್ ಮುನಿಯಮ್ಮ ಬಂಧನವು ಇಡೀ ಪ್ರಕರಣಕ್ಕೆ ಒಂದು ಸಂವೇದನಾಶೀಲ ತಿರುವು ನೀಡಿದೆ ಎಂದಷ್ಟೇ ವ್ಯಾಖ್ಯಾನಿಸಬಹುದು.

**'ಕೋಕಾ' (KCOCA) ಎಂಬ ಬ್ರಹ್ಮಾಸ್ತ್ರ....**

ಬೆಂಗಳೂರಿನ ಸಿಸಿಬಿ ಪೊಲೀಸ್ ಸಂಘಟಿತ ಅಪರಾಧ ನಿಯಂತ್ರಣ ದಳವು ಈ ಪ್ರಕರಣದಲ್ಲಿ ಯಶಸ್ವಿನಿ ಗೌಡಳನ್ನು ಬಂಧಿಸಿರುವುದು ಕೇವಲ ಒಂದು ಸಾಮಾನ್ಯ ಕ್ರಮವಲ್ಲ. ಪೊಲೀಸರು ಇಲ್ಲಿ 'ಕೋಕಾ' (**KCOCA - Karnataka Control of Organized Crime Act**) ಎಂಬ ಅತ್ಯಂತ ಕಠಿಣ ಕಾಯ್ದೆಯನ್ನು ಪ್ರಯೋಗಿಸಿದ್ದಾರೆ. ಸಿಸಿಬಿಯು ಈ ಕಾಯ್ದೆಯನ್ನು ಬಳಸಿದೆ ಎಂದರೆ ಇದರ ಅರ್ಥ ಸ್ಪಷ್ಟ ಇದು ಕೇವಲ ವೈಯಕ್ತಿಕ ದ್ವೇಷದ ಅಪಹರಣವಲ್ಲ, ಬದಲಾಗಿ ಒಂದು ವ್ಯವಸ್ಥಿತ ಕ್ರಿಮಿನಲ್ ಸಿಂಡಿಕೇಟ್‌ನ ಕೃತ್ಯ....



ಸಿಸಿಬಿ ಪೊಲೀಸ್ ಅರೆಸ್ಟ್ ಮಾಡಿದಾಗ

ಕಳೆದ ಸೆಪ್ಟೆಂಬರ್ 26ರಂದು ಸಂಜೆ ಶಂಕರ ಮಠ ಸಮೀಪ ಮೋದಿ ಆಸ್ಪತ್ರೆ ರಸ್ತೆಯಲ್ಲಿ ನಡೆದ ಈ ಕಿಡ್ನಾಪ್ ಕೃತ್ಯದಲ್ಲಿ ಯಶಸ್ವಿನಿ ಗೌಡಳ ನೇರ ಹಸ್ತಕ್ಷೇಪವಿರುವುದು ಸಾಬೀತಾಗಿದೆ! ಸಮಾಜದಲ್ಲಿ 'ಮಾಜಿ' ರೌಡಿಶೀಟರ್ ಎಂಬ ಹಣೆಪಟ್ಟಿಯೊಂದಿಗೆ ಓಡಾಡುತ್ತಿದ್ದರೂ, ತೆರೆಮರೆಯಲ್ಲಿ ಆಕೆ ಇಂದಿಗೂ ಸಂಘಟಿತ ಅಪರಾಧಗಳನ್ನು ನಿಯಂತ್ರಿಸುತ್ತಿದ್ದಾಳೆ ಎಂಬುದಕ್ಕೆ ಈ ಬಂಧನವೇ ಸಾಕ್ಷಿ... ಯಶಸ್ವಿನಿ ಗೌಡಳ ವಿರುದ್ಧ KCOCA ಕಾಯ್ದೆ ಅಡಿ ಕ್ರಮ ಕೈಗೊಂಡಿರುವುದು ಬೆಂಗಳೂರಿನ ಭೂಗತ ಜಾಲದ ವಿರುದ್ಧ ಪೊಲೀಸರು ಹೂಡಿರುವ ಬ್ರಹ್ಮಾಸ್ತ್ರ. ಇದು ಸಣ್ಣಪುಟ್ಟ ಕಿಡ್ನಾಪ್ ಪ್ರಕರಣವಲ್ಲ, ಬದಲಾಗಿ ವ್ಯವಸ್ಥಿತ ಸಂಘಟಿತ ಅಪರಾಧಕ್ಕೆ ಬಿದ್ದ ಕೊಡಲಿ ಪೆಟ್ಟು....



ರೌಡಿ ಬೇಕರಿ ರಘು

**ಮಂಡ್ಯದಲ್ಲಿ ನಡೆದಿದ್ದ ಹೈಡ್ರಾಮಾ....**

ಈ ಪ್ರಕರಣದ ಜಾಲ ಕೇವಲ ಬೆಂಗಳೂರಿಗೆ ಸೀಮಿತವಾಗಿಲ್ಲ, ಇದು ಮಂಡ್ಯದವರೆಗೂ ವ್ಯಾಪಿಸಿದೆ. ಈ ಕೃತ್ಯದ ಕಳೆಯನ್ನು ಅನುಷ್ಠಾನಕ್ಕೆ ತಂದವನು ಖತರ್ನಾಕ್ ರೌಡಿ ಸೈಕಲ್ ರವಿಯ ಮಾಜಿ ಶಿಷ್ಯ ರೌಡಿ ಬೇಕರಿ ರಘು! ಆತನನ್ನು ಬಂಧಿಸಲು ಪೊಲೀಸರು ಮಂಡ್ಯಕ್ಕೆ ಹೋದಾಗ ಅಲ್ಲಿ ನಡೆದ ಘಟನೆಗಳು ಯಶಸ್ವಿನಿಗೌಡಳ ಉದ್ಧಟತನಕ್ಕೆ ಹಿಡಿದ ಕೈಗನ್ನಡಿಯಾಗಿದ್ದವು. ಪೊಲೀಸರು ಬೇಕರಿ ರಘುವನ್ನು ವಶಕ್ಕೆ ಪಡೆಯಲು ಯತ್ನಿಸಿದಾಗ ಯಶಸ್ವಿನಿಗೌಡ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿ ಆತನ ರಕ್ಷಣೆಗೆ ನಿಂತಿದ್ದಳು ಎಂಬುದು ವಿಲಕ್ಷಣ ಬೆಳವಣಿಗೆ. ಪೊಲೀಸರನ್ನೇ ಅವಮಾನಿಸಿ ಎದುರು ಹಾಕಿಕೊಂಡಿದ್ದಳು ಯಶಸ್ವಿನಿ ಅಲಿಯಾಸ್ ಮುನಿಯಮ್ಮ.

ಆ ಘಟನೆಗೆ ಸಂಬಂಧಿಸಿದಂತೆ ಆಕೆಯ ವಿರುದ್ಧ ಮಂಡ್ಯ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದೆ. ಅಪರಾಧ ಜಗತ್ತಿನ ಈ ಕನೆಕ್ಷನ್‌ಗಳು ಎಷ್ಟು ಗಟ್ಟಿಯಾಗಿವೆ ಎಂದರೆ, ಕ್ರಿಮಿನಲ್‌ಗಳು ಜಿಲ್ಲೆಗಳ ಗಡಿ ಮೀರಿ ಪರಸ್ಪರ ಸಹಕರಿಸುತ್ತಿದ್ದಾರೆ ಎಂಬುದು ಸಾಬೀತಾಗಿದೆ. ಪೊಲೀಸರ ಮೇಲೆ ಕೈ ಮಾಡುವ ಅಥವಾ ಅವರ ಕೆಲಸಕ್ಕೆ ಅಡ್ಡಿಪಡಿಸುವ ಈ ಪ್ರವೃತ್ತಿ ವ್ಯವಸ್ಥೆಗೆ ಎಸೆಯುವ ನೇರ ಸವಾಲಾಗಿದೆ ಅಲ್ಲವೇ.

**ಬರೀ 1 ಲಕ್ಷಕ್ಕೆ ರೌಡಿಗಳ ರೇಡ್ ಸೆಟಲ್ಮೆಂಟ್...**

ಈ ಇಡೀ ಹೈಡ್ರಾಮಾದ ಹಿಂದಿರುವ ಮೊತ್ತ

☞14



ನಂದ ಕಿಶೋರ್



ರಾಜೇಶ್

## ರೌಡೀಸ್ ಜೊತೆ ರೀಲ್ಸ್ ಮತ್ತು ಸಿನಿಮಾ ಶೋಕಿ...!

ಯಶಸ್ವಿನಿ ಅಲಿಯಾಸ್ ಮುನಿಯಮ್ಮ ಮೆಜೆಸ್ಟಿಕ್ ನ ಪ್ಯಾರಿಸ್ ಕಾರ್ನರ್ ಪ್ರಾಡಕ್ಟ್ ಅನ್ನೋದು ಹಳಬರಿಗೆ ಚೆನ್ನಾಗಿ ಗೊತ್ತು! ಈಕೆ ಬಡ್ಡಿ ವ್ಯವಹಾರದ ಹೆಂಗಸು. ಈ ಹಿನ್ನಲೆಯಲ್ಲಿ ಇವಳ ವಿರುದ್ಧ ವಿವಿಧ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದಾವೆ. ಇವಳ ಗಂಡ ಮಹೇಶ್ ಪೊಲೀಸ್ ಅಧಿಕಾರಿಯೊಬ್ಬರ ರಕ್ತ ಸಂಬಂಧಿ. ದುರದೃಷ್ಟವಶಾತ್ ರೌಡಿ ಶೀಟರ್ ಆಗಿದ್ದವನು ಕಾಲ ಕ್ರಮೇಣ ಬದಲಾಗಿ ಪೊಲೀಸ್ ಇಲಾಖೆಗೆ ರೆಸ್ಪೆಕ್ಟ್ ಕೊಟ್ಟು ರೌಡಿಸಂ ಬಿಟ್ಟು ಇವಳಿಂದ ದೂರವಾಗಿದ್ದಾನೆ....



ಇಷ್ಟಾದರೂ ಯಶಸ್ವಿನಿ ಬುದ್ಧಿ ಕಲಿಯಲಿಲ್ಲ... ಗಂಡಿಗಿಂತ ತಾನೇನು ಕಡಿಮೆ ಎಂಬಂತೆ ಮೆರೆಯಲು ಶುರು ಮಾಡಿದಳು. ಈ ನಡುವೇ ಇವಳ 'ರೌಡಿ' ಆಕ್ಟಿವಿಟಿ ಜಾಸ್ತಿ ಆಗಿತ್ತು. ಅರಕೆರೆ ಲಂಬೂ ಕೃಷ್ಣನ ತಲೆ ತೆಗೆದು ವಿಕೆಟ್ ತೆಗೆಯೋಕೆ ಅರಕೆರೆ ರೌಡಿ ಗಜ್ಜಿ ವೆಂಕಿ ಹತ್ರ ಸುಫಾರಿ ತಗೊಂಡಿದ್ಲೂ ಅನ್ನೋ ವದಂತಿಯಿದೆ! ಈ ಮಾಹಿತಿ ಪಸರ್ ಆಗಿ ಸಿಸಿಬಿ ಕಿವಿ ತಲುಪಿತ್ತು ಎಂಬ ಮಾಹಿತಿ ಇದೆ. ಬಡ್ಡಿ ವ್ಯವಹಾರದ ಹೆಂಗಸು ಯಶಸ್ವಿನಿಗೆ ಅದು ಹೇಗೋ ಸಿನಿಮಾ ಲೋಕದ ನಂಟು ಅಂಟಿಕೊಂಡಿದೆ! ದರ್ಶನ್, ಶ್ರೀನಗರ ಕಿಟ್ಟಿ, ಇನ್ನೂ ಮುಂತಾದ ನಟರ ಸ್ನೇಹ ಮಾಡಿಕೊಂಡಿದ್ದಾಳೆ.

'ಸೂರಿಯಣ್ಣ' ಎಂಬ ಕನ್ನಡ ಮೂವೀಲಿ ಲೇಡಿ ಡಾನ್ ಪಾತ್ರ ನಿರ್ವಹಿಸಿದ್ದಾಳೆ! ಈ ಸಿನಿಮಾದಲ್ಲಿ ಇವಳನ್ನ ಮಾಸ್ ವಿಲನ್ ರವಿ ಕಾಳೆ ಹೊಡೆದಾಕ್ತಾರೆ ಎನ್ನಲಾಗಿದೆ. ಬರೋ 20ನೇ ತಾರೀಖು ಮೂವೀ ರಿಲೀಸ್ ಆಗ್ತಿದೆ. ಇದರ ಮಧ್ಯೆ ಪ್ರಚಾರದ ಗಿಮಿಕ್ ಭಾಗವಾಗಿಯೋ ಏನೋ, ಸೂರಿ ಜೊತೆ ಜಗಳ ಮಾಡಿ ಅದೆಲ್ಲ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿತ್ತು. 'ಬಲರಾಮನ ದಿನಗಳು' ಚಿತ್ರದಲ್ಲಿ ಹತರೌಡಿ ಶ್ರೀರಾಮ್ ಪುರಂ ಕಿಟ್ಟಿ ತಾಯಿಯ ಪಾತ್ರ ಮಾಡಿದ್ದಾಳಂತೆ. (ಬಿಗ್ ಬಾಸ್ ವಿನಯ್ ಗೌಡ ಕಿಟ್ಟಿ ಪಾತ್ರ ನಿರ್ವಹಿಸಿದ್ದಾರೆ) ಇನ್ನೂ ಸೂಪರ್ ಸ್ಟಾರ್ ವಿಜಯ್ ಸೇತುಪತಿಯ ಒಂದು ತಮಿಳು ಸಿನಿಮಾದಲ್ಲೂ ಲೇಡಿ ವಿಲನ್ ಆಗಿ ನಟಿಸಲು ಮಾತುಕತೆ ನಡೆದಿತ್ತು ಎಂಬ ಸುದ್ದಿ ಇದೆ. ರವಿ ಬೆಳಗೆರೆ ಅಳಿಯ ಶ್ರೀನಗರ ಕಿಟ್ಟಿ ಜೊತೆ ಸಿನಿಮಾ ಮಾಡುವ ಚಾನ್ಸ್ ಇದೆ.



ಈಕೆಗೆ 50 ವರ್ಷ ಆಗಿರಬಹುದು. ಮಗನಿಗೆ ಮದುವೆ ಆಗಿ ಸೊಸೆ ಬಂದಿದಾಳಂತೆ. ಗೌಡತಿ ಹೇಗಿರಬೇಕು?! ಈಕೆ ತುಂಬಾ ಕುಡಿಯುತ್ತಾಳೆ ಮತ್ತು ಚೈನ್ ಸ್ಮೋಕರ್!! ಹಿಡಿ ಪುಡಿ ರೌಡಿಗಳನ್ನೆಲ್ಲ ಗುಡ್ಡೆ ಹಾಕೊಂಡು ರೀಲ್ಸ್ ಮಾಡ್ತಾಳೆ. ಇದೆಲ್ಲ ಬೇಕಾ??! ಸದ್ಯ, ವಿಜಯ್ ಸೇತುಪತಿ ಜೊತೆಗೆ ವಿಲನ್ ಆಗಿ ನಟಿಸಲು ಮಾತುಕತೆ ನಡೀತಿತ್ತಂತೆ. ಕೋಕಾ ಆಕ್ಟ್‌ನಲ್ಲಿ ಅರೆಸ್ಟ್ ಆಗಿ ಜೈಲು ಸೇರಿದ್ದಾಳೆ... ಎಂಥ ಪರಿಸ್ಥಿತಿ ತಂದುಕೊಂಡಳು ನೋಡಿ!! ದುರಾಸೆಯೇ ದುಃಖಕ್ಕೆ ಮೂಲ... ಹೇಗೋ ಸೋಷಿಯಲ್ ಮೀಡಿಯಾ ದಲ್ಲಿ ರೀಲ್ಸ್ ಮಾಡ್ಕೊಂಡು ಟೈಮ್ ಪಾಸ್ ಮಾಡ್ತಿದ್ಲು. ರಿಯಲ್ ರೌಡಿಗಳ ಗುಡ್ಡೆ ಹಾಕೊಂಡು ರೀಲ್ಸ್ ಮಾಡುತ್ತಿದ್ದ ಲೇಡಿ ರೌಡಿ ಯಶಸ್ವಿನಿಗೀಗ ಪರಪ್ಪನ ಅಗ್ರಹಾರದಲ್ಲಿ ಉಪವಾಸವಿರೋ ದುಸ್ಥಿತಿ ಬಂದೊದಗಿದೆ... ☯

# ಲವರ್‌ಗಾಗಿ ಗಂಡನನ್ನೇ ಚಟ್ಟ ಕಟ್ಟಿದ್ದ ಪತ್ನಿ!



ಕೊಲೆಯಾದ ಅಶೋಕ್



ಆರೋಪಿ ಪುಷ್ಪಾ

**ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲೂಕಿನ ಸಿದ್ದೇನಹಳ್ಳಿ ಗ್ರಾಮದಲ್ಲಿ ನಡೆದಿರುವ ಈ ಘಟನೆ, ಸಂಬಂಧಗಳು ಹೇಗೆ ಅಪರಾಧದ ರೂಪ ತಾಳಬಹುದು ಎಂಬುದಕ್ಕೆ ಬೆಚ್ಚಿಬೀಳಿಸುವ ಉದಾಹರಣೆಯಾಗಿದೆ. ಹೊರಗೆ ನೋಡಲು ಇದು ಒಂದು ಸಾಮಾನ್ಯ ರಸ್ತೆ ಅಪಘಾತದಂತೆ ಕಂಡಿದ್ದರೂ, ಅದರ ಒಳಗೊಳಗೆ ಮರೆತಿದ್ದದ್ದು ಪೂರ್ವಯೋಜಿತ ಕೊಲೆ, ವಂಚನೆ ಮತ್ತು ಹೈಡ್ರಾಮಾದ ಭೀಕರ ಕಥೆ. ಪ್ರಿಯಕರನಿಗಾಗಿ ತನ್ನದೇ ಪತಿಯನ್ನು ಕೊಲೆ ಮಾಡಿ, ಆತನ ಶವದ ಎದುರೇ ನಿಂತು ಕಣ್ಣೀರು ಸುರಿಸುತ್ತಿದ್ದ ಮಹಿಳೆಯ ನಾಟಕೀಯ ವರ್ತನೆ, ಇದೀಗ ಪೊಲೀಸ್ ತನಿಖೆಯ ಮೂಲಕ ಸಂಪೂರ್ಣವಾಗಿ ಬಹಿರಂಗವಾಗಿದೆ.**

## ಗಂಡನ ಶವದೆದುರು ಹೈಡ್ರಾಮಾ ಮಾಡಿದ್ದ ಸುಪ್ನಾತಿ!

ಜನವರಿ 24ರಂದು, ಸಿದ್ದೇನಹಳ್ಳಿ ಗ್ರಾಮದ ಸಮೀಪದ ರಸ್ತೆಯ ತಿರುವಿನಲ್ಲಿ 40 ವರ್ಷದ ಅಶೋಕ್ ಎಂಬ ವ್ಯಕ್ತಿಯ ಮೃತದೇಹ ಪತ್ತೆಯಾಗಿತ್ತು. ಸ್ಥಳೀಯರು ಮೊದಲು ಕಂಡಾಗ, ಇದು ರಸ್ತೆ ಅಪಘಾತದಿಂದ ಸಂಭವಿಸಿದ ಸಾವು ಎಂಬ ಅಭಿಪ್ರಾಯ ಮೂಡಿತ್ತು. ರಸ್ತೆಯ ತಿರುವು, ವಾಹನ ಸಂಚಾರದ ಸಾಧ್ಯತೆ ಮತ್ತು ಶವದ ಸ್ಥಿತಿಯನ್ನು ಗಮನಿಸಿದಾಗ, ಅಪಘಾತವೆಂದು ನಂಬುವಂತೆ ಮಾಡುವ ಎಲ್ಲ ಅಂಶಗಳೂ ಇದ್ದವು. ಅಶೋಕ್ ಪತ್ನಿ ಪುಷ್ಪಾ ಸಹ ಸ್ಥಳಕ್ಕೆ ಆಗಮಿಸಿ, ಪತಿಯ ಶವದ ಬಳಿ ಅಳುತ್ತಾ, ಅತ್ತಿಂದಿತ್ತ ಓಡಾಡುತ್ತಾ, ಸಂಬಂಧಿಕರು ಮತ್ತು ಗ್ರಾಮಸ್ಥರ ಮುಂದೆ ಭಾವನಾತ್ಮಕ ಹೈಡ್ರಾಮಾ ನಡೆಸಿದ್ದಳು. ಆಕೆಯ ವರ್ತನೆಯಿಂದ ಮೊದಲ ಹಂತದಲ್ಲಿ ಯಾರಿಗೂ ಅನುಮಾನ ಹುಟ್ಟಿರಲಿಲ್ಲ.




ಅಶೋಕ್‌ನ ಮೃತದೇಹ

ಆದರೆ, ಘಟನೆಯ ಕೆಲವು ವಿವರಗಳು ಗ್ರಾಮಸ್ಥರ ಗಮನಕ್ಕೆ ಬಂದಂತೆ, ಪ್ರಕರಣದ ಮೇಲೆ ಸಂಶಯದ ನೆರಳು ಬೀಳತೊಡಗಿತು. ಶವದ ಮೇಲೆ ಕಂಡ ಗಾಯಗಳ ಸ್ವರೂಪ, ಅಪಘಾತಕ್ಕೆ ಹೊಂದಿಕೆಯಾಗದ ಕೆಲವು ಗುರುತುಗಳು ಮತ್ತು ಅಶೋಕ್‌ನ ಸಾವಿಗೆ ಮುನ್ನ ನಡೆದಿರುವ ಘಟನೆಗಳ ಬಗ್ಗೆ ಕೇಳಿಬಂದ ಮಾತುಗಳು, ಗ್ರಾಮಸ್ಥರಲ್ಲಿ ಅನುಮಾನ ಹುಟ್ಟಿಸಿದವು. ಈ ಹಿನ್ನೆಲೆಯಲ್ಲಿ ಅವರು ಸೂಲಿಬೆಲೆ ಪೊಲೀಸರಿಗೆ ಮಾಹಿತಿ ನೀಡಿದರು. ಮೊದಲಿಗೆ ಅಪಘಾತ ಪ್ರಕರಣವೆಂದು ದಾಖಲಾಗಿದ್ದ ಈ ಸಾವು, ಪೊಲೀಸರ ತನಿಖೆ ಮುಂದುವರಿದಂತೆ ಕ್ರಮೇಣ ಭೀಕರ ಕೊಲೆಯ ರೂಪವನ್ನು ತಾಳತೊಡಗಿತು.

ಪೊಲೀಸರು ಸುದೀರ್ಘವಾಗಿ ತನಿಖೆ ನಡೆಸಿದಾಗ, ಅಶೋಕ್‌ನ ಪತ್ನಿ ಪುಷ್ಪಾ ಮತ್ತು ಆಕೆಯ ಪ್ರಿಯಕರ ದೇವರಾಜ್ ನಡುವಿನ ಅಕ್ರಮ ಸಂಬಂಧವೇ ಈ ಅಪರಾಧದ ಹಿನ್ನಲೆ ಎಂಬುದು ಬೆಳಕಿಗೆ ಬಂತು. ಪುಷ್ಪಾ ಮತ್ತು ದೇವರಾಜ್ ಹಲವು ವರ್ಷಗಳಿಂದ ಪರಸ್ಪರ ಸಂಬಂಧ ಹೊಂದಿದ್ದು, ಅಶೋಕ್ ಅವರ ಸಂಬಂಧಕ್ಕೆ ಅಡ್ಡಿಯಾಗಿದ್ದನೆಂಬ ಕಾರಣದಿಂದ ಅವನನ್ನು ದಾರಿ ತಪ್ಪಿಸಲು ಸಂಚು ರೂಪಿಸಿದ್ದರು ಎಂಬ ಮಾಹಿತಿ ಪೊಲೀಸರಿಗೆ ಲಭಿಸಿತು. ಈ ಸಂಚಿನಲ್ಲಿ ದೇವರಾಜ್ ಜೊತೆಗೆ ಮುನಿಂದ್ರ ಮತ್ತು ಸಿದ್ದಪ್ಪ ಎಂಬ ಇಬ್ಬರು ಸಹಚರರೂ ಸೇರಿದ್ದರು.

ಪೊಲೀಸರ ತನಿಖೆಯ ಪ್ರಕಾರ, ಜನವರಿ 24ರಂದು ಎಣ್ಣೆ ಪಾರ್ಟಿ ಮಾಡುವ ನೆಪದಲ್ಲಿ ಪುಷ್ಪಾ ತನ್ನ ಪತಿ ಅಶೋಕ್‌ನನ್ನು ಕರೆದುಕೊಂಡು ಹೋಗಿದ್ದಳು. ಸ್ನೇಹಿತರೊಂದಿಗೆ ಮದ್ಯಪಾನ ಮಾಡಲು ಹೊರಟಿದ್ದೇನೆ ಎಂಬ ನಂಬಿಕೆಯಿಂದ ಅಶೋಕ್ ಆಕೆಯೊಂದಿಗೆ ತೆರಳಿದ್ದ. ಆದರೆ ಇದು ಅವನ ಜೀವನದ ಕೊನೆಯ ಪ್ರಯಾಣವಾಗಲಿದೆ ಎಂಬುದನ್ನು ಆತ ಊಹಿಸಿರಲಿಲ್ಲ. ಎಲ್ಲರೂ ಸೇರಿ ಆತನನ್ನು ಗ್ರಾಮದ ಹೊರವಲಯದ ಕೆರೆಯ ಸಮೀಪಕ್ಕೆ ಕರೆದೊಯ್ದು, ಅಲ್ಲಿ ಕಬ್ಬಿಣದ ರಾಡ್‌ನಿಂದ ತಲೆ ಹಾಗೂ ದೇಹದ ಮೇಲೆ ಮಾರಣಾಂತಿಕವಾಗಿ ಹೊಡೆದು ಹತ್ಯೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೊಲೆ ನಡೆಸಿದ ಬಳಿಕ, ಆರೋಪಿಗಳು ತಮ್ಮ ಅಪರಾಧವನ್ನು ಮುಚ್ಚಿಹಾಕಲು ಮತ್ತೊಂದು ಸಂಚು ರೂಪಿಸಿದ್ದರು. ಅಶೋಕ್‌ನ ಶವವನ್ನು ರಾತ್ರಿ ವೇಳೆಯಲ್ಲಿ ರಸ್ತೆಯ ತಿರುವಿನ ಬಳಿ ಬಿಸಾಡಿ, ವಾಹನ ಅಪಘಾತದಂತೆ ಪ್ರಕರಣವನ್ನು ಬಿಂಬಿಸಲು ಯತ್ನಿಸಲಾಯಿತು. ಶವದ ಸ್ಥಿತಿಯನ್ನು ಅಪಘಾತದಂತೆ ತೋರಿಸುವ ಸಲುವಾಗಿ ಕೆಲವೊಂದು ಗುರುತುಗಳನ್ನು ಬದಲಾಯಿಸಲು ಸಹ ಪ್ರಯತ್ನ ನಡೆಸಲಾಗಿದೆ ಎಂಬ ಅನುಮಾನವೂ ಪೊಲೀಸರಿಗೆ ವ್ಯಕ್ತವಾಗಿದೆ. ಇದಾದ ಬಳಿಕ, ಪುಷ್ಪಾ ಪತಿಯ ಸಾವಿನ ಸುದ್ದಿ ಕೇಳಿದಂತೆ ವರ್ತಿಸಿ, ಸಾರ್ವಜನಿಕವಾಗಿ ಅಳುತ್ತಾ, ತಾನೊಬ್ಬ ದುಃಖಿತ ಪತ್ನಿಯಂತೆ ನಟಿಸಿದ್ದಳು.



ಆರೋಪಿ ದೇವರಾಜ್

ಪತಿಯ ಶವದ ಎದುರು ನಿಂತು ಪುಷ್ಪಾ ನಡೆಸಿದ ಹೈಡ್ರಾಮಾ, ಮೊದಲಿಗೆ ಎಲ್ಲರ ಮನಸ್ಸನ್ನೂ ಕರಗಿಸಿತ್ತು. ಆದರೆ, ಪೊಲೀಸರ ತನಿಖೆ ಮುಂದುವರಿದಂತೆ, ಆಕೆಯ ಪ್ರತಿಯೊಂದು ನಡೆ, ಮಾತು ಮತ್ತು ವರ್ತನೆಯೂ ಅನುಮಾನಾಸ್ಪದವಾಗಿ ಕಂಡುಬಂದಿತು. ಮೊಬೈಲ್ ಕರೆ ದಾಖಲೆಗಳು, ಆರೋಪಿಗಳ ನಡುವಿನ ಸಂಪರ್ಕ, ಹಾಗೂ ಕೊಲೆ ನಡೆದ ದಿನದ ಚಲನವಲನಗಳ ಕುರಿತು ಸಂಗ್ರಹಿಸಿದ ಮಾಹಿತಿ, ಪ್ರಕರಣವನ್ನು ಸಂಪೂರ್ಣವಾಗಿ ತಿರುವುಮಾಡಿತು. ಕೊನೆಗೆ ಇದು ಅಪಘಾತವಲ್ಲ, ಪೂರ್ವಯೋಜಿತ ಕೊಲೆ ಎಂಬುದು ಸ್ಪಷ್ಟವಾಯಿತು.

ಸೂಲಿಬೆಲೆ ಪೊಲೀಸರು ಸಿಕ್ಕ ಮಾಹಿತಿಯ ಆಧಾರದಲ್ಲಿ ಪುಷ್ಪಾ, ಆಕೆಯ ಪ್ರಿಯಕರ ದೇವರಾಜ್ ಹಾಗೂ ಸಹಚರರಾದ ಮುನಿಂದ್ರ ಮತ್ತು ಸಿದ್ದಪ್ಪರನ್ನು ಬಂಧಿಸಿದರು. ವಿಚಾರಣೆ ವೇಳೆ ಆರೋಪಿಗಳು ಕೊಲೆಯ ಬಗ್ಗೆ ಒಪ್ಪಿಕೊಂಡಿದ್ದಾರೆ ಎನ್ನಲಾಗಿದೆ. ಪ್ರಿಯಕರನಿಗಾಗಿ ಪತ್ನಿಯೇ ಪತಿಯನ್ನು ಹತ್ಯೆ ಮಾಡಿರುವ ಈ ಘಟನೆ, ಗ್ರಾಮದಲ್ಲಿ ಮಾತ್ರವಲ್ಲದೆ ಇಡೀ ಜಿಲ್ಲೆಯಲ್ಲಿ ಸಂಚಲನ ಮೂಡಿಸಿದೆ. ಗ್ರಾಮಸ್ಥರು ಈ ಘಟನೆಯಿಂದ ಆಘಾತಕ್ಕೊಳಗಾಗಿದ್ದು, ಸಂಬಂಧಗಳ ಮೇಲಿನ ನಂಬಿಕೆ ಪ್ರಶ್ನಾರ್ಹವಾಗುತ್ತಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

ಪ್ರಸ್ತುತ, ನಾಲ್ವರು ಆರೋಪಿಗಳು ಪೊಲೀಸ್ ಕಸ್ಟಡಿಯಲ್ಲಿ ಇದ್ದು, ಪ್ರಕರಣಕ್ಕೆ ಸಂಬಂಧಿಸಿದ ಇನ್ನಷ್ಟು ಮಾಹಿತಿ ಸಂಗ್ರಹಿಸುವ ಕಾರ್ಯ ಮುಂದುವರಿದಿದೆ. ಕೊಲೆಗೆ ಬಳಸಿದ ಆಯುಧ, ಘಟನೆಯ ಸಂಪೂರ್ಣ ಟೈಮ್‌ಲೈನ್ ಹಾಗೂ ಇತರ ಸಾಧ್ಯತೆಯ ಅಂಶಗಳನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ. ಪ್ರೀತಿ, ಮೋಸ ಮತ್ತು ಕ್ರೂರತೆಯ ಸಂಗಮವಾಗಿ ಮೂಡಿಬಂದಿರುವ ಈ ಪ್ರಕರಣ, ಸಮಾಜಕ್ಕೆ ಎಚ್ಚರಿಕೆಯ ಗಂಟೆಯಾಗಿ ಪರಿಣಮಿಸಿದೆ. ಮೇಲ್ನೋಟಕ್ಕೆ ಸರಳವಾಗಿ ಕಾಣುವ ಘಟನೆಗಳ ಹಿಂದೆಯೂ ಎಂತಹ ಭೀಕರ ಸತ್ಯಗಳು ಅಡಗಿರಬಹುದು ಎಂಬುದಕ್ಕೆ ಈ ಪ್ರಕರಣ ಜೀವಂತ ಸಾಕ್ಷಿಯಾಗಿದೆ. ☯

# ಸಂಗೀತ ನಿರ್ದೇಶಕ ಎಸ್.ಪಿ.ವೆಂಕಟೇಶ್ (ಸಂಗೀತ ರಾಜ) ಇನ್ನಿಲ್ಲ....

ಹೃದಯ ಸಮುದ್ರ ಕಲಕಿ ಹೊತ್ತಿದೆ ದ್ವೇಷದ ಬೆಂಕಿ... ಎಂಬ ಅಶ್ವಮೇಧ ಚಿತ್ರದ ಹಾಡನ್ನು ಮರೆತವರುಂಟೆ! ಅಣ್ಣಾವ್ರ ಕಂಠ ಸಿರಿಯಲ್ಲಿ ಮೂಡಿಬಂದಿದ್ದ ಈ ಹಾಡನ್ನು ಇಂದಿಗೂ ಆರ್ಕೆಸ್ಟ್ರಾಗಳಲ್ಲಿ ಕಿವಿ ತುಂಬಿಸಿಕೊಳ್ಳಬಹುದು. ಅದೇ ರೀತಿ, ಶರವೇಗದ ಸರದಾರ ಚಿತ್ರದ, ಕನ್ನಡ ನಾಡಿನ ರನ್ನದ ರತುನ ಕೇಳೋ ಕಥೆಯನ್ನ ನಾ ಹೇಳೋ ಕಥೆಯನ್ನ... ಎಂಬ ಹಾಡೂ ಕೂಡ ಅಲ್ಲಲ್ಲಿ ರಿಂಗಣಿಸುತ್ತದೆ.ಇಂಥ ಅದ್ಭುತ ಗೀತೆಗಳಿಗೆ ಸಂಗೀತ ಸಂಯೋಜನೆ ಮಾಡಿದವರು ಎಸ್ಪಿ ವೆಂಕಟೇಶ್ @ ಸಂಗೀತ ರಾಜ. ಇವರು ಮಲೆಯಾಳಮ್



ಚಿತ್ರರಂಗದಲ್ಲಿ ಹೆಚ್ಚು ಮಿಂಚಿದವರು. ಕನ್ನಡದಲ್ಲಿ ಐದಾರು ಸಿನಿಮಾಗಳಿಗೆ ಸಂಗೀತ ನೀಡಿದ್ದಾರೆ. ಎಲ್ಲವೂ ಸೂಪರ್ ಹಿಟ್. ಪಂಚಮವೇದ, ತ್ರಿಶೂಲ, ಪ್ರೇಮ ಯುದ್ಧ.... ಸೇರಿದಂತೆ ಹಲವು ಕನ್ನಡ ಚಿತ್ರಗಳಿಗೆ ಸಂಗೀತ ನೀಡುವುದರೊಂದಿಗೆ 1980ರ ದಶಕದುದ್ದಕ್ಕೂ ಕನ್ನಡ ಚಿತ್ರ ಸಂಗೀತ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದರು. ಮೊನ್ನೆ ಅನಾರೋಗ್ಯವಾಗಿ ಆಸ್ಪತ್ರೆ ಸೇರಿದವರು ಮತ್ತೆ ಜೀವಂತವಾಗಿ ಹೊರಬರಲಿಲ್ಲ. ಮರಳಿಬಾರದೂರಿಗೆ ಪಯಣಿಸಿರೋ ಸಂಗೀತರಾಜನಿಗೆ ಶಾಂತಿ ಕೋರೋಣ... ☯



**ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲೂಕಿನ ಬೊಮ್ಮನಹಳ್ಳಿ ಪಂಡರಹಳ್ಳಿ ಕ್ಯಾಂಪ್ ಪ್ರದೇಶದಲ್ಲಿ ನಡೆದ ಯುವತಿ ಚಂದನಾಬಾಯಿಯ ಭೀಕರ ಸಾವು ಇಡೀ ತಾಲ್ಲೂಕನ್ನೇ ಬೆಚ್ಚಿಬೀಳಿಸಿದೆ. ಪ್ರೀತಿ, ಮದುವೆ, ಸಂಸಾರವೆಲ್ಲವೂ ಸಂಶಯ ಮತ್ತು ಹಿಂಸೆಯೊಳಗೆ ಕುಸಿದು, ಕೊನೆಗೆ ಪತಿಯೇ ಪತ್ನಿಯ ಕುತ್ತಿಗೆ ಹಿಸುಕಿ ಕೊಂದಿರುವ ಶಂಕೆಯೊಂದಿಗೆ ಪ್ರಕರಣ ದಾಖಲಾಗಿದೆ. 'ಕಾವ್ಯ' ಎಂಬ ಹೆಸರಿನ ಹಚ್ಚೆ ವಿಚಾರದಿಂದ ಆರಂಭವಾದ ದಾಂಪತ್ಯ ಕಲಹ, ಎರಡು ಮಕ್ಕಳ ತಾಯಿಯಾದ ಚಂದನಾಬಾಯಿಯ ಜೀವವನ್ನೇ ಕಿತ್ತುಕೊಂಡಿರುವುದು ಭಾರೀ ಆಕ್ರೋಶಕ್ಕೆ ಕಾರಣವಾಗಿದೆ.**

# ಕಾವ್ಯಾಗೋಸ್ಕರ ಚಂದನಾಳ ಹತ್ಯೆ? ಪತಿಯೇ ಪತ್ನಿಯ ಕುತ್ತಿಗೆ ಹಿಸುಕಿ ಕೊಂದ!



**ಶಿವಮೊಗ್ಗ**

✍ ಸಂತೋಷಕುಮಾರ

ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲೂಕಿನ ಬೊಮ್ಮನಹಳ್ಳಿ ಪಂಡರಹಳ್ಳಿ ಕ್ಯಾಂಪ್ ಪ್ರದೇಶದಲ್ಲಿ ನಡೆದ ಈ ಭೀಕರ ಘಟನೆ ಮಾನವ ಸಂಬಂಧಗಳೊಳಗಿನ ನಂಬಿಕೆ, ಪ್ರೀತಿ ಮತ್ತು ಸಂಶಯ ಹೇಗೆ ಕೊನೆಗೆ ರಕ್ತಪಾತಕ್ಕೆ ಕಾರಣವಾಗುತ್ತದೆ ಎಂಬುದಕ್ಕೆ ಜೀವಂತ ಉದಾಹರಣೆಯಾಗಿದೆ. ಬಡ ಕೂಲಿ ಕಾರ್ಮಿಕ ಕುಟುಂಬದಲ್ಲಿ ಜನಿಸಿದ, ಓದಿ ಜೀವನದಲ್ಲಿ ಮುಂದೆ ಬರಬೇಕೆಂಬ ಕನಸು ಕಂಡಿದ್ದ ಯುವತಿ ಚಂದನಾಬಾಯಿ ಕೊನೆಗೆ ತನ್ನದೇ ಪತಿಯ ಕೈಯಲ್ಲಿ ಪ್ರಾಣ ಕಳೆದುಕೊಂಡಿರುವುದು ಇಡೀ ಗ್ರಾಮವನ್ನೇ ಬೆಚ್ಚಿಬೀಳಿಸಿದೆ. ಮೃತ ಚಂದನಾಬಾಯಿ (23) ಗೀತಾಬಾಯಿ ಮತ್ತು ಸೇವಾನಾಯ್ಕ ದಂಪತಿಯ ಹಿರಿಯ ಮಗಳಾಗಿದ್ದು, ತಮ್ಮ ತಂಗಿಯರಾದ ಕಾವ್ಯ (19) ಮತ್ತು ಸ್ವಾತಿ (9) ಜೊತೆ ಭದ್ರಾವತಿ ತಾಲೂಕಿನ ಬೊಮ್ಮನಹಳ್ಳಿ ಗ್ರಾಮದ ಪಂಡರಹಳ್ಳಿ ಕ್ಯಾಂಪ್ ಸಮೀಪ ವಾಸವಿದ್ದರು. ಗೀತಾಬಾಯಿ ಮತ್ತು ಸೇವಾನಾಯ್ಕ ಇಬ್ಬರೂ ಕೂಲಿ ಕೆಲಸ ಮಾಡಿಕೊಂಡು ಬದುಕು ನಡೆಸುತ್ತಾ ತಮ್ಮ ಮಕ್ಕಳಿಗೆ ಶಿಕ್ಷಣ ನೀಡುವ ಕನಸನ್ನು ಹೊತ್ತವರಾಗಿದ್ದರು. ಆ ಕನಸಿನ ಭಾಗವಾಗಿಯೇ ಚಂದನಾಬಾಯಿಯನ್ನು ಏಳನೇ ತರಗತಿ ತನಕ ಡಿ.ಬಿ. ಹಳ್ಳಿಯಲ್ಲಿ ಓದಿಸಿ, ನಂತರ ಹತ್ತನೇ ತರಗತಿ ವಿದ್ಯಾಭ್ಯಾಸಕ್ಕಾಗಿ ಮನೆಯಿಂದ ಸುಮಾರು ಎರಡೂವರೆ ಕಿಲೋ ಮೀಟರ್ ದೂರದ ಕಲ್ಲಿಹಾಳ ಸರ್ಕಾರಿ ಹೈಸ್ಕೂಲ್‌ಗೆ ಸೇರಿಸಿದ್ದರು. ಶಾಲೆ ದೂರವಿದ್ದ ಕಾರಣ ಚಂದನಾಬಾಯಿ ಪ್ರತಿದಿನ ಸೈಕಲ್‌ನಲ್ಲಿ ಶಾಲೆಗೆ ಹೋಗಿ ಬರುವುದು ಅವಳ ದಿನಚರಿಯಾಗಿತ್ತು.



ಎಸ್ಪಿ ಬಿ. ನಿಖಿಲ್

ಈ ಸಂದರ್ಭದಲ್ಲೇ ಬೊಮ್ಮನಕಟ್ಟೆ ಪಂಡರಹಳ್ಳಿ ಕ್ಯಾಂಪ್ ನಿವಾಸಿಗಳಾದ ರಾಜಪ್ಪ ಮತ್ತು ಅವರ ಕುಟುಂಬ ಕಟ್ಟಡ ಕಾರ್ಮಿಕ ಕೆಲಸಕ್ಕಾಗಿ ಗೀತಾಬಾಯಿ ವಾಸವಿದ್ದ ಊರಿಗೆ ಬಂದು ನೆಲೆಸಿದ್ದರು. ರಾಜಪ್ಪನ ಮಗ ಗೋಪಿ ಇದೇ ಸಮಯದಲ್ಲಿ ಚಂದನಾಬಾಯಿಯನ್ನು ಗಮನಿಸಿ ಆಕೆಯ ಮೇಲೆ ಆಸಕ್ತಿ ತೋರಲು ಆರಂಭಿಸಿದ್ದ. ಶಾಲೆಗೆ ಹೋಗಿಬರುತ್ತಿದ್ದ ಚಂದನಾಬಾಯಿಯನ್ನು ಸೈಕಲ್ ಮೇಲೆ ನೋಡುತ್ತಿದ್ದ ಗೋಪಿ, ಆಕೆಯ ಬಳಿ ಪ್ರೀತಿಯ ನೆಪದಲ್ಲಿ ಮಾತುಕತೆ ಆರಂಭಿಸಿ, ನಂತರ ದಿನೇದಿನೇ ಪ್ರೀತಿಸು ಎಂದು ಒತ್ತಡ ಹೇರುವ ಹಂತಕ್ಕೆ ಹೋಗಿದ್ದಾನೆ ಎಂದು ಕುಟುಂಬದವರು ಆರೋಪಿಸಿದ್ದಾರೆ. ಆದರೆ ವಿದ್ಯಾಭ್ಯಾಸದ ಮೇಲೆಯೇ ಆಸಕ್ತಿ ಹೊಂದಿದ್ದ ಚಂದನಾಬಾಯಿ ಗೋಪಿಯ ಪ್ರಸ್ತಾವನೆಯನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದಳು. ಈ ವಿಚಾರವನ್ನು ಆಕೆ ತನ್ನ ತಾಯಿ ತಂದೆಗೆ ತಿಳಿಸಿದ್ದು, ಪೋಷಕರು ಗೋಪಿಗೆ ಬುದ್ಧಿವಾದ ಹೇಳಿದರೂ ಅವನು ತನ್ನ ವರ್ತನೆ ಬದಲಾಯಿಸಿಲ್ಲ ಎನ್ನಲಾಗಿದೆ. ಇದಲ್ಲದೆ ಶಾಲೆ ಸಮೀಪಕ್ಕೂ ಹೋಗಿ ಚಂದನಾಬಾಯಿಯನ್ನು ಕಿರುಕುಳ ನೀಡುತ್ತಿದ್ದಾನೆ ಎಂಬ ಆರೋಪಗಳು ಕೇಳಿಬಂದಿವೆ. ಈ ಕಿರುಕುಳದಿಂದ ಬೇಸತ್ತ ಚಂದನಾಬಾಯಿ ಮತ್ತೆ ತನ್ನ ಪೋಷಕರ ಬಳಿ ಅಳಲು ತೋಡಿಕೊಂಡಾಗ, ಮಗಳ ಭದ್ರತೆ ಮತ್ತು ಗೌರವದ ದೃಷ್ಟಿಯಿಂದ ಪೋಷಕರು ಆಕೆಯ ವಿದ್ಯಾಭ್ಯಾಸವನ್ನೇ ಮಧ್ಯದಲ್ಲಿ ನಿಲ್ಲಿಸಿ ಮನೆಯಲ್ಲೇ ಇರಿಸಿಕೊಂಡಿದ್ದಾರೆ.

ಆದರೂ ಗೋಪಿ ತನ್ನ ಕಿರುಕುಳ ನಿಲ್ಲಿಸದೇ, ಮನೆಯ ಮುಂದೆ ಬಂದು ಪ್ರೀತಿಯ ನೆಪದಲ್ಲಿ ಹಾಡು ಹಾಡುತ್ತಾ, ಬೆಂಬಿಡದ ಬೇತಾಳನಂತೆ ವರ್ತನೆ ಮುಂದುವರಿಸಿದ್ದಾನೆ ಎನ್ನಲಾಗಿದೆ. ಆ ಸಮಯದಲ್ಲಿ ಗೀತಾಬಾಯಿ ಮತ್ತು ಸೇವಾನಾಯ್ಕ ಕೆಲಸಕ್ಕೆ ಹೊರ ಹೋಗಿದ್ದಾಗ ಚಂದನಾಬಾಯಿ ಭಯದಿಂದ ಬಾಗಿಲು ಹಾಕಿಕೊಂಡು ಮನೆಯೊಳಗೆ ಕುಳಿತುಕೊಳ್ಳುತ್ತಿದ್ದಳು ಎಂಬ ಮಾಹಿತಿ ಕೂಡ ಲಭ್ಯವಾಗಿದೆ. ಇದೇ ನಡುವೆ ಒಂದು ದಿನ ಪೋಷಕರು ಇಲ್ಲದ ಸಮಯವನ್ನು ಗಮನಿಸಿದ ಗೋಪಿ, ಚಂದನಾಬಾಯಿಯನ್ನು ಪುಸಲಾಯಿಸಿ ಮನೆ ಹೊರಗೆ ಕರೆದುಕೊಂಡು ಹೋಗಿದ್ದಾನೆ. ನಂತರ ಕೆಲ ದಿನಗಳ ಬಳಿಕ ಚಂದನಾಬಾಯಿ ಮತ್ತು ಗೋಪಿ ಮದುವೆಯಾಗಿದ್ದಾರೆ ಎಂಬ ವಿಚಾರ ಚಂದನಾಳ ಪೋಷಕರಿಗೆ ತಿಳಿದು ಬಂದಿದೆ. ತಮ್ಮ ಇಚ್ಛೆಗೆ ವಿರುದ್ಧವಾಗಿ ಮದುವೆ ಮಾಡಿಕೊಂಡರೂ, ಮಗಳ ಬದುಕು ಹಾಳಾಗಬಾರದೆಂಬ ಕಾರಣಕ್ಕೆ ಪೋಷಕರು ಮೌನವಾಗಿ ಒಪ್ಪಿಕೊಂಡಿದ್ದಾರೆ. ಬಳಿಕ ಮದುವೆ ಮಾಡಿಕೊಂಡ ದಂಪತಿ ಕೆಲಕಾಲ ಬೇರೆಡೆ ವಾಸವಿದ್ದು, ನಂತರ ಬೊಮ್ಮನಕಟ್ಟೆ ಪಂಡರಹಳ್ಳಿ ಕ್ಯಾಂಪ್ ಪ್ರದೇಶದ ಮನೆಗೆ ಬಂದು ನೆಲೆಸಿದ್ದಾರೆ. ಆರಂಭದಲ್ಲಿ ದಂಪತಿ ಅನ್ಯೋನ್ಯವಾಗಿರುವುದನ್ನು ಕಂಡ ಪೋಷಕರು ಸಹಜವಾಗಿ ಸಂಬಂಧವನ್ನು ಒಪ್ಪಿಕೊಂಡಿದ್ದರು.



ಕಾಲಕ್ರಮೇಣ ಚಂದನಾಬಾಯಿ ಎರಡು ಮಕ್ಕಳ ತಾಯಿಯಾಗಿದ್ದಳು. ಆದರೆ ಸಂಸಾರದಲ್ಲಿ ನೆಮ್ಮದಿ ಹೆಚ್ಚು ದಿನ ಉಳಿಯಲಿಲ್ಲ. ಗೋಪಿಯ ಎದೆಯ ಮೇಲೆ ಱಕಾವ್ಯಱ ಎಂಬ ಹೆಸರಿನ ಹಚ್ಚೆ ಇದ್ದುದನ್ನು ಗಮನಿಸಿದ ಚಂದನಾಬಾಯಿ, ಇದರ ಬಗ್ಗೆ ಪ್ರಶ್ನಿಸಿದಾಗ ಗೋಪಿಯಿಂದ ಸ್ಪಷ್ಟ ಉತ್ತರ ದೊರಕಲಿಲ್ಲ. ಈ ವಿಚಾರವೇ ದಂಪತಿಯ ನಡುವಿನ ದೊಡ್ಡ ವಿವಾದಕ್ಕೆ ಕಾರಣವಾಗಿದೆ. 'ಕಾವ್ಯ ಯಾರು?' ಎಂಬ ಪ್ರಶ್ನೆಗೆ ಗೋಪಿ ತಪ್ಪಿಸಿಕೊಳ್ಳುವ ಉತ್ತರ ನೀಡುತ್ತಾ, ಮಾತಿಗೆ ಮಾತು ಬೆಳೆಸಿದರೆ ಕೊಲೆ ಬೆದರಿಕೆ ಹಾಕಿದ್ದಾನೆ ಎಂಬ ಆರೋಪವಿದೆ. ಈ ವಿಷಯವನ್ನು ಚಂದನಾಬಾಯಿ ತನ್ನ ತಾಯಿ ಗೀತಾಬಾಯಿಗೆ ತಿಳಿಸಿದ್ದರೂ, ಮಗಳ ಸಂಸಾರ ಉಳಿಯಬೇಕು ಎಂಬ ಉದ್ದೇಶದಿಂದ ಗೀತಾಬಾಯಿ ಹೊಂದಾಣಿಕೆಯಿಂದ ಇರಲು ಸಲಹೆ ನೀಡಿದ್ದಾಳೆ ಎಂದು ತಿಳಿದುಬಂದಿದೆ. ಆದರೂ 'ಕಾವ್ಯ' ಹಚ್ಚೆಯ ವಿಚಾರವಾಗಿ ಚಂದನಾಬಾಯಿ ಮತ್ತು ಗೋಪಿಯ ನಡುವೆ ಪದೇಪದೇ ಜಗಳ,




ವಾಗ್ವಾದ ನಡೆಯುತ್ತಲೇ ಇತ್ತು.

ಇತ್ತೀಚೆಗೆ ಚಂದನಾಳ ಎರಡನೇ ಮಗುವಿನ ಬಾಣಂತನಕ್ಕಾಗಿ ಆಕೆ ತೌರುಮನೆಗೆ ಹೋಗಿದ್ದಳು. ಕೆಲ ದಿನಗಳ ಹಿಂದೆ ಚಂದನಾಳ ಮಗ ಮನ್ವಿತ್ ಆಟವಾಡುವಾಗ ಬಿದ್ದು ಗಂಭೀರವಾಗಿ ಕಾಲಿಗೆ ಪೆಟ್ಟಾಗಿದ್ದರಿಂದ, ಗೀತಾಬಾಯಿ ಕುಟುಂಬದವರನ್ನೆಲ್ಲಾ ಕರೆದುಕೊಂಡು ಮಗಳ ಮನೆಗೆ ಹೋಗಿ ಅಲ್ಲಿಯೇ ಉಳಿದುಕೊಂಡು ಮೊಮ್ಮಕ್ಕಳನ್ನು ನೋಡಿಕೊಳ್ಳುತ್ತಿದ್ದರು. ಘಟನೆಯ ದಿನ ಬೆಳಿಗ್ಗೆ ಸುಮಾರು ಎಂಟು ಗಂಟೆ ವೇಳೆಗೆ ಗೀತಾಬಾಯಿ ಮತ್ತು ಅವರ ಗಂಡ ಸೇವಾನಾಯ್ಕ ಕೂಲಿ ಕೆಲಸಕ್ಕೆ ತೆರಳಿದ್ದು, ಗೀತಾಬಾಯಿ ಹಾಗೂ ಗೋಪಿಯ ತಾಯಿ ಚಂದ್ರಮ್ಮ ತೋಟದಲ್ಲಿ ಸೊಪ್ಪು ಕೊಯ್ಯಲು ಹೋಗಿದ್ದರು. ಮಧ್ಯಾಹ್ನ ಸುಮಾರು 12.30ರ ವೇಳೆಗೆ ಮನೆಗೆ ಮರಳಿದಾಗ, ಚಂದನಾಳ ತಂಗಿ ಕಾವ್ಯ, ಮಕ್ಕಳನ್ನು ಆಡಿಸುತ್ತಾ ಕುಳಿತಿದ್ದಳು. ಇದೇ ವೇಳೆ ಗೋಪಿ ಗಾಬರಿಯಿಂದ ಮನೆ ಹೊರಗೆ ಬಂದಿದ್ದು, ಚಂದನಾ ಎಲ್ಲಿದ್ದಾಳೆ ಎಂದು ಅತ್ತೆ ಗೀತಾಬಾಯಿ ಪ್ರಶ್ನಿಸಿದಾಗ, ಒಳಗೆ ಮಲಗಿದ್ದಾಳೆ ಎಂದು ಹೇಳಿ ತ್ವರಿತವಾಗಿ ಅಲ್ಲಿಂದ ಹೊರಟಿದ್ದಾನೆ ಎನ್ನಲಾಗಿದೆ.

ಅನುಮಾನಗೊಂಡ ಕಾವ್ಯ ಚಂದನಾಳ ಕೊಠಡಿಗೆ ಹೋಗಿ 'ಅವ್ಮಾ ಅವ್ಮಾ' ಎಂದು ಕಿರುಚಿದಾಗ ಯಾವುದೇ ಪ್ರತಿಕ್ರಿಯೆ ಇಲ್ಲದಿದ್ದರಿಂದ ಗೀತಾಬಾಯಿ ಒಳಗೆ ಹೋಗಿ ನೋಡಿದಾಗ, ಚಂದನಾಬಾಯಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿದ್ದಳು. ಆಕೆಯ ಬಾಯಿಂದ ರಕ್ತ ಸೋರಿಸುತ್ತಿದ್ದು, ಕುತ್ತಿಗೆಯ ಬಳಿ ಕೆಂಪು ಗುರುತುಗಳು ಕಂಡುಬಂದಿವೆ. ಕೂಡಲೇ ಕುಟುಂಬಸ್ಥರು ಕೂಗಾಡಲು ಆರಂಭಿಸಿದಾಗ ಗೋಪಿ ಮತ್ತೆ ಮನೆಗೆ ಬಂದು ಚಂದನಾಳನ್ನು ವ್ಯಾನ್‌ನಲ್ಲಿ ಕಲ್ಲಿಹಾಳ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದಿದ್ದಾನೆ. ಆದರೆ ಅಲ್ಲಿ ವೈದ್ಯರು ಚಂದನಾಬಾಯಿಯನ್ನು ಪರೀಕ್ಷಿಸಿ ಮೃತಪಟ್ಟಿರುವುದಾಗಿ ಘೋಷಿಸಿದ್ದಾರೆ.

ಈ ಸಂಬಂಧ ಚಂದನಾಳ ತಾಯಿ ಗೀತಾಬಾಯಿ ನೀಡಿದ ದೂರಿನ ಮೇರೆಗೆ ಹೊಳೆಹೊನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪಿಐ ಶಿವಪ್ರಸಾದ ಅವರು ತಕ್ಷಣ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಆರೋಪಿಯಾದ ಗೋಪಿ ಬಂಧಿಸಲ್ಪಟ್ಟಿದ್ದು, ಘಟನೆ ಸ್ಥಳಕ್ಕೆ ಶಿವಮೊಗ್ಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ. ನಿಖಿಲ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪತಿಯ ಮೇಲಿನ ಸಂಶಯ, ಹಚ್ಚೆ ವಿಚಾರದಿಂದ ಉಂಟಾದ ವಿವಾದ ಹಾಗೂ ಕೊಲೆ ಬೆದರಿಕೆ ಹಿನ್ನೆಲೆ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ಚಂದನಾಬಾಯಿಯ ಮರಣ ಕೊಲೆ ಎಂಬ ಶಂಕೆಯೊಂದಿಗೆ ಪೊಲೀಸರು ಮುಂದಿನ ತನಿಖೆ ಮುಂದುವರಿಸಿದ್ದಾರೆ. ಈ ಘಟನೆ ಇಡೀ ಭದ್ರಾವತಿ ತಾಲ್ಲೂಕಿನಲ್ಲಿ ಭಾರೀ ಆಕ್ರೋಶ ಮತ್ತು ವಿಷಾದಕ್ಕೆ ಕಾರಣವಾಗಿದ್ದು, ನ್ಯಾಯಕ್ಕಾಗಿ ಕುಟುಂಬಸ್ಥರು ಕಣ್ಣೀರಿಟ್ಟಿದ್ದಾರೆ.





## ಹಳೇ ಮೈಸೂರು ಭಾಗದಲ್ಲಿ ತಾರಕಕ್ಕೇರಿದ ಶೀತಲ ಸಮರ!

**ರಾಜಕೀಯದಲ್ಲಿ ಯಾರು ಯಾವಾಗ ಶತ್ರುಗಳಾಗುತ್ತಾರೋ? ಮಿತ್ರರಾಗುತ್ತಾರೋ? ಎಂಬುದನ್ನು ಹೇಳಲಾಗದು. ಆದರೆ ಇವತ್ತು ಮೈಸೂರು ಭಾಗದಲ್ಲಿ ಪ್ರಭಾವಿ ಎನಿಸಿಕೊಂಡಿರುವ, ಸಿಎಂ ಸಿದ್ದರಾಮಯ್ಯರನ್ನೇ ಸೋಲಿಸಿದ ಜೆಡಿಎಸ್‌ನ ಪ್ರಭಾವಿ ಮುಖಂಡ ಜಿ.ಟಿ. ದೇವೇಗೌಡರಿಗೆ ದಳಪತಿಗಳು ಪಕ್ಷದಿಂದ ಗೇಟ್ ಪಾಸ್ ಕೊಡ್ತಾರಾ? ಎಂಬ ಅನುಮಾನಗಳು ಹುಟ್ಟಿಕೊಳ್ಳಲಾರಂಭಿಸಿದೆ. ಇತ್ತೀಚೆಗೆ ಜಿ.ಟಿ. ದೇವೇಗೌಡರ ನಡೆ ಮತ್ತು ದಳಪತಿಗಳು ವರ್ತನೆ ರಾಜಕೀಯ ವಲಯದಲ್ಲಿ ಅಂಥದೊಂದು ಸಂಶಯವನ್ನು ಹುಟ್ಟು ಹಾಕಕಾರಂಭಿಸಿದೆ.**



# ಜಿ.ಟಿ.ದೇವೇಗೌಡರಿಗೆ ಜೆಡಿಎಸ್‌ನಿಂದ ಗೇಟ್ ಪಾಸ್ ಕೊಡ್ತಾರಾ ದಳಪತಿಗಳು?

✍ಬಿ.ಎಂ. ಲವಕುಮಾರ್

ದಳದ ನಾಯಕರಿಬ್ಬರು ರಾಜಕೀಯ ಸಮರಕ್ಕಿಳಿದಿರುವುದು ಅಚ್ಚರಿ ಮೂಡಿಸಿದೆ. ಇದು ಮುಂದೆ (2028) ಬರಲಿರುವ ವಿಧಾನಸಭಾ ಚುನಾವಣೆಗೆ ಈಗಿನಿಂದಲೇ ತಯಾರಿನಾ? ದೊಡ್ಡ ಗೌಡರ ಕುಟುಂಬಕ್ಕೆ ಸೆಡ್ಡು ಹೊಡೆದಿರುವ ಜಿ.ಟಿ. ದೇವೇಗೌಡರಿಗೆ ಟಕ್ಕರ್ ಕೊಡುವ ತಂತ್ರನಾ...? ಹೀಗೆ ರಾಜಕೀಯ ವಲಯದಲ್ಲಿ ಪ್ರಶ್ನೆಗಳು ಹುಟ್ಟಿಕೊಳ್ಳುತ್ತಿವೆ

ಜೆಡಿಎಸ್‌ನಲ್ಲಿದ್ದು, ಜೆಡಿಎಸ್‌ನ ಯಾವುದೇ ಕಾರ್ಯಕ್ರಮಗಳಲ್ಲಿ ಭಾಗಿಯಾಗದೆ ದೂರವೇ ಉಳಿದಿರುವ ಜಿ.ಟಿ. ದೇವೇಗೌಡರನ್ನು ಪಕ್ಷದಿಂದ ದಳಪತಿಗಳು




ಕೈ ಬಿಡುವ ಲಕ್ಷಣಗಳು ಕಾಣಿಸಿವೆ. ಈಗಾಗಲೇ ಜಾಹೀರಾತುಗಳಲ್ಲಿ ಅವರ ಹೆಸರು ನಾಪತ್ತೆಯಾಗಿದೆ. ಇದರ ನಡುವೆ ಅವರ ಕ್ಷೇತ್ರಕ್ಕೆ ಬೇರೆಯವರನ್ನು ತರುವ ಆಲೋಚನೆಗಳನ್ನು ಮಾಡಲಾಗುತ್ತಿದೆ. ಇದೆಲ್ಲವನ್ನು ಗಮನಿಸಿದರೆ ದಳಪತಿಗಳು ಪುತ್ರ ಜಿ.ಟಿ. ಹರೀಶ್ ಗೌಡರನ್ನು ಜತೆಗಿಟ್ಟುಕೊಂಡು ಅಪ್ಪನಿಗೆ ಗೇಟ್ ಪಾಸ್ ನೀಡುತ್ತಾರಾ? ಎಂಬ ಪ್ರಶ್ನೆಯೊಂದು ಹುಟ್ಟಿಕೊಳ್ಳಲಾರಂಭಿಸಿದೆ.

ಸದ್ಯದ ಜೆಡಿಎಸ್‌ನಲ್ಲಿ ಆಗುತ್ತಿರುವ ಬೆಳವಣಿಗೆಯನ್ನು ಗಮನಿಸಿದರೆ ಹಳೇ ಮೈಸೂರು ಭಾಗದಲ್ಲಿ ಒಕ್ಕಲಿಗ ನಾಯಕನಾಗಿರುವ ಮತ್ತು ಜೆಡಿಎಸ್‌ನಲ್ಲಿ ಪ್ರಭಾವಿಯಾಗಿ, ಹೆಚ್.ಡಿ. ದೇವೇಗೌಡರ ಕುಟುಂಬಕ್ಕೆ ಆಪ್ತರಾಗಿರುವ ಸಾ.ರಾ. ಮಹೇಶ್ ಜಿ.ಟಿ.ದೇವೇಗೌಡರ ವಿರುದ್ಧ ಸೆಟೆದು ನಿಂತಂತೆ ಕಾಣಿಸುತ್ತಿದೆ. ಮೊದಲಿನಿಂದಲೂ ಇವರ ನಡುವೆ ಶೀತಲ ಸಮರ ಜೋರಾಗಿಯೇ ನಡೆಯುತ್ತಿತ್ತು. ಈಗ ಅದು ತಾರಕಕ್ಕೆ ಹೋದಂತೆ ಕಾಣಿಸುತ್ತಿದೆ.

ಸಾ.ರಾ. ಮಹೇಶ್ ಅವರ ಬಗ್ಗೆ ಹೇಳಬೇಕೆಂದರೆ, ಕಳೆದ 2023ರ ವಿಧಾನಸಭಾ ಚುನಾವಣೆಯಲ್ಲಿ ಸೋಲು ಕಂಡು ಹತಾಶರಾಗಿರುವ ಜೆಡಿಎಸ್ ಮುಖಂಡ ಇವರಾಗಿದ್ದಾರೆ. ಹೀಗಾಗಿ ಮುಂದಿನ 2028ರ ಚುನಾವಣೆಗೆ ಈಗಿನಿಂದಲೇ ಮೈಕೊಡವಿ ನಿಂತಿದ್ದಾರೆ. ಅವರು ತಮ್ಮ ತವರು ಕ್ಷೇತ್ರ ಮೂರು ಬಾರಿ ಗೆಲುವು ತಂದುಕೊಟ್ಟ ಕೆ.ಆರ್. ನಗರ ವಿಧಾನ ಸಭಾ ಕ್ಷೇತ್ರವನ್ನು ಬಿಟ್ಟು ಮೈಸೂರಿನ ಜಿ.ಟಿ. ದೇವೇಗೌಡರ ಚಾಮುಂಡೇಶ್ವರಿ ಕ್ಷೇತ್ರ ಅಥವಾ ಚಾಮರಾಜ ಕ್ಷೇತ್ರದತ್ತ ಮುಖ ಮಾಡಲಿದ್ದಾರೆ ಎಂಬ ಮಾತುಗಳು ಕೇಳಿ ಬರುತ್ತಿದ್ದು, ಆ ಮೂಲಕ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆಯುವ ತಂತ್ರನಾ? ಇದರ ಹಿಂದೆ ಇರುವವರು ದೊಡ್ಡಗೌಡ್ರ ಕುಟುಂಬನಾ? ಗೊತ್ತಿಲ್ಲ. ಆದರೆ ಈಗಾಗಲೇ ಹೆಚ್.ಡಿ. ದೇವೇಗೌಡರ ಕುಟುಂಬದ ಸಖ್ಯ ಕಳೆದುಕೊಂಡಿರುವ ಜಿ.ಟಿ. ದೇವೇಗೌಡರು ಜೆಡಿಎಸ್‌ನಲ್ಲಿಯೇ ಇದ್ದರೂ ಇಲ್ಲದಂತೆ ಇರುವುದಂತು ನಿಜ

ಕಳೆದ ಎರಡು ಅವಧಿಯಿಂದಲೂ ಚಾಮುಂಡೇಶ್ವರಿ ಕ್ಷೇತ್ರದಿಂದ ಜೆಡಿಎಸ್ ಪಕ್ಷದಡಿ ಸ್ಪರ್ಧಿಸಿ ಗೆಲುವು ಕಾಣುತ್ತಿರುವ ಜಿ.ಟಿ. ದೇವೇಗೌಡರು ಇದೀಗ ಜೆಡಿಎಸ್‌ನಲ್ಲಿ ತಟಸ್ಥರಾಗಿರುವುದು ಕಂಡು ಬರುತ್ತಿದೆ. ಇದು ಜಿ.ಟಿ. ದೇವೇಗೌಡರದು ತಂತ್ರನಾ? ಅದು ಗೊತ್ತಿಲ್ಲ. ಈ ಹಿಂದೆ ಬಿಜೆಪಿ ಸರ್ಕಾರವಿದ್ದ ಕಾಲದಲ್ಲಿ ಬಿಜೆಪಿ ಮತ್ತು ಜೆಡಿಎಸ್ ನಡುವೆ ಭಾರೀ ತಿಕ್ಕಾಟವಿದ್ದರೂ ಜಿ.ಟಿ. ದೇವೇಗೌಡರು ತಟಸ್ಥರಾಗಿದ್ದುಕೊಂಡೇ ತಮ್ಮ ಕೆಲಸವನ್ನು ಮಾಡಿಕೊಂಡು ಬಂದಿದ್ದನ್ನು ಸ್ಮರಿಸಬಹುದು.



ನಂತರದ ಅವಧಿಯಲ್ಲಿ 2023ರ ಚುನಾವಣೆ ವೇಳೆ ಕಾಂಗ್ರೆಸ್ ಕಡೆಗೆ ಒಲವು ಹೊಂದುತ್ತಿದ್ದಾರೆ ಎಂಬುದು ಗೊತ್ತಾಗುತ್ತಿದ್ದಂತೆಯೇ ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡರು ಸಂಧಾನ ನಡೆಸಿ ಪಕ್ಷದಿಂದ ಹೊರ ಹೋಗದಂತೆ ಮಾಡಿದ್ದಲ್ಲದೆ, ಅವರ ಪುತ್ರ ಜಿ.ಡಿ.ಹರೀಶ್ ಗೌಡರಿಗೆ ಹುಣಸೂರು ಕ್ಷೇತ್ರದಿಂದ ಟಿಕೆಟ್ ನೀಡಿ ಗೆಲ್ಲುವಂತೆ ಮಾಡಿದರು. ಆ ನಂತರ ಮತ್ತೊಮ್ಮೆ ಜೆಡಿಎಸ್ ನಿಂದ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧಿಸಿದ ಜಿ.ಟಿ. ದೇವೇಗೌಡರು ಗೆಲುವು ಕಂಡರು. ಆ ನಂತರ ಅವರು ಪಕ್ಷದ ವೇದಿಕೆಯಲ್ಲಿ ಕಾಣಿಸಿಕೊಳ್ಳದೆ ಅಂತರ ಕಾಪಾಡಿಕೊಂಡಿದ್ದು, ಈಗ ತಟಸ್ಥರಾಗಿ ಉಳಿದಿದ್ದಾರೆ. ಅವರ ಪುತ್ರ ಜಿ.ಡಿ. ಹರೀಶ್ ಗೌಡರು ಜೆಡಿಎಸ್‌ನಲ್ಲಿ ಸಕ್ರಿಯರಾಗಿದ್ದಾರೆ,

ಈಗಿನ ಪರಿಸ್ಥಿತಿಯನ್ನು ಗಮನಿಸಿದರೆ ಮುಂದಿನ 2028ರ ವಿಧಾನಸಭಾ ಚುನಾವಣೆಗೆ ಜಿ.ಟಿ. ದೇವೇಗೌಡರಿಗೆ ಜೆಡಿಎಸ್ ನಿಂದ ಟಿಕೆಟ್ ಸಿಗುವುದು ಕಷ್ಟಸಾಧ್ಯ. ಅದಕ್ಕಿಂತ ಹೆಚ್ಚಾಗಿ ಹಿಂದೊಮ್ಮೆ ಅವರು ಚುನಾವಣಾ ರಾಜಕೀಯದ ಬಗ್ಗೆ ನಿರಾಸೆ ವ್ಯಕ್ತಪಡಿಸಿದ್ದರು. ಹೀಗಿರುವಾಗಲೇ ಅವರ ಕ್ಷೇತ್ರದ ಮೇಲೆ ಜೆಡಿಎಸ್‌ನ ಪ್ರಭಾವಿ ಮುಖಂಡರಲ್ಲಿ ಒಬ್ಬರಾದ ಸಾ.ರಾ. ಮಹೇಶ್ ಕಣ್ಣಿಟ್ಟಿರುವುದು ಮತ್ತು ಅಲ್ಲಿ ರಾಜಕೀಯ ತಂತ್ರಗಳನ್ನು ಪ್ರಯೋಗಿಸುತ್ತಿರುವುದು ಹೊಸ ಬೆಳವಣಿಗೆಯಾಗಿದೆ.



ಮುಂದಿನ ವಿಧಾನಸಭಾ ಚುನಾವಣೆಗೆ ರಾಜ್ಯದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಒಟ್ಟಾಗಿ ಚುನಾವಣೆಯನ್ನು ಎದುರಿಸುವ ಸಾಧ್ಯತೆ ಇರುವುದರಿಂದ ಈ ಕ್ಷೇತ್ರದಲ್ಲಿ ಎರಡು ಪಕ್ಷ ಒಂದಾದರೆ ಗೆಲುವು ಸಾಧಿಸುವುದು ಸುಲಭ ಎಂಬ ಲೆಕ್ಕಾಚಾರ ಸಾರಾ ಮಹೇಶ್ ಅವರದ್ದಾಗಿರಬಹುದು. ಇದೆಲ್ಲವನ್ನು ಗಮನಿಸಿದರೆ ಚಾಮುಂಡೇಶ್ವರಿ ಕ್ಷೇತ್ರವು ಎಲ್ಲ ರೀತಿಯಲ್ಲಿಯೂ ಸಾ.ರಾ. ಮಹೇಶ್ ಅವರಿಗೆ ಸೂಕ್ತ ಕ್ಷೇತ್ರ ಎನ್ನುವುದರಲ್ಲಿ ಎರಡು ಮಾತಿಲ್ಲ.





ಇಷ್ಟಕ್ಕೂ ಜಿ.ಟಿ. ದೇವೇಗೌಡರು ಮುಂದಿನ ವಿಧಾನಸಭಾ ಚುನಾವಣೆ ವೇಳೆಗೆ ರಾಜಕೀಯದಿಂದಲೇ ದೂರ ಸರಿಯುತ್ತಾರಾ? ಹಾಗೊಂದು ಪ್ರಶ್ನೆಗಳು ರಾಜಕೀಯ ಪಡಸಾಲೆಯಲ್ಲಿ ಹುಟ್ಟಿಕೊಳ್ಳುತ್ತಿವೆ. ಆದರೆ ರಾಜಕೀಯದಲ್ಲಿ ಏನು ಬೇಕಾದರೂ ಆಗಬಹುದು. ಅವತ್ತಿನ ಪರಿಸ್ಥಿತಿಗೆ ಅನುಗುಣವಾಗಿ ಯಾವ ನಿರ್ಧಾರವನ್ನು ಬೇಕಾದರೂ ಜಿ.ಟಿ. ದೇವೇಗೌಡರು ತೆಗೆದುಕೊಳ್ಳಬಹುದೇನೋ? ಈ ಹಿಂದೆ ಜೆಡಿಎಸ್ ತೊರೆದು ಬಿಜೆಪಿ ಸೇರಿದ್ದ ಜಿ.ಟಿ. ದೇವೇಗೌಡರಿಗೆ ಅನುಕೂಲವಾಗುತ್ತದೆ ಎಂದೆನಿಸಿದರೆ ಕಾಂಗ್ರೆಸ್ ಕಡೆಗೆ ಮುಖ ಮಾಡಿದರೂ ಅಚ್ಚರಿಯಿಲ್ಲ.

ಜಿ.ಟಿ. ದೇವೇಗೌಡರ ರಾಜಕೀಯದ ಹಾದಿಯನ್ನು ನೋಡಿದ್ದೇ ಆದರೆ ಅವರು ಜೆಡಿಎಸ್ ಪಕ್ಷಕ್ಕಾಗಿ ಬಹಳಷ್ಟು ಕೆಲಸ ಮಾಡಿದ್ದಾರೆ. ಪಕ್ಷವನ್ನು ಕಟ್ಟಿ ಬೆಳೆಸಿರುವುದರಲ್ಲಿ ಅವರ ಶ್ರಮವೂ ಇದ್ದೇ ಇದೆ. ಜೆಡಿಎಸ್‌ನಿಂದ ಸಿದ್ದರಾಮಯ್ಯ ಹೊರ ಹೋದ ನಂತರ ಮೈಸೂರು ಭಾಗದಲ್ಲಿ ಪಕ್ಷ ಸಂಘಟನೆಗಾಗಿ ಕೆಲಸ ಮಾಡಿದ್ದಾರೆ. ಎಚ್.ಡಿ. ಕುಮಾರಸ್ವಾಮಿ ಮೊದಲ ಅವಧಿಗೆ ಮುಖ್ಯಮಂತ್ರಿ ಆಗಿದ್ದ ವೇಳೆಯಲ್ಲಿ ಸಚಿವರಾಗಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿ ಕಾರ್ಯ ನಿರ್ವಹಿಸಿ ಪಕ್ಷಕ್ಕಾಗಿ ದುಡಿದಿದ್ದರು. ಆದರೆ ನಂತರ ದಿನಗಳಲ್ಲಿ ಮಾಜಿ ಸಚಿವ ಹೆಚ್.ಡಿ. ರೇವಣ್ಣನವರೊಂದಿಗಿನ ಮುನಿಸು ಅವರನ್ನು ಪಕ್ಷವನ್ನು ಬಿಟ್ಟು ಹೊರ ಹೋಗುವಂತೆ ಮಾಡಿತ್ತು.

ಜೆಡಿಎಸ್‌ನಿಂದ ಹೊರ ಬಂದ ಅವರು ಮೈಸೂರಿನಲ್ಲಿ ಬೃಹತ್ ಸಮಾವೇಶ ಮಾಡುವ ಮೂಲಕ ಬಿಜೆಪಿ ಸೇರ್ಪಡೆಗೊಂಡರು. 2008ರ ವಿಧಾನಸಭಾ ಚುನಾವಣೆಯಲ್ಲಿ ಹುಣಸೂರು ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದರು. ಆದರೆ ಎಚ್.ಪಿ. ಮಂಜುನಾಥ್ ವಿರುದ್ಧ ಸೋಲು ಕಂಡರು. ಆದರೆ ಅವರು ಸೋತರೂ ಅವತ್ತು ರಾಜ್ಯದಲ್ಲಿ ಬಿಜೆಪಿ ಅಧಿ ಕಾರ ಹಿಡಿದಿತ್ತು. ಹೀಗಾಗಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಮೈಸೂರು ಜಿಲ್ಲೆಯ ಪ್ರಭಾವಿ ಒಕ್ಕಲಿಗ ನಾಯಕ ಜಿಟಿ ದೇವೇಗೌಡರನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ಅಧ್ಯಕ್ಷರನ್ನಾಗಿ ಮಾಡಿದರು.

ಆದರೆ ಐದು ವರ್ಷ ಕಳೆಯುವ ವೇಳೆಗೆ ಅವರಿಗೆ ಬಿಜೆಪಿ ಸಖ್ಯ ಸಾಕಾಗಿತ್ತು. ಮತ್ತೆ ಜೆಡಿಎಸ್ ಕಡೆಗೆ ಮುಖ ಮಾಡಿದರು. ಕ್ಷೇತ್ರ ಬದಲಾಯಿಸಿದ ಅವರು 2013ರಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಶಾಸಕರಾಗಿ ಆಯ್ಕೆಯಾದರು. ಅಷ್ಟೇ ಅಲ್ಲದೆ ಕ್ಷೇತ್ರದಲ್ಲಿ ಹಿಡಿತವನ್ನು ಸಾಧಿಸಿದರು. 2018ರ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ಅದೇ ಕ್ಷೇತ್ರದಿಂದ ಮರು ಆಯ್ಕೆ ಬಯಸಿ ಚುನಾವಣೆಗೆ ನಿಂತರು. ಬಹುಶಃ ಆ ಚುನಾವಣೆ ರಾಜಕೀಯ ಇತಿಹಾಸದಲ್ಲಿ ಮರೆಯಲಾರದ್ದಾಗಿತ್ತು.

ಏಕೆಂದರೆ ಅವರ ಎದುರು ಸ್ಪರ್ಧೆಗೆ ಇಳಿದಿದ್ದು ಅವತ್ತಿನ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರು... ವರುಣಾ ಕ್ಷೇತ್ರದಲ್ಲಿ ಸ್ಪರ್ಧೆ ಮಾಡುತ್ತಿದ್ದ ಸಿದ್ದರಾಮಯ್ಯ ಅವರು ತಮ್ಮ ತವರು ಕ್ಷೇತ್ರವನ್ನು ಪುತ್ರ ಯತೀಂದ್ರಗೆ ನೀಡಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿದ್ದರು. ಆದರೆ ಜಿ.ಟಿ.ದೇವೇಗೌಡರ ಪ್ರಭಾವದ ಮುಂದೆ ಸಿದ್ದರಾಮಯ್ಯ ಸೋಲಬೇಕಾಯಿತು. ಇದೊಂದು ಇತಿಹಾಸವೇ.

ಅವತ್ತಿನ ಚುನಾವಣಾ ಫಲಿತಾಂಶ ಅತಂತ್ರವಾದ ಹಿನ್ನಲೆಯಲ್ಲಿ ಕಾಂಗ್ರೆಸ್ ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಸಚಿವರಾದರೂ ಜಿ.ಟಿ. ದೇವೇಗೌಡರಿಗೆ ಪಕ್ಷದ ವರಿಷ್ಟರ ಬಗ್ಗೆ ಬೇಸರವಂತು ಇದ್ದೇ ಇತ್ತು. ಈ ಶೀತಲ ಸಮರ ಅವರನ್ನು ಪಕ್ಷದ ಚಟುವಟಿಕೆಯಿಂದ ದೂರ ಇರುವಂತೆ ಮಾಡಿತ್ತು. ನಂತರ ಸಮ್ಮಿಶ್ರ ಸರ್ಕಾರ ಪತನವಾಗಿ, ಬಿಜೆಪಿ ಅಧಿಕಾರಕ್ಕೆ ಬಂದಾಗ ಬಿಜೆಪಿ ನಾಯಕರೊಂದಿಗೆ ಉತ್ತಮ ಸಂಬಂಧ ಹೊಂದಿದ್ದ ಜಿಟಿಡಿ ತಮ್ಮ ಕ್ಷೇತ್ರದ ಅಭಿವೃದ್ಧಿಯಲ್ಲಿ ತೊಡಗಿಕೊಂಡರು.


2023ರ ಚುನಾವಣೆಯಲ್ಲಿ ಮತ್ತೆ ಜೆಡಿಎಸ್ ನಿಂದ ಸ್ಪರ್ಧಿಸಿದ್ದರು. ಆದರೂ ದೇವೇಗೌಡರ ಕುಟುಂಬದ ಜತೆ ಅಷ್ಟಕಷ್ಟೆ ಎಂಬಂತಿದ್ದ ಜಿ.ಟಿ. ದೇವೇಗೌಡರು ಚುನಾವಣೆಯಲ್ಲಿ ಗೆದ್ದು ಶಾಸಕರಾದರೂ ಜೆಡಿಎಸ್ ನಿಂದ ದೂರವೇ ಇದ್ದಾರೆ ಜತೆಗೆ ಕಾಂಗ್ರೆಸ್ ಜತೆಗೆ ಆತ್ಮೀಯರಾಗಿದ್ದಾರೆ. ಆಡಳಿತ ಪಕ್ಷದೊಂದಿಗೆ ಆತ್ಮೀಯರಾಗಿದ್ದುಕೊಂಡೇ ತಮ್ಮ ಕೆಲಸ ಮಾಡಿಸಿಕೊಳ್ಳುವುದು ಅವರ ತಂತ್ರವೂ ಆಗಿರಬಹುದು. ಆದರೆ ಇದು ರಾಜಕೀಯವಾಗಿ ನೋಡಿದ್ದೇ ಆದರೆ ಶೋಭೆ ತರುವಂತಹದಲ್ಲ ಪಕ್ಷಕ್ಕೂ ಮುಜುಗರವೇ. ಹೀಗಾಗಿಯೇ ಜಿ.ಟಿ. ದೇವೇಗೌಡರ ವಿರುದ್ಧ ಅಸಮಾಧಾನ ದಳಪತಿಗಳಲ್ಲಿ ಹೊಗೆಯಾಡುತ್ತಿದ್ದು, ಅದರ ಪರಿಣಾಮಗಳು ಏನಾಗಬಹುದು ಎಂಬುದನ್ನು ಕಾದು ನೋಡಬೇಕು? ☯



# ಕಾಮುಕ ಜ್ಯೋತಿಷಿ ಕಮಲಾಕರ ಭಟ್ಟ.... ರೀಲ್ಸ್ ರಾಣಿ ಸುಚಿತ್ರ ಸಹವಾಸ ಮಾಡಿ ಕೆಟ್ಟ!


ಕೊಲೆಯಾದ ವಸಂತ್ ನಾಯ್ಕ್

**ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಮಹೇಶ್ ನಾಯ್ಕ್ ಎಂಬುವರ ಪತ್ನಿ ಸುಚಿತ್ರಾ ಎಂಬಾಕೆಯ ಜೊತೆ ಜ್ಯೋತಿಷಿ ಕಮಲಾಕರ್ ಭಟ್ ಅನೈತಿಕ ಸಂಬಂಧ ಹೊಂದಿದ್ದ! ಗಂಡನ ಬಿಟ್ಟು ಮೂರು ಮಕ್ಕಳೊಂದಿಗೆ ಕಮಲಾಕರ ನೊಟ್ಟಿಗೆ ವಾಸಿಸುತ್ತಿದ್ದ ಸುಚಿತ್ರ, ಅಲ್ಲಿಂದ ತಪ್ಪಿಸಿಕೊಂಡು ಹೋಗಿದ್ದ ಮಗಳನ್ನು ಹುಡುಕಿಕೊಂಡು ಗಂಡನ ಮನೆಗೆ ಕಮಲಾಕರ ಭಟ್ಟನೊಡನೆ ತೆರಳಿದ್ದಳು!! ಆಗ ಅಲ್ಲಿ ನಡೆಯಿತು ಭಾರಿ ಅನಾಹುತ....!!!**



ಕಮಲಾಕರ ಭಟ್ಟ


ರೀಲ್ಸ್ ರಾಣಿ ಸುಚಿತ್ರಾ

ಜ್ಯೋತಿಷಿ ಕಮಲಾಕರ್ ಭಟ್ ಪರಪುರುಷನ ಪತ್ನಿಯೊಂದಿಗೆ ಅನೈತಿಕ ಸಂಬಂಧ ಹೊಂದಿದ್ದ ಎನ್ನುವ ಆರೋಪ ಕೇಳಿ ಬಂದಿದ್ದು, ಆ ಕಳ್ಳ ಸಂಬಂಧಕ್ಕೆ ಅಡ್ಡಿಯಾಗಿದ್ದ ಆಕೆಯ ಗಂಡನನ್ನೇ ಕೊಲೆ ಮಾಡಲು ಸ್ಕೆಚ್ ಹಾಕಿದ್ದು, ಆದರೆ ಹಂತಕರ ಪ್ಲಾನ್ ಜಸ್ಟ್ ಮಿಸ್ ಆಗಿ ದುರಾದೃಷ್ಟವೆಂಬತೆ ಸೋದರನನ್ನು ಪಾರು ಮಾಡಲು ಹೋಗಿ ಅಣ್ಣ ಕೊಲೆಯಾಗಿದ್ದಾನೆ!! ಈ ಕೊಲೆ ಪ್ರಕರಣ ಸಂಬಂಧ ಬುರುಡೆ ಜ್ಯೋತಿಷಿ ಕಮಲಾಕರ್ ಭಟ್‌ನನ್ನು ಸಿದ್ದಾಪುರದ ಪೊಲೀಸರು ಬಂಧಿಸಿದ್ದಾರೆ.

### ರೀಲ್ಸ್ ರಾಣಿ ಸುಚಿತ್ರ ಜೊತೆ ಅಕ್ರಮ ಸಂಬಂಧ....

ಸೋ ಕಾಲ್ಡ್ ಖ್ಯಾತ ಜ್ಯೋತಿಷಿ ಕಮಲಾಕರ್ ಭಟ್ ವಿರುದ್ಧ ಇಂಥಹದೊಂದು ಗಂಭೀರ ಆರೋಪ ಕೇಳಿ ಬಂದಿದೆ. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಮಹೇಶ್ ನಾಯ್ಕ್ ಎಂಬುವವರ ಪತ್ನಿ ಸುಚಿತ್ರಾ ಎಂಬಾಕೆಯ ಜೊತೆ ಜ್ಯೋತಿಷಿ ಕಮಲಾಕರ್


ರೀಲ್ಸ್... ಮಧ್ಯೆ ರೊಮ್ಯಾನ್ಸ್!

ಭಟ್ ಅನೈತಿಕ ಸಂಬಂಧ ಹೊಂದಿದ್ದ. ಈ ಅನೈತಿಕ ಸಂಬಂಧದ ಬಗ್ಗೆ ಪ್ರಶ್ನೆ ಮಾಡಿದ ಮಹೇಶ್ ನಾಯ್ಕ್‌ನನ್ನು ಕೊಲೆ ಮಾಡಿಸಲು ಪತ್ನಿ ಸುಚಿತ್ರಾ ಹಾಗೂ ಜ್ಯೋತಿಷಿ ಕಮಲಾಕರ್ ಭಟ್ ಪ್ಲಾನ್ ಮಾಡಿದ್ದರಂತೆ. ಆದರೆ ಈ ಪ್ಲಾನ್‌ನಲ್ಲಿ ಮಹೇಶ್ ನಾಯ್ಕ್ ಜಸ್ಟ್ ಮಿಸ್ ಆಗಿದ್ದು, ಆತನ ಸಹೋದರ ವಸಂತ್ ನಾಯ್ಕ್ ಕೊಲೆಯಾಗಿದ್ದಾರೆ!

### ತಮ್ಮನನ್ನ ಕಾಪಾಡಲು ಹೋಗಿ ಅಣ್ಣನೇ ಸತ್ತ.....


ಎಸ್ಪಿ ದೀಪನ್

ಸುಚಿತ್ರಾ ಕಳುಹಿಸಿದ್ದ ಗ್ಯಾಂಗ್ ಏಕಾಏಕಿ ಮಹೇಶ್ ನಾಯ್ಕ್ ಮೇಲೆ ಹಲ್ಲೆಗೆ ಮುಂದಾಗಿತ್ತು. ಈ ವಿಚಾರ ತಿಳಿದು ಸಹೋದರ ಮಹೇಶ್‌ನನ್ನು ಕಾಪಾಡಲು ಅಣ್ಣ ವಸಂತ ನಾಯ್ಕ್ ಓಡೋಡಿ ಬಂದಿದ್ದರು. ಗಲಾಟೆಯಲ್ಲಿ ಮಹೇಶ್ ನಾಯ್ಕ್ ಬಚಾವ್ ಆಗಿದ್ದು, ಕಾಪಾಡಲು ಬಂದ ಅಣ್ಣ ವಸಂತ್ ನಾಯ್ಕ್ ಬರ್ಬರವಾಗಿ ಕೊಲೆಯಾಗಿದ್ದಾರೆ.

ಈ ಭೀಕರ ಘಟನೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದಲ್ಲಿ ನಡೆದಿದ್ದು,ಪೊಲೀಸರು ಘಟನೆ ನಡೆದ 24 ಗಂಟೆಗಳಲ್ಲಿಯೇ ಈ ಕೊಲೆ ಸಂಬಂಧ ನಾಲ್ವರನ್ನ ಪೊಲೀಸರು ಬಂಧಿಸಿದ್ದಾರೆ. ಸುಚಿತ್ರಾ, ಸುಚಿತ್ರಾಳ ತಂದೆ ಲೋಕನಾಥ್, ಕಮಲಾಕರ ಭಟ್ ಮುಂತಾದವರನ್ನು ವಶಕ್ಕೆ ಪಡೆದ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ.


### ತಾಯಿಯ ಅಕ್ರಮ ಪ್ರಶ್ನಿಸಿದ್ದ ಮಗಳು....

ಸುಚಿತ್ರಾ ತನ್ನ ಗಂಡ ಮಹೇಶ್‌ನಿಂದ ಬೇರ್ಪಟ್ಟು ಶಿವಮೊಗ್ಗದಲ್ಲಿ ವಾಸವಿದ್ದಳು. ಅಲ್ಲಿ ಜ್ಯೋತಿಷಿ ಕಮಲಾಕರ್ ಭಟ್ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಸುಚಿತ್ರಾ, ಭಟ್ಟನ ಮನೆಯಲ್ಲಿಯೇ ಇಬ್ಬರು ಹೆಣ್ಣುಮಕ್ಕಳೊಂದಿಗೆ ವಾಸವಾಗಿದ್ದಳು. ಆದರೆ ತಾಯಿ ಸುಚಿತ್ರಾ ಹಾಗೂ ಜ್ಯೋತಿಷಿ ಕಮಲಾಕರ್ ಭಟ್ ಅನ್ಯೋನ್ಯವಾಗಿ ಜೊತೆಗಿದ್ದರು. ಇದನ್ನು ಹಿರೇ ಮಗಳು ಖಂಡಿಸಿ ಪ್ರಶ್ನೆ ಮಾಡಿದ್ದಳು. ಈ ವಿಚಾರವಾಗಿ ಮಹಾತಾಯಿ ಸುಚಿತ್ರ ಮತ್ತು ಜ್ಯೋತಿಷಿ ಕಮಲಾಕರ ಭಟ್ಟ ಇಬ್ಬರೂ ಸೇರಿಕೊಂಡು ಮಗಳಿಗೆ ಮಾನಸಿಕ ಕಿರುಕುಳ ನೀಡುತ್ತಿದ್ದರು. ಇದರಿಂದ ಕಬೇಸತ್ತ ಮಗಳು, ತಾಯಿಗೆ ತಿಳಿಸದೆ ರಹಸ್ಯವಾಗಿ ಸಿದ್ದಾಪುರದಲ್ಲಿದ್ದ ತಂದೆ ಮಹೇಶ್‌ಗೆ ಕರೆ ಮಾಡಿದ್ದಳು. ಅಲ್ಲದೆ, ಅಲ್ಲಿಂದ ತಪ್ಪಿಸಿಕೊಂಡು ಬಂದು ಚಿಕ್ಕಪ್ಪ ವಸಂತ್ ನಾಯ್ಕ ಅವರ ಮನೆಗೆ ಬಂದು ಆಶ್ರಯ ಪಡೆದಿದ್ದಳು ಎಂದು ಎಸ್ಪಿ ದೀಪನ್ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ.



ಸುಚಿತ್ರಾಳ ಗಂಡ ಮಹೇಶ್ ನಾಯ್ಕ್

### ಈ ಜಗಳ ವಿಕೋಪಕ್ಕೆ ಹೋಗಿದ್ದು ಹೇಗೆ ಎಂದರೆ...


ಮಗಳನ್ನು ಹುಡುಕಿಕೊಂಡು ಸುಚಿತ್ರಾ, ಜ್ಯೋತಿಷಿ ಕಮಲಾಕರ್ ಭಟ್‌ನ ಕಾರಿನಲ್ಲಿ ಕೆಲ ಯುವಕರ ಗುಂಪಿನೊಂದಿಗೆ ಅವರಗುಪ್ಪದ ವಸಂತ್ ಮನೆಗೆ ಬಂದಿದ್ದಳು. ಈ ವೇಳೆ ಸುಚಿತ್ರಾ ಹಾಗೂ ಅವಳ ಪತಿ ಮಹೇಶ್ ನಡುವೆ ತೀವ್ರ ವಾಗ್ವಾದ ನಡೆದಿದೆ. ಗಲಾಟೆಯ ಸಂದರ್ಭದಲ್ಲಿ ಜ್ಯೋತಿಷಿಯ ಕಾರು ಜಖಂ ಆಗಿದ್ದು, ಪರಿಸ್ಥಿತಿ ಕೈಮೀರಿ ಹೋಗಿದೆ. ಸುಚಿತ್ರಾ ಜೊತೆ ಬಂದಿದ್ದ ಯುವಕರು ಏಕಾಏಕಿ ಚಾಕುವಿನಿಂದ ದಾಳಿ ನಡೆಸಿದ್ದಾರೆ. ಜಗಳ ಬಿಡಿಸಲು ಬಂದ ವಸಂತ್ ಅವರಿಗೆ ಗಂಭೀರವಾಗಿ ಇರಿಯಲಾಗಿದ್ದು, ಅವರು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಕೊನೆಯುಸಿರೆಳೆದಿದ್ದಾರೆ.


ಸುಚಿತ್ರಾಳ ತಂದೆ ಲೋಕನಾಥ್

ಈ ಘಟನೆಗೆ ಸಂಬಂಧಿಸಿದಂತೆ ಮೃತ ವಸಂತ್ ನಾಯ್ಕ್ ಅತ್ತಿಗೆ ಸಂಧ್ಯಾ ನಾಯ್ಕ ಪೊಲೀಸರಿಗೆ ದೂರು ನೀಡಿದ್ದಾರೆ. ಆ ದೂರಿನ ಆಧಾರದ ಮೇಲೆ ಕಾರ್ಯಾಚರಣೆ ನಡೆಸಿದ ಪೊಲೀಸರು ಸುಚಿತ್ರಾ, ಲೋಕನಾಥ್ ಹಾಗೂ ಜ್ಯೋತಿಷಿ ಕಮಲಾಕರ್ ಭಟ್ ಸೇರಿದಂತೆ




ಗಣ್ಯರ ಜೊತೆ ಶಾಣ್ಯಾ ಭಟ್ಟ



☞ 11

# ಅಪಘಾತವೆಂದು ನಂಬಿಸಿ ಪತ್ನಿಯಿಂದಲೇ ಪತಿಯ ಕೊಲೆ!
## ಹಿರಿಯೂರಿನಲ್ಲಿ ಭೀಕರ ಹತ್ಯೆ ಪ್ರಕರಣ ಭೇದಿಸಿದ ಪೊಲೀಸರು

**ಹಿರಿಯೂರು ಪಟ್ಟಣದ ವೇದಾವತಿನಗರದಲ್ಲಿ ನಡೆದಿರುವ ಗಂಭೀರ ಸ್ವರೂಪದ ಗೃಹ ಹತ್ಯೆ ಪ್ರಕರಣವನ್ನು ಹಿರಿಯೂರು ಪೊಲೀಸರು ಯಶಸ್ವಿಯಾಗಿ ಭೇದಿಸಿದ್ದು, ಅಪಘಾತವೆಂದು ನಂಬಿಸಿ ಪತಿಯ ಮರಣವನ್ನು ಮುಚ್ಚಿಹಾಕಲು ಯತ್ನಿಸಿದ್ದ ಪತ್ನಿಯೇ ಕೊಲೆ ನಡೆಸಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಈ ಪ್ರಕರಣವು ಆರಂಭದಲ್ಲಿ ಅಪಘಾತ ಪ್ರಕರಣದಂತೆ ದಾಖಲಾಗಿದ್ದರೂ, ನಂತರ ನಡೆದ ಸೂಕ್ಷ್ಮ ತನಿಖೆ, ವೈದ್ಯಕೀಯ ವರದಿ ಹಾಗೂ ಕುಟುಂಬ ಸದಸ್ಯರ ಹೇಳಿಕೆಗಳಿಂದ ಇದು ಪೂರ್ವನಿಯೋಜಿತ ಹತ್ಯೆಯೆಂಬುದು ಸಾಬೀತಾಗಿದೆ.**

**ಚಿತ್ರದುರ್ಗ**
**ಹಿರಿಯೂರು ರಫೀಕ್**


ಕೊಲೆಯಾದ ಪುಟ್ಟಣ್ಣ

ಮೃತ ವ್ಯಕ್ತಿಯನ್ನು ಪುಟ್ಟಣ್ಣ ಎಂದು ಗುರುತಿಸಲಾಗಿದ್ದು, ಇವರು ಬೆಸ್ಕಾಂ ಇಲಾಖೆಯ ನಿವೃತ್ತ ನೌಕರರಾಗಿದ್ದರು. ನಿವೃತ್ತಿಯ ನಂತರ ದೊರೆತ ಹಣದಲ್ಲಿ ಪರಮೇನಹಳ್ಳಿ ಗ್ರಾಮದ ಬಳಿ ಎರಡು ಎಕರೆ ಜಮೀನು ಖರೀದಿಸಿದ್ದು, ಆಗಾಗ್ಗೆ ಹೊಲಕ್ಕೆ ಹೋಗಿ ಬರುತ್ತಿದ್ದರು. ಪುಟ್ಟಣ್ಣ ಅವರು ತಮ್ಮ ಪತ್ನಿ ಕವಿತಾ ಹಾಗೂ ಮಕ್ಕಳೊಂದಿಗೆ ವೇದಾವತಿನಗರದಲ್ಲಿ ವಾಸವಿದ್ದರು.

### ಅಪಘಾತವೆಂದು ದಾಖಲಾದ ಮೊದಲ ದೂರು

ದಿನಾಂಕ 29012026ರಂದು ಪುಟ್ಟಣ್ಣನ ಪತ್ನಿ ಕವಿತಾ ಅವರು ಹಿರಿಯೂರು ಗ್ರಾಮಾಂತರ ಪೊಲೀಸ್ ಠಾಣೆಗೆ ಹಾಜರಾಗಿ ದೂರು ನೀಡಿದ್ದು, ‘ದಿನಾಂಕ 28.01.2026ರಂದು ನನ್ನ ಗಂಡ ಪುಟ್ಟಣ್ಣ ಅವರು ಪರಮೇನಹಳ್ಳಿಯಲ್ಲಿರುವ ಹೊಲಕ್ಕೆ ಹೋಗಿ ಸಂಜೆ ಸುಮಾರು 7.30 ಗಂಟೆಗೆ ಮನೆಗೆ ವಾಪಸ್ಸು ಬಂದಿದ್ದರು. ಅವರು ಬಂದಾಗ ಅವರ ಶರ್ಟ್ ಮತ್ತು ಪ್ಯಾಂಟ್ ಹರಿದಿದ್ದು, ತಲೆ ಹಾಗೂ ಮೊಣಕಾಲಿಗೆ ಗಾಯಗಳಾಗಿದ್ದವು. ವಿಚಾರಿಸಿದಾಗ, ಹಿರಿಯೂರಿನಿಂದ ವಾಪಸ್ಸಾಗುವಾಗ ಯಾವುದೋ ಅಪರಿಚಿತ ವಾಹನ ಡಿಕ್ಕಿ ಹೊಡೆದು ಪರಾರಿಯಾಯಿತು. ನಾನು ರಸ್ತೆ ಬದಿಗೆ ಬಿದ್ದೆ ಎಂದು ಹೇಳಿದರು. ಆಸ್ಪತ್ರೆಗೆ ಹೋಗೋಣ ಎಂದು ಹೇಳಿದಾಗ ಬೆಳಿಗ್ಗೆ ಹೋಗೋಣ ಎಂದು ನಿರಾಕರಿಸಿದರು. ಮರುದಿನ ಬೆಳಿಗ್ಗೆ ಅವರನ್ನು ಆಸ್ಪತ್ರೆಗೆ ಕರೆದೊಯ್ದಾಗ ವೈದ್ಯರು ಮೃತಪಟ್ಟಿದ್ದಾರೆ ಎಂದು ತಿಳಿಸಿದರು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದರು.

ಈ ದೂರಿನ ಆಧಾರವಾಗಿ ಹಿರಿಯೂರು ಗ್ರಾಮಾಂತರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಆನಂದ್ ಅವರು ಮೊ.ಸಂ. 28/26 ಕಲಂ 281, 106(1) ಬಿಎನ್‌ಎಸ್ ಸಹಿತ 187 ಐಎಂವಿ ಆಕ್ಟ್ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದರು. ಪ್ರಾಥಮಿಕವಾಗಿ ಇದು ರಸ್ತೆ ಅಪಘಾತ ಪ್ರಕರಣವೆಂದು ಪರಿಗಣಿಸಲಾಗಿತ್ತು.

### ತನಿಖೆಯಲ್ಲಿ ಪೊಲೀಸರಿಗೆ ಮೂಡಿದ ಅನುಮಾನ

ಪ್ರಕರಣ ದಾಖಲಾಗಿದ ನಂತರ ವಿಷಯವನ್ನು ಡಿವೈಎಸ್ಪಿ ಶಿವಕುಮಾರ್ ಅವರಿಗೆ ತಿಳಿಸಲಾಯಿತು. ಅವರ ಮಾರ್ಗದರ್ಶನದಲ್ಲಿ ಹಿರಿಯೂರು ನಗರ ಠಾಣೆ ಇನ್‌ಸ್ಪೆಕ್ಟರ್ ಮಹಮದ್ ಸಿರಾಜ್ ಹಾಗೂ ಗ್ರಾಮಾಂತರ ಠಾಣೆ ಇನ್‌ಸ್ಪೆಕ್ಟರ್ ಆನಂದ್ ಅವರು ಹಿರಿಯೂರು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಮೃತದೇಹವನ್ನು ಪರಿಶೀಲಿಸಿದರು. ವೈದ್ಯಕೀಯ ವರದಿ ಹಾಗೂ ದೇಹದ ಮೇಲೆ ಕಂಡುಬಂದ ಗಾಯಗಳು ದೂರಿನಲ್ಲಿ ನೀಡಿದ ಅಪಘಾತದ ವಿವರಗಳಿಗೆ ತಾಳೆಯಾಗದೇ ಇದ್ದುದು ಪೊಲೀಸರಿಗೆ ತೀವ್ರ ಅನುಮಾನಕ್ಕೆ ಕಾರಣವಾಯಿತು.


ಎಸ್ಪಿ ರಂಜಿತ್‌ಕುಮಾರ್ ಭಂಡಾರು


ಡಿವೈಎಸ್ಪಿ ಶಿವಕುಮಾರ್



ಇನ್ಸ್‌ಪೆಕ್ಟರ್ ಮೊಹಮದ್ ಸಿರಾಜ್

ವಿಶೇಷವಾಗಿ ತಲೆಗೆ ಆಗಿರುವ ಗಾಯದ ಸ್ವರೂಪ, ಮೊಣಕಾಲಿನ ಗಾಯಗಳು ಹಾಗೂ ಬಟ್ಟೆಗಳ ಸ್ಥಿತಿಯನ್ನು ಗಮನಿಸಿದಾಗ, ಇದು ರಸ್ತೆ ಅಪಘಾತದಿಂದ ಆಗಿರುವ ಗಾಯಗಳಲ್ಲ ಎಂಬ ಶಂಕೆ ಅಧಿಕಾರಿಗಳಲ್ಲಿ ಗಟ್ಟಿಯಾಗಿ ಮೂಡಿತು. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಮರುತನಿಖೆ ಆರಂಭಿಸಲಾಯಿತು.



### ಮಗಳ ಹೇಳಿಕೆಯಿಂದ ಹೊರಬಂದ ಸತ್ಯ

ತನಿಖೆಯ ಭಾಗವಾಗಿ ಮೃತನ ಎರಡನೇ ಮಗಳು ಯೋಗಿತಾಳನ್ನು ಸೂಕ್ತ ರೀತಿಯಲ್ಲಿ ವಿಚಾರಣೆ ನಡೆಸಿದಾಗ ಪ್ರಕರಣದ ಸಂಪೂರ್ಣ ಸತ್ಯ ಬೆಳಕಿಗೆ ಬಂದಿದೆ. ಯೋಗಿತಾ ನೀಡಿದ ಹೇಳಿಕೆಯಲ್ಲಿ, ‘ನಮ್ಮ ತಂದೆ ಪುಟ್ಟಣ್ಣ ಅವರಿಗೆ ಬೇರೆ ಮಹಿಳೆಯರೊಂದಿಗೆ ಸಂಪರ್ಕವಿದ್ದು, ತಮ್ಮ ಸಂಪಾದನೆಯ ಹಣವನ್ನು ಆ ಮಹಿಳೆಯರಿಗೆ ನೀಡುತ್ತಿದ್ದರು. ಈ ವಿಷಯವನ್ನು ನಮ್ಮ ತಾಯಿ ಕವಿತಾ ವಿರೋಧಿಸುತ್ತಿದ್ದು, ದಂಪತಿಯ ನಡುವೆ ಆಗಾಗ್ಗೆ ಜಗಳ ನಡೆಯುತ್ತಿತ್ತು. ನಾವು ಮಕ್ಕಳು ಸಹ ತಂದೆಗೆ ಬುದ್ಧಿ ಹೇಳಿದರೂ ಅವರು ಕೇಳುತ್ತಿರಲಿಲ್ಲ. ನಾನು ಸಂಪಾದಿಸಿದ ಹಣವನ್ನು ಯಾರಿಗೆ ಬೇಕಾದರೂ ಕೊಡುತ್ತೇನೆ, ಅದನ್ನು ಪ್ರಶ್ನಿಸಲು ನೀವ್ಯಾರು ಎಂದು ಅವರು ಹೇಳುತ್ತಿದ್ದರು’ ಎಂದು ತಿಳಿಸಿದ್ದಾರೆ.


ಪಂಚನಾಮೆಯ ಮಂಚದ ಮೇಲೆ ಪುಟ್ಟಣ್ಣನ ಶವ

ಯೋಗಿತಾ ಹೇಳಿಕೆಯ ಪ್ರಕಾರ, ದಿನಾಂಕ 28.01.2026ರಂದು ಸಂಜೆ ಪುಟ್ಟಣ್ಣ ಅವರು ಮನೆಗೆ ಬಂದು ಟಿವಿ ನೋಡುತ್ತ ಕುಳಿತಿದ್ದು, ಅದೇ ವೇಳೆ ಫೋನ್‌ನಲ್ಲಿ ಮತ್ತೊಬ್ಬ ಮಹಿಳೆಯೊಂದಿಗೆ ಮಾತನಾಡುತ್ತಿದ್ದರು. ಊಟಕ್ಕೆ ಕರೆಯಲು ತಾಯಿ ಕವಿತಾ ಅವರು ರೂಮಿಗೆ ಹೋದಾಗ, ‘ನೀನು ಅವಳೊಂದಿಗೆ ಮಾತನಾಡಬೇಡ’ ಎಂದು ಹೇಳಿದ್ದು, ಇದರಿಂದ ಮಾತಿಗೆ ಮಾತು ಬೆಳೆದು ಜಗಳ ತೀವ್ರ ಸ್ವರೂಪ ಪಡೆದಿದೆ.

### ರಿಂಚ್ ಸ್ಪಾನರ್‌ನಿಂದ ಹಲ್ಲೆ

ಜಗಳದ ಸಂದರ್ಭದಲ್ಲಿ ಕೋಪಗೊಂಡ ಕವಿತಾ ಅವರು ಪ್ಲಂಬಿಂಗ್ ಕೆಲಸಕ್ಕೆ ಬಳಸುವ ರಿಂಚ್ ಸ್ಪಾನರ್‌ನಿಂದ ಪುಟ್ಟಣ್ಣ ಅವರ ತಲೆಗೆ ಹಾಗೂ ಮೊಣಕಾಲಿಗೆ ಬಲವಾಗಿ ಹೊಡೆದಿದ್ದಾರೆ. ತಂದೆಯ ಚೀರಾಟ ಕೇಳಿ ನಾನು ರೂಮಿಗೆ ಹೋಗಿ ನೋಡಿದಾಗ, ತಾಯಿ ಕೈಯಲ್ಲಿ ರಿಂಚ್ ಹಿಡಿದು ತಂದೆಯನ್ನು ಹೊಡೆಯುತ್ತಿರುವುದು ಕಂಡಿತು ಎಂದು ಯೋಗಿತಾ ಪೊಲೀಸರಿಗೆ ವಿವರಿಸಿದ್ದಾಳೆ.



ಗಾಯಗೊಂಡ ಪುಟ್ಟಣ್ಣ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲು ನಾವು ಹೇಳಿದರೂ ಅವರು ನಿರಾಕರಿಸಿದ್ದು, ಮರುದಿನ ಬೆಳಿಗ್ಗೆ ಸುಮಾರು 10 ಗಂಟೆಗೆ ಹಿರಿಯೂರು ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ವೈದ್ಯರು ಪರಿಶೀಲಿಸಿ ಹೆಚ್ಚಿನ ಚಿಕಿತ್ಸೆಗೆ ಬೇರೆಡೆ ಕರೆದೊಯ್ಯುವಂತೆ ತಿಳಿಸಿದರು. ಆ್ಯಂಬುಲೆನ್ಸ್ ವ್ಯವಸ್ಥೆ ಮಾಡುವಷ್ಟರಲ್ಲಿ ಪುಟ್ಟಣ್ಣ ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದರು.


### ಆರೋಪಿಯ ಬಂಧನ

ಮಗಳ ಹೇಳಿಕೆ ಹಾಗೂ ವೈದ್ಯಕೀಯ ಸಾಕ್ಷ್ಯಾಧಾರಗಳ ಆಧಾರದಲ್ಲಿ ಗ್ರಾಮಾಂತರ ಠಾಣೆ ಇನ್‌ಸ್ಪೆಕ್ಟರ್ ಆನಂದ್ ಅವರು ಕ್ರೈಂ ನಂ. 28/26 ಕಲಂ 103 ಬಿಎನ್‌ಎಸ್ ಅಡಿಯಲ್ಲಿ ಕೊಲೆ ಪ್ರಕರಣ ದಾಖಲಿಸಿದರು. ಘಟನೆ ನಗರ ಠಾಣಾ ವ್ಯಾಪ್ತಿಯಲ್ಲಿ ನಡೆದಿರುವುದರಿಂದ ಪ್ರಕರಣವನ್ನು ಹಿರಿಯೂರು ನಗರ ಪೊಲೀಸ್ ಠಾಣೆಗೆ ವರ್ಗಾಯಿಸಲಾಯಿತು.

ಹಿರಿಯೂರು ನಗರ ಠಾಣೆ ಇನ್‌ಸ್ಪೆಕ್ಟರ್ ಮಹಮದ್ ಸಿರಾಜ್ ಅವರು ಮುಂದಿನ ತನಿಖೆಯನ್ನು ಕೈಗೊಂಡು ಆರೋಪಿತೆ ಕವಿತಾ ಅವರನ್ನು ಬಂಧಿಸಿದರು. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

### ಪೊಲೀಸರ ಶ್ಲಾಘನೀಯ ಕಾರ್ಯ

ಆರಂಭದಲ್ಲಿ ಅಪಘಾತವೆಂದು ದಾಖಲಾಗಿದ್ದ ಪ್ರಕರಣವನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಸತ್ಯಾಂಶವನ್ನು ಹೊರತಂದ ಹಿರಿಯೂರು ಪೊಲೀಸರ ಕಾರ್ಯವನ್ನು ಸಾರ್ವಜನಿಕರು ಶ್ಲಾಘಿಸಿದ್ದಾರೆ. ಪ್ರಕರಣದ ತನಿಖೆ ಮುಂದುವರಿದಿದ್ದು, ಇನ್ನಿತರ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವ ಕಾರ್ಯ ಪ್ರಗತಿಯಲ್ಲಿದೆ.



# ಹೊಸಪೇಟೆಯಲ್ಲಿ ಮೂರು ಮಕ್ಕಳ ತಾಯಿಯ ಲವ್ವಿಡವ್ವಿ; ಖಾಜಾನ ಪ್ರೀತಿಗೆ ಮನಸೋತು ಹೆಣವಾದಳು!

ವಿಜಯನಗರ ಜಿಲ್ಲೆಯ ಹೊಸಪೇಟೆ ನಗರದಲ್ಲಿ ಮೂರು ಮಕ್ಕಳ ತಾಯಿಯೊಬ್ಬರನ್ನು ಪರಿಚಿತ ವ್ಯಕ್ತಿಯೇ ಕತ್ತು ಕೊಯ್ದು ಹತ್ಯೆ ಮಾಡಿರುವ ಘಟನೆ ಬೆಳಕಿಗೆ ಬಂದಿದೆ. ಘಟನೆ ನಗರದಲ್ಲಿ ಆತಂಕ ಮೂಡಿಸಿದ್ದು, ಪ್ರಕರಣ ದಾಖಲಿಸಿಕೊಂಡ ಪೊಲೀಸರು ತೀವ್ರ ಕಾರ್ಯಾಚರಣೆ ನಡೆಸಿ ಕೆಲವೇ ಗಂಟೆಗಳೊಳಗೆ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮೃತ ಮಹಿಳೆಯನ್ನು ಉಮಾ (32) ಎಂದು ಗುರುತಿಸಲಾಗಿದ್ದು, ಅವರು ಕಳೆದ ಎಂಟು ವರ್ಷಗಳಿಂದ ಪತಿಯಿಂದ ದೂರವಿದ್ದು ಜೀವನ ಸಾಗಿಸುತ್ತಿದ್ದರು ಎಂದು ತಿಳಿದುಬಂದಿದೆ.


ಕೊಲೆಯಾದ ಉಮಾ

**ಮಕ್ಕಳ ಜವಾಬ್ದಾರಿ ಮತ್ತು ಜೀವನೋಪಾಯ**

ಉಮಾಗೆ ಸುಮಾರು 12 ವರ್ಷಗಳ ಹಿಂದೆ ಆಂಧ್ರ ಪ್ರದೇಶದ ಪಾತಿಕೊಂಡ ಗ್ರಾಮದ ವ್ಯಕ್ತಿಯೊಂದಿಗೆ ವಿವಾಹವಾಗಿತ್ತು. ಆರಂಭಿಕ ವರ್ಷಗಳಲ್ಲಿ ದಾಂಪತ್ಯ ಜೀವನ ಸುಗಮವಾಗಿದ್ದರೂ, ನಂತರ ಗಂಡ ಹೆಂಡತಿಯ ನಡುವೆ ಕಲಹ ಉಂಟಾಗಿ, ಇಬ್ಬರೂ ದೂರವಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಉಮಾ ತಮ್ಮ ತವರೂರಾದ ಹೊಸಪೇಟೆ ನಗರಕ್ಕೆ ಬಂದು ನೆಲೆಸಿದ್ದು, ಚಾಪಲಗಡ್ಡ ಪ್ರದೇಶದಲ್ಲಿ ವಾಸವಿದ್ದರು. ಮೂವರು ಗಂಡು ಮಕ್ಕಳ ಪೈಕಿ ಹಿರಿಯ ಮಗ ತಂದೆಯೊಂದಿಗೆ ವಾಸವಿದ್ದರೆ, ಉಳಿದ ಇಬ್ಬರು ಮಕ್ಕಳನ್ನು ಉಮಾ ತಾವೇ ನೋಡಿಕೊಳ್ಳುತ್ತಿದ್ದರು.

ಮಕ್ಕಳ ಶಿಕ್ಷಣ ಹಾಗೂ ಜೀವನ ನಿರ್ವಹಣೆಗಾಗಿ ಉಮಾ ಹೊಸಪೇಟೆ ರೈಲ್ವೆ ನಿಲ್ದಾಣದಲ್ಲಿ ಸ್ಟಾಲ್ ಒಂದರಲ್ಲಿ ಕೆಲಸ ಮಾಡಿಕೊಂಡು ಕುಟುಂಬವನ್ನು ಪೋಷಿಸುತ್ತಿದ್ದರು. ಇದೇ ಸಂದರ್ಭದಲ್ಲಿ ರೈಲ್ವೆ ನಿಲ್ದಾಣದ ವಸ್ತು ಪ್ರದರ್ಶನದಲ್ಲಿ ಕೆಲಸ ಮಾಡುತ್ತಿದ್ದ ಖಾಜಾ ಎಂಬ ಯುವಕನ ಪರಿಚಯ ಉಮಾಗೆ ಆಗಿದೆ. ಆರಂಭದಲ್ಲಿ ಮಾತುಕತೆಗೆ ಸೀಮಿತವಾಗಿದ್ದ ಪರಿಚಯ, ನಂತರ ಆತ್ಮೀಯತೆಯಾಗಿ ಬೆಳೆದಿದ್ದು, ಕೆಲ ತಿಂಗಳ ಬಳಿಕ ಇಬ್ಬರೂ ಮೊಬೈಲ್ ಸಂಖ್ಯೆಯನ್ನು ವಿನಿಮಯ ಮಾಡಿಕೊಂಡಿದ್ದಾರೆ.

**ಗುಪ್ತ ವಿವಾಹ**

ಸಂಖ್ಯೆ ವಿನಿಮಯದ ಬಳಿಕ ದೂರವಾಣಿ ಕರೆಗಳು ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಸಂಪರ್ಕ ಹೆಚ್ಚಾಗಿದ್ದು, ಕುಟುಂಬದವರಿಗೆ ಈ ವಿಚಾರ ತಿಳಿದಿದ್ದರೂ ಉಮಾ ಆತನನ್ನು ಸ್ನೇಹಿತನಾಗಿ ಪರಿಚಯಿಸಿದ್ದರು. ಆದರೆ ಕಾಲಕ್ರಮೇಣ ಇಬ್ಬರ ನಡುವೆ ಪ್ರೇಮ ಸಂಬಂಧ ಬೆಳೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪರಿಚಯಕ್ಕೆ ಸುಮಾರು ಎಂಟು ತಿಂಗಳು ಕಳೆದ ನಂತರ, ಕುಟುಂಬದವರಿಗೆ ತಿಳಿಸದೇ ಸುಮಾರು ನಾಲ್ಕು ತಿಂಗಳ ಹಿಂದೆ ಇಬ್ಬರೂ ಗುಪ್ತವಾಗಿ ಮದುವೆಯಾಗಿದ್ದಾರೆ ಎನ್ನಲಾಗಿದೆ.


ಎಸ್ಪಿ ಎಸ್. ಜಾಹ್ನವಿ

ಆರಂಭಿಕ ಹಂತದಲ್ಲಿ ಸಂಬಂಧ ಸುಗಮವಾಗಿದ್ದರೂ, ನಂತರ ಹಣಕಾಸಿನ ವಿಚಾರವಾಗಿ ಇಬ್ಬರ ನಡುವೆ ಮನಸ್ತಾಪ ಉಂಟಾಗಿದೆ. ಇದರೊಂದಿಗೆ ಪರಸ್ಪರ ಅನುಮಾನವೂ ಹೆಚ್ಚಾಗಿದ್ದು, ಪದೇಪದೇ ಗಲಾಟೆಗಳು ನಡೆದಿವೆ ಎಂದು ತನಿಖೆಯಿಂದ ತಿಳಿದುಬಂದಿದೆ. ಆರೋಪಿಯು ಉಮಾಳ ಮೇಲೆ ಅತಿಯಾದ ಅನುಮಾನ ತೋರಿಸುತ್ತಿದ್ದನೆಂದು ಹೇಳಲಾಗಿದೆ. ಈ ಕಾರಣದಿಂದ ಉಮಾ ಮಾನಸಿಕ ಒತ್ತಡ ಅನುಭವಿಸುತ್ತಿದ್ದರು ಎಂಬ ಮಾಹಿತಿ ಲಭ್ಯವಾಗಿದೆ.

ಜನವರಿ 6ರಂದು ಹಣಕಾಸು ಹಾಗೂ ವೈಯಕ್ತಿಕ ವಿಚಾರವಾಗಿ ಉಮಾ ಮತ್ತು ಖಾಜಾ ನಡುವೆ ಗಲಾಟೆ ನಡೆದಿದೆ. ಗಲಾಟೆಯ ನಂತರ ಬೆಳಗಿನ ಜಾವ ಸುಮಾರು 4.30ರ ವೇಳೆಗೆ ಖಾಜಾ ಉಮಾಳ ಮನೆ ಸಮೀಪಕ್ಕೆ ಬಂದಿದ್ದಾನೆ. ಈ ವೇಳೆ ಉಮಾ ಪಕ್ಕದ ಮನೆಯ ಮಹಡಿಗೆ ತೆರಳಿದ್ದು, ಅಲ್ಲಿ ಇಬ್ಬರೂ ಮಾತುಕತೆ ನಡೆಸಿದ್ದಾರೆ. ಈ ಸಂದರ್ಭ ಆರೋಪಿಯು ಪೂರ್ವನಿಯೋಜಿತವಾಗಿ ತರಿಸಿಕೊಂಡಿದ್ದ ಹರಿತವಾದ ಚಾಕುವಿನಿಂದ ಉಮಾಳ ಕತ್ತನ್ನು ಕೊಯ್ದು ಹತ್ಯೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಉಮಾ ಸ್ಥಳದಲ್ಲೇ ಮೃತಪಟ್ಟಿದ್ದಾರೆ.


ಆರೋಪಿ ಖಾಜಾ

**ಶವ ಪತ್ತೆ**

ರಾತ್ರಿ ಕೆಲಸ ಮುಗಿಸಿ ಮನೆಗೆ ಬಂದಿದ್ದ ಉಮಾ, ಬೆಳಗಿನ ಜಾವ ಹೊರಗೆ ಹೋದವರು ಮರಳಿ ಮನೆಗೆ ಬಂದಿರಲಿಲ್ಲ. ಆತಂಕಗೊಂಡ ಕುಟುಂಬದವರು ಹುಡುಕಾಟ ನಡೆಸಿದ್ದಾರೆ. ಈ ನಡುವೆ ಪಕ್ಕದ ಮನೆಯ ಮಹಡಿಯಲ್ಲಿ ಬೆಕ್ಕುಗಳು ಕಾದಾಡುತ್ತಿರುವುದನ್ನು ಗಮನಿಸಿದ ನಿವಾಸಿಗಳು ಪರಿಶೀಲನೆ ನಡೆಸಿದಾಗ, ಉಮಾಳ ಮೃತದೇಹ ರಕ್ತದ ಮಡುವಿನಲ್ಲಿ ಪತ್ತೆಯಾಗಿದೆ. ತಕ್ಷಣ ಚಿತ್ತವಾಡ್ಗಿ ಪೊಲೀಸ್ ಠಾಣೆಗೆ ಮಾಹಿತಿ ನೀಡಲಾಗಿದ್ದು, ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆರೋಪಿಯ ಪತ್ತೆಗೆ ವಿಶೇಷ ತಂಡಗಳನ್ನು ರಚಿಸಿದರು. ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಾಹ್ನವಿ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ತನಿಖೆಗೆ ಮಾರ್ಗದರ್ಶನ ನೀಡಿದರು. ಮೃತಳ ಮೊಬೈಲ್ ದೂರವಾಣಿ ಕರೆ ವಿವರಗಳು ಹಾಗೂ ಟವರ್ ಲೊಕೇಷನ್ ಆಧರಿಸಿ ತನಿಖೆ ನಡೆಸಿದ ಪೊಲೀಸರು, ಪ್ರಕರಣ ದಾಖಲಾಗಿದ ನಾಲ್ಕು ಗಂಟೆಗಳೊಳಗೆ ಹೊಸಪೇಟೆ ನಗರದಲ್ಲೇ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಈ ಘಟನೆ ಉಮಾಳ ಕುಟುಂಬವನ್ನು ತೀವ್ರ ಆಘಾತಕ್ಕೆ ಒಳಪಡಿಸಿದೆ. ಈಗಾಗಲೇ ತಂದೆಯಿಂದ ದೂರವಾಗಿದ್ದ ಮಕ್ಕಳು, ತಾಯಿಯನ್ನು ಕಳೆದುಕೊಂಡು ಅಸಹಾಯಕ ಸ್ಥಿತಿಗೆ ತಲುಪಿದ್ದಾರೆ. ಪ್ರಕರಣವು ನಗರದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿದ್ದು, ಪೊಲೀಸರು ಮುಂದಿನ ತನಿಖೆಯನ್ನು ಮುಂದುವರಿಸಿದ್ದಾರೆ.

---

9 ☞

ಒಟ್ಟು ಏಳು ಮಂದಿ ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ.

**ಸದನದಲ್ಲಿಯೂ ಬಿಸಿ ಬಿಸಿ ಚರ್ಚೆ...**

ಕಾರಾವಾರದ ಸಿದ್ದಾಪುರದಲ್ಲಿ ನಡೆದ ನಾಯ್ಕ್ ಕೊಲೆ ಪ್ರಕರಣದ ಆರೋಪದಡಿ ಜ್ಯೋತಿಷಿ ಕಮಲಾಕರ್ ಭಟ್ ಬಂಧನಕ್ಕೊಳಗಾಗಿದ್ದು, ಈ ಸಂಗತಿ ಸದನದಲ್ಲಿ ಚರ್ಚೆಯಾಗಿದೆ! ಮೇಲ್ಮನೆಯಲ್ಲಿ ಈ ಬಗ್ಗೆ ಚರ್ಚೆ ನಡೆದು ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷವಾದ ಬಿಜೆಪಿ ನಡುವೆ ವಾದ ವಿವಾದ ಪ್ರತಿಧ್ವನಿಸಿತು. ಆರೋಪಿಯನ್ನ ಪ್ರೋತ್ಸಾಹಿಸಿ ಬೆಳೆಸಿರುವ ಬಿಜೆಪಿ ಶಾಸಕ ಸುರೇಶ್ ಕುಮಾರ್ ಅವರು ಹತ್ಯೆಯ ನೈತಿಕ ಹೊಣೆ ಹೊರಬೇಕೆಂದು ವಿಧಾನಪರಿಷತ್‌ನ ಕಾಂಗ್ರೆಸ್ ಬಿ.ಕೆ. ಹರಿಪ್ರಸಾದ್ ಆಗ್ರಹಿಸಿದರು.


ಪೊಲೀಸ್ ವಶದಲ್ಲಿ ಐನಾತಿ ಜೋಡಿ

ಕೊಲೆ ಪ್ರಕರಣ ಆರೋಪದಡಿ ಸಿಲುಕಿರುವ ಜ್ಯೋತಿಷಿ ಜೊತೆ ಶಾಸಕ ಸುರೇಶ್ ಕುಮಾರ್ ತೆಗೆಸಿಕೊಂಡಿರುವ ಫೋಟೋವನ್ನು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಹರಿಪ್ರಸಾದ್ ಅವರು, ಕೊಲೆ ಆರೋಪಿ ಕಮಲಾಕರ ಭಟ್ಟನನ್ನು ಓರ್ವ ಶಾಸಕನಾಗಿ ಪ್ರೋತ್ಸಾಹಿಸಿ ಬೆಳೆಸಿದ್ದು ಸಂವಿಧಾನಕ್ಕೆ ಮಾಡುವ ಅಪಚಾರವಲ್ಲವೇ? ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತಿರೋಧವಾಗಿ ಸುರೇಶ್ ಕುಮಾರ್ ಸಹ ಸಿದ್ದರಾಮಯ್ಯ ಜೊತೆ ಇರುವ ಆರೋಪಿ ಫೋಟೊವನ್ನ ಪೋಸ್ಟ್ ಮಾಡಿದಲ್ಲದೆ, ಸಿದ್ದಾಪುರದಲ್ಲಿ ನಡೆದ ಹೇಯ ಕೃತ್ಯಕ್ಕೆ ರಾಜಕೀಯ ಬಣ್ಣ ಬಳಿದು ನನ್ನ ಹೆಸರನ್ನು ತಳುಕು ಹಾಕುವ ಮೂಲಕ ಹರಿಪ್ರಸಾದ್ ಅವರು ಬೌದ್ಧಿಕ ದಿವಾಳಿತನ ಎತ್ತಿ ತೋರಿಸುತ್ತದೆ ಎಂದು ಗುಡುಗಿದರು.

ಇಷ್ಟಕ್ಕೂ ಹಿರಿಯ ಕಾಂಗ್ರೆಸ್ ಲೀಡರ್ ಬಿ. ಕೆ. ಹರಿಪ್ರಸಾದ್ ಅವರ ಪೋಸ್ಟ್‌ನಲ್ಲಿ ಏನಿದೆ ಅಂತ ನೋಡುವುದಾದರೆ, 'ಕಾರವಾರದ ಸಿದ್ದಾಪುರದಲ್ಲಿ ಕಮಲಾಕರ್ ಭಟ್ ಹೆಸರಿನ ಜ್ಯೋತಿಷಿಯ ಅಕ್ರಮ ಸಂಬಂಧಕ್ಕೆ 41 ವರ್ಷದ ಅಮಾಯಕ ವಸಂತ್ ನಾಯ್ಕ್ ಬಲಿಯಾಗಿದ್ದಾರೆ. ಈ ಕ್ರಿಮಿನಲ್ ಪ್ರಕರಣ ನ್ಯಾಯಯುತ ತನಿಖೆಯಾಗಿ, ನ್ಯಾಯಾಲಯ ತೀರ್ಪು ಕೊಡುತ್ತದೆ. ಆದರೆ, ಇಂತಹ ಪ್ರಕರಣದಲ್ಲಿ ಸಂಘ ಪರಿವಾರದ ಹಿನ್ನೆಲೆಯಿಂದ ಬಂದ ಬಿಜೆಪಿಯ ಸುರೇಶ್ ಕುಮಾರ್ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅಂತಹ ಜನಪ್ರತಿನಿಧಿಗಳ ಪಾತ್ರ ಏನು? ಎಂಬುದು ಸ್ವಾಸ್ಥ್ಯ ಸಮಾಜ ದೃಷ್ಟಿಯಿಂದ ಮುಖ್ಯವಾಗುತ್ತದೆ. ಕೊಲೆ ಆರೋಪಿ ಜೋತಿಷಿ 'ಗುರೂಜಿ' ಕಮಲಾಕರ ಭಟ್ಟನನ್ನು ಓರ್ವ ಶಾಸಕನಾಗಿ ಪ್ರೋತ್ಸಾಹಿಸಿ ಬೆಳೆಸಿದ್ದು, ಸಂವಿಧಾನಕ್ಕೆ ಮಾಡುವ ಅಪಚಾರವಲ್ಲವೇ? ಎಂದು ಪ್ರಶ್ನಿಸಿದ್ದಾರೆ, ಬಿ ಕೆ ಹರಿಪ್ರಸಾದ್!


ಜೋಡಿ ಹಕ್ಕಿ ವಾಸವಿದ್ದ ಮನೆ

ಮೂಢನಂಬಿಕೆಯ 'ಅಕ್ರಮ ದಂಧೆ'ಗಳನ್ನು ಬಿಜೆಪಿಯ ಸ್ವಯಂ ಘೋಷಿತ ಸಜ್ಜನ ಶಾಸಕ ಬಿರುದಾಂಕಿತ ಬಿಜೆಪಿಯ ಸುರೇಶ್ ಕುಮಾರ್ ಬೆನ್ನುತಟ್ಟಿ ಪ್ರೋತ್ಸಾಹಿಸಿ ಬೆಳೆಸಿದ್ದಾರೆ. ಹೀಗಾಗಿ ಹತ್ಯೆ ಪ್ರಕರಣದಲ್ಲಿ ಸುರೇಶ್ ಕುಮಾರ್ ನೈತಿಕ ಹೊಣೆ ಹೊರಬೇಕೆಂದು ಆಗ್ರಹಿಸಿದ್ದಾರೆ.


ಸದನದಲ್ಲಿ ಭಾರಿ ಚರ್ಚೆ...

**ಸುರೇಶ್‌ಕುಮಾರ್ ತಿರುಗೇಟು....**

ತಮ್ಮ ಮೇಲಿನ ಆರೋಪಕ್ಕೆ ತಿರುಗೇಟು ನೀಡಿರುವ ಶಾಸಕ ಸುರೇಶ್ ಕುಮಾರ್ ಅವರು, ಸಿದ್ದರಾಮಯ್ಯ ಜೊತೆಗೆ ಕಮಲಾಕರ್ ಭಟ್ ತೆಗೆಸಿಕೊಂಡಿರುವ ಫೋಟೋವನ್ನು ಪೋಸ್ಟ್ ಮಾಡಿದ್ದಾರೆ. ಫೋಟೋ ಪ್ರಕಾರ ಕೊಲೆ ಪ್ರಕರಣದಲ್ಲಿ ರಾಜ್ಯದ ಮುಖ್ಯಮಂತ್ರಿಯೂ ಭಾಗಿಯೇ? ಕೊಳೆತ ಮನಸ್ಸಿಗೆ ಕೊಳೆತ ವಿಚಾರಗಳೇ ಬರುವುದು ಅಲ್ಲವೇ? ಎಂದು ಹರಿಪ್ರಸಾದ್ ಅವರನ್ನು ಸುರೇಶ್ ಕುಮಾರ್ ಪ್ರಶ್ನಿಸಿದ್ದಾರೆ!

ಕಾರವಾರದ ಸಿದ್ದಾಪುರದಲ್ಲಿ ನಡೆದ ಹೇಯ ಕೃತ್ಯವೊಂದನ್ನು ಮುಂದಿಟ್ಟುಕೊಂಡು, ಅದಕ್ಕೆ ರಾಜಕೀಯ ಬಣ್ಣ ಬಳಿದು, ನನ್ನ ಹೆಸರನ್ನು ತಳುಕು ಹಾಕಲು ನೀವು ನಡೆಸಿರುವ ಪ್ರಯತ್ನ ನಿಮ್ಮ 'ಬೌದ್ಧಿಕ ದಿವಾಳಿತನ'ವನ್ನು ಎತ್ತಿ ತೋರಿಸುವಂತಿದೆ. ಒಬ್ಬ ವ್ಯಕ್ತಿ ಮಾಡಿದ ಅಪರಾಧಕ್ಕೆ, ಆತನ ಪರಿಚಯವಿದ್ದ ಜನಪ್ರತಿನಿಧಿಯೇ 'ನೈತಿಕ ಹೊಣೆ' ಹೊರಬೇಕು ಎಂಬ ನಿಮ್ಮ ವಾದ ಬಾಲಿಶವಾದದ್ದು. ಸಾರ್ವಜನಿಕ ಜೀವನದಲ್ಲಿರುವ ನಾವು ಸಾವಿರಾರು ಜನರನ್ನು ಭೇಟಿಯಾಗುತ್ತೇವೆ. ಯಾರೋ ಒಬ್ಬರು ನನ್ನ ಜೊತೆ ಫೋಟೋ ತೆಗೆಸಿಕೊಂಡರು ಅಥವಾ ಪರಿಚಯಸ್ಥರಾಗಿದ್ದರು ಎಂಬ ಒಂದೇ ಕಾರಣಕ್ಕೆ, ಅವರ ಖಾಸಗಿ ಬದುಕಿನ ವಿಕೃತಿಗಳಿಗೆ ಅಥವಾ ಅವರು ಎಸಗುವ ಕ್ರಿಮಿನಲ್ ಕೃತ್ಯಗಳಿಗೆ ನಾನು ಉತ್ತರದಾಯಿಯಾಗುತ್ತೇನೆಯೇ? ಹಾಗಾದರೆ, ನಿಮ್ಮ ಪಕ್ಷದ ನಾಯಕರ ಜೊತೆ ಫೋಟೋ ತೆಗೆಸಿಕೊಂಡವರು, ಅವರ ಆಪ್ತವಲಯದಲ್ಲಿ ಗುರುತಿಸಿಕೊಂಡವರು ಜೈಲು ಪಾಲಾದ ಉದಾಹರಣೆಗಳಿಲ್ಲವೇ? ಆಗ ನಿಮ್ಮ ನಾಯಕರುಗಳೆಲ್ಲ ಆ ಅಪರಾಧಗಳ 'ನೈತಿಕ ಹೊಣೆ' ಹೊತ್ತಿದ್ದಾರೆಯೇ?' ಎಂದು ಶಾಸಕ ಸುರೇಶ್ ಕುಮಾರ್ ಪ್ರಶ್ನಿಸಿದ್ದಾರೆ!! ☯

# ಸೌಜನ್ಯ ಫೈಲ್ಸ್



18

ನಿರೂಪಣೆ :

**ಮೋಹನ್ ಬೋಳಂಗಡಿ**

# ಸಿಬಿಐ ಅಧಿಕಾರಿಗಳು ಆರೋಪಿಯ ಫೋಟೊ ತೋರಿಸಿದ್ದರು!!

ಸೌಜನ್ಯ ಪ್ರಕರಣದ ಮತ್ತೊಬ್ಬ ಸಾಕ್ಷಿ ಪ್ರಭಾಕರ ಗೌಡ. ಧರ್ಮಸ್ಥಳ ಗ್ರಾಮದ ಬೊಳ್ಯ ನಿವಾಸಿ ಸೇಸಗೌಡ ಎಂಬವರ ಮಗ. 49 ವರ್ಷದ ಪ್ರಭಾಕರ ಗೌಡ ನೇತ್ರಾವತಿ ಸ್ನಾನಘಟ್ಟದಲ್ಲಿ ಅಂಗಡಿ ಹೊಂದಿದ್ದಾರೆ. ಆ ಅಂಗಡಿಯಲ್ಲಿ ಭಕ್ತಾದಿಗಳಿಗೆ ಬೇಕಾದಂತಹ ಸೋಪು, ಶ್ಯಾಂಪು, ಬಟ್ಟೆ ಮಾರಾಟ ಮಾಡುತ್ತಿದ್ದರು. ಇವರ ಅಂಗಡಿಯ ಪಕ್ಕದಲ್ಲಿಯೇ ವಿಠಲಗೌಡರ ಹೊಟೇಲು ಇದೆ. ಹತ್ಯೆಯಾದ ಸೌಜನ್ಯ ವಿಠಲಗೌಡರ ಅಕ್ಕನ ಮಗಳಾಗಿದ್ದು, ಅವಳು ವಿಠಲಗೌಡರ ಹೊಟೇಲಿಗೆ ಬರುತ್ತಿದ್ದುದರಿಂದ ನೋಡಿ ಪರಿಚಯ ಇದ್ದವರು ಪ್ರಭಾಕರ ಗೌಡ. ಸೌಜನ್ಯ ನಾಪತ್ತೆಯಾದ ದಿನದಂದು ರಾತ್ರಿ ವಿಷಯ ತಿಳಿದಿದ್ದರೂ ಹುಡುಕಾಟ ನಡೆಸಲು ಪ್ರಭಾಕರ ಗೌಡ ಹೋಗಿರಲಿಲ್ಲ. ಸೌಜನ್ಯ ಶವ ಪತ್ತೆಯಾದ ನಂತರ ಪ್ರಭಾಕರ ಗೌಡ ಸ್ಥಳಕ್ಕೆ ಹೋಗಿದ್ದರು. ಸ್ಥಳದಲ್ಲಿ ಬಹಳಷ್ಟು ಜನರು ಸೇರಿದ್ದರಿಂದ ಶವವನ್ನು ನೇರವಾಗಿ ನೋಡಲು ಸಾಧ್ಯವಾಗಿರಲಿಲ್ಲ. ದೂರದಿಂದ ಗಮನಿಸಿದ್ದರು.



ಸಂತೋಷ್ ರಾವ್

ಸೌಜನ್ಯ ಪ್ರಕರಣ ಸಿಬಿಐಗೆ ಹಸ್ತಾಂತರವಾದ ಬಳಿಕ ಸ್ಥಳಕ್ಕೆ ಬಂದಿದ್ದ ಸಿಬಿಐ ಅಧಿಕಾರಿಗಳು ಸೌಜನ್ಯ ಪ್ರಕರಣದ ಆರೋಪಿ ಸಂತೋಷ್‌ರಾವ್‌ನ ಭಾವಚಿತ್ರವನ್ನು ತೋರಿಸಿದ್ದರು. ಆತನ ಪರಿಚಯ ಇದೆಯಾ ಎಂದು ಕೇಳಿದ್ದರು. ಆ ಸ್ನಾನಘಟ್ಟಕ್ಕೆ ಬಹಳ ಜನರು ಬೇರೆ ಬೇರೆ ರೀತಿ ಬರುವವರಿದ್ದು ಫೋಟೋದಲ್ಲಿದ್ದಂತಹ ವ್ಯಕ್ತಿಯನ್ನು ನೋಡಿಲ್ಲ ಎಂದು ಸಿಬಿಐ ಅಧಿಕಾರಿಗಳಿಗೆ ತಿಳಿಸಿದ್ದರು. ಶವ ಸಿಕ್ಕ ನಂತರ ಆರೋಪಿ ಸಂತೋಷ್‌ರಾವ್‌ನನ್ನು ಸ್ಥಳೀಯರು ಹಿಡಿದು ಪೊಲೀಸರ ವಶಕ್ಕೆ ಕೊಟ್ಟಿದ್ದರು ಎಂಬುದು ಟಿವಿ ಮತ್ತು ಪತ್ರಿಕೆಗಳಲ್ಲಿ ಬಂದ ವರದಿಯಿಂದಾಗಿ ಗೊತ್ತಾಯಿತು. ಟಿವಿ ಮತ್ತು ಪತ್ರಿಕೆಗಳಲ್ಲಿ ಆರೋಪಿಯ ಭಾವಚಿತ್ರವನ್ನು ನೋಡಿದ್ದರಿಂದ ಆತನನ್ನು ಗುರುತಿಸಬಹುದು ಎಂದು ಸಿಬಿಐ ಪರ ವಕೀಲರ ಪ್ರಶ್ನೆಗೆ ಪ್ರಭಾಕರ ಗೌಡ ಉತ್ತರಿಸಿದ್ದರು. ಸಂತೋಷ್‌ರಾವ್ ಸೌಜನ್ಯಳನ್ನು ಅತ್ಯಾಚಾರ ಮಾಡಿ ಕೊಲೆ ಮಾಡಿದ್ದಾನೆ ಎಂಬುದು ನನಗೆ ಪತ್ರಿಕೆಗಳಲ್ಲಿ ಬಂದ ವರದಿಯ ಆಧಾರದಲ್ಲಿ ಗೊತ್ತಾಯಿತು. ಸಿಬಿಐ ಅಧಿಕಾರಿಗಳು ತನ್ನನ್ನು ವಿಚಾರಣೆ ಮಾಡಿ ಹೇಳಿಕೆ ದಾಖಲಿಸಿಕೊಂಡಿದ್ದಾರೆ ಎಂದು ನ್ಯಾಯಾಲಯಕ್ಕೆ ವಿವರಿಸಿದರು.

ಆರೋಪಿ ಪರ ವಕೀಲ ಮೋಹಿತ್ ಕುಮಾರ್ ಅವರ ಪಾಟೀ ಸವಾಲಿಗೆ ಉತ್ತರಿಸಿದ ಪ್ರಭಾಕರ ಗೌಡ ಅವರು ನನ್ನ, ವಿಠಲಗೌಡ ಮತ್ತು ಗುರುಕಿರಣ್ ಅವರ ಅಂಗಡಿ ಒಂದೇ ಸಾಲಿನಲ್ಲಿ ಇದೆ. ಸ್ವಲ್ಪ ಮುಂದಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದ ಪ್ರಕೃತಿ ಚಿಕಿತ್ಸಾಲಯ ಇದೆ. ಅಲ್ಲಿ ವಾಚ್‌ಮೆನ್ ಮತ್ತು ಸಿಸಿಟಿವಿ ಇದೆ ಎಂದು ಹೇಳಿದರು. ಸೌಜನ್ಯ ನಾಪತ್ತೆಯಾದ ದಿನದಂದು ಮಧ್ಯಾಹ್ನ ಜೋರು ಮಳೆ ಇತ್ತು. ನಾನು ಘಟನಾ ಸ್ಥಳದ ಹತ್ತಿರ ಹೋಗಿರಲಿಲ್ಲ. ಶವ ಸಂಸ್ಕಾರಕ್ಕೂ ಹೋಗಿರಲಿಲ್ಲ ಎಂದು ಪಾಟೀಸವಾಲಿಗೆ ಉತ್ತರಿಸಿದರು. ಶವ ಸಿಕ್ಕ ಮಾರನೇ ದಿನ ಅಂದರೆ 11ನೇ ತಾರೀಕಿನಂದು ಉಜಿರೆ, ಬೆಳ್ತಂಗಡಿ ಮತ್ತು ಧರ್ಮಸ್ಥಳದಲ್ಲಿ ನಿಜವಾದ ಆರೋಪಿತರನ್ನು ದಸ್ತಗಿರಿ ಮಾಡಬೇಕು ಎಂದು ಪ್ರತಿಭಟನೆ ನಡೆದಿತ್ತು. ಧರ್ಮಸ್ಥಳದಲ್ಲಿ ನಡೆದಿದ್ದ ಪ್ರತಿಭಟನೆಯನ್ನು ಭಾಗವಹಿಸಿದ್ದೆ. ಆ ಹುಡುಗಿಗೆ ಈ ರೀತಿ ಆಗಿದ್ದು ನ್ಯಾಯ ಸಿಗಬೇಕು ಎಂದು ನಾವು ಪ್ರತಿಭಟನೆ ಮಾಡಿದ್ದೆವು. ಆ ಪ್ರತಿಭಟನೆಯಲ್ಲಿ ಮಲ್ಲಿಕ್ ಜೈನ್, ಉದಯ್ ಜೈನ್, ಧೀರಜ್ ಕೆಲ್ಲ ಮತ್ತಿತರರು ಇದ್ದರು ಎಂದು ಪಾಟೀ ಸವಾಲಿಗೆ ಅವರು ಉತ್ತರಿಸಿದ್ದರು.



ಧೀರಜ್ ಜೈನ್



ಉದಯ್ ಜೈನ್



ಮಲ್ಲಿಕ್ ಜೈನ್

ಆರೋಪಿ ಸಂತೋಷ್ ರಾವ್‌ನನ್ನು ಬಾಹುಬಲಿ ಬೆಟ್ಟದ ಕೆಳಗೆ ಯಾರೋ ಹಿಡಿದುಕೊಟ್ಟಿದ್ದಾರೆ ಎಂಬ ಮಾಹಿತಿ ಮಾತ್ರ ಇದೆ. ಆ ಸಂದರ್ಭದಲ್ಲಿ ಹಿಡಿದು ಕೊಟ್ಟವರನ್ನು ರವಿ ಪೂಜಾರಿ ಸಹ ಇದ್ದ ಎಂದು ಗೊತ್ತಿಲ್ಲ. ಆ ರವಿ ಪೂಜಾರಿ ಆತ್ಮಹತ್ಯೆ ಮಾಡಿಕೊಂಡ ವಿಷಯ ಗೊತ್ತು. ಆದರೆ ಆತನ ಸರಿಯಾದ ಹೆಸರು ವಿಳಾಸ ಗೊತ್ತಿಲ್ಲ ಎಂದು ಅವರು ವಿವರಿಸಿದರು. ರವಿ ಪೂಜಾರಿ ಆತ್ಮಹತ್ಯೆ ಮಾಡಿಕೊಂಡಿಲ್ಲ ಮತ್ತು ಅದು ಕೊಲೆ ಎಂದು ಸಾರ್ವಜನಿಕರು ಮಾತನಾಡುತ್ತಿದ್ದುದು ನನ್ನ ಗಮನಕ್ಕೆ ಬಂದಿತ್ತು. ಆರೋಪಿ ಸಂತೋಷ್‌ರಾವ್ ಬಂಧನ ಆದ ನಂತರ ನಿಜವಾದ ಆರೋಪಿತರನ್ನು ದಸ್ತಗಿರಿ ಮಾಡಬೇಕು ಎಂದು ದಕ್ಷಿಣಕನ್ನಡ ಬಂದ್ ನಡೆದಿತ್ತು. ಈ ವಿಷಯಕ್ಕೆ ಸಂಬಂಧಪಟ್ಟಂತೆ ಸುಮಾರು 1 ವರ್ಷಗಳ ಕಾಲ ಪ್ರತಿಭಟನೆ ನಡೆದಿತ್ತು ಎಂದು ಪ್ರಭಾಕರ ಗೌಡ ಪಾಟೀ ಸವಾಲಿಗೆ ಉತ್ತರಿಸಿದ್ದರು. ಧರ್ಮಸ್ಥಳದಲ್ಲಿ ಸತ್ಯಕ್ಕೆ ಸಂದ ಜಯ ಎಂದು ಒಂದು ಸಮಾರಂಭ ನಡೆದಿತ್ತು. ಅದರ ಉಸ್ತುವಾರಿಯನ್ನು ಗ್ರಾಮ ಪಂಚಾಯತ್‌ರವರು ವಹಿಸಿದ್ದರು ಎಂದು ಪ್ರಭಾಕರ ಗೌಡ ನ್ಯಾಯಾಲಯಕ್ಕೆ ವಿವರಿಸಿದರು.



ವಿಠಲಗೌಡ

ಸೌಜನ್ಯ ಪ್ರಕರಣದಲ್ಲಿ ಪ್ರಭಾಕರ ಗೌಡ ಪ್ರಮುಖ ಸಾಕ್ಷಿ ಏನೂ ಅಲ್ಲ. ಆತ ಘಟನೆ ನಡೆದ ಸ್ಥಳದಿಂದ ಸುಮಾರು 500 ಮೀಟರ್ ದೂರದಲ್ಲಿ ಪಂಚಾಯತ್ ಕಟ್ಟಡದಲ್ಲಿ ಅಂಗಡಿ ನಡೆಸಿಕೊಂಡು ಬಂದಿದ್ದವರು. ಅವರ ಅಂಗಡಿಯ ಪಕ್ಕದಲ್ಲಿಯೇ ವಿಠಲಗೌಡ ಅವರ ಹೊಟೇಲು ಇದ್ದುದರಿಂದ ಅವರಿಬ್ಬರು ಪರಿಚಿತರಾಗಿದ್ದರು. ವಿಠಲಗೌಡರ ಹೊಟೇಲಿಗೆ ಅವರ ಅಕ್ಕನ ಮಗಳು ಸೌಜನ್ಯ ಬರುತ್ತಿದ್ದರಿಂದ ನೋಡಿ ಪರಿಚಯ ಇತ್ತು. ಸೌಜನ್ಯ ನಾಪತ್ತೆಯಾಗಿದ್ದಾಳೆ ಎಂಬ ಮಾಹಿತಿ ಪ್ರಭಾಕರ ಗೌಡರಿಗೆ ಇದ್ದರೂ ಸಹ ರಾತ್ರಿಯಾಗಿದ್ದರಿಂದ ಹುಡುಕಲು ಹೋಗಿರಲಿಲ್ಲ. ಮರುದಿನ ಬೆಳಿಗ್ಗೆ ಕೆಲವರು ಸೇರಿಕೊಂಡು ಸೌಜನ್ಯಳನ್ನು ರಸ್ತೆಯ ಬದಿಯಲ್ಲಿ ಹುಡುಕಾಡುತ್ತಿದ್ದಾಗಲೂ ಪ್ರಭಾಕರ ಗೌಡ ಹೋಗಿರಲಿಲ್ಲ. ಸುಮಾರು ಮಧ್ಯಾಹ್ನದ ವೇಳೆಗೆ ಮೃತದೇಹ ಪತ್ತೆಯಾಗಿದೆ ಎಂಬ ಮಾಹಿತಿಯ ಆಧಾರದಲ್ಲಿ ಅವರು ಹೋಗಿದ್ದರು. ಅಲ್ಲಿ ತುಂಬಾ ಜನ ಸೇರಿದ್ದರಿಂದ ಮೃತದೇಹವನ್ನು ಸರಿಯಾಗಿ ಗಮನಿಸಲು ಅವರಿಗೆ ಸಾಧ್ಯವಾಗಿರಲಿಲ್ಲ. ಪ್ರಭಾಕರ ಗೌಡ ಅವರನ್ನು ಆರಂಭದಲ್ಲಿಯೇ ಸ್ಥಳೀಯ ಪೊಲೀಸರು ವಿಚಾರಣೆ ನಡೆಸಿದ್ದರು. ಆ ಸಂದರ್ಭದಲ್ಲಿ ಅವರು ಪ್ರಮುಖ ಸಾಕ್ಷಿ ಎಂದು ಪರಿಗಣಿಸದೇ ಇದ್ದುದರಿಂದ ಅವರ ಹೇಳಿಕೆ ದಾಖಲು ಮಾಡಿಕೊಂಡಿರಲಿಲ್ಲ. ತದನಂತರ ತನಿಖೆ ಕೈಗೆತ್ತಿಕೊಂಡಿದ್ದ ಸಿಓಡಿ ಅಧಿಕಾರಿಗಳು ಕೂಡಾ ಪ್ರಭಾಕರ ಗೌಡ ಅವರ ಹೇಳಿಕೆಯನ್ನು ದಾಖಲಿಸಿಕೊಂಡಿರಲಿಲ್ಲ.



ಆದರೆ ತದನಂತರ ತನಿಖೆ ನಡೆಸಿದ್ದ ಸಿಬಿಐ ಅಧಿಕಾರಿಗಳು ಸ್ಥಳ ಪರಿಶೀಲನೆಯ ವೇಳೆಗೆ ಪ್ರಭಾಕರ ಗೌಡ ಅವರ ಅಂಗಡಿಯನ್ನು ಗುರುತಿಸಿದ್ದರು. ಆ ಕಾರಣಕ್ಕಾಗಿ ಅವರನ್ನು ಸಾಕ್ಷಿಯಾಗಿ ಗುರುತಿಸಲಾಗಿತ್ತು. ನ್ಯಾಯಾಲಯದಲ್ಲಿ ಹೇಳಿಕೆ ನೀಡುವ ಸಂದರ್ಭದಲ್ಲಿ ಪ್ರಭಾಕರ ಗೌಡ ಅವರು ತಮಗೆ ಏನು ಗೊತ್ತಿದೆಯೋ ಅದನ್ನು ಮಾತ್ರ ಹೇಳಿದ್ದಾರೆ. ಅವರು ಆರೋಪಿ ಸಂತೋಷ್ ರಾವ್‌ನನ್ನು ಘಟನೆ ನಡೆಯುವ ಮೊದಲು ಆ ಸ್ಥಳದಲ್ಲಿ ನೋಡಿದ್ದರೂ ಗುರುತಿಸಿರಲಿಲ್ಲ. ದಿನನಿತ್ಯ ಸಾವಿರಾರು ಭಕ್ತಾದಿಗಳು ಬರುವಂತಹ ಸ್ಥಳ ಆಗಿದ್ದರಿಂದ ಸಹಜವಾಗಿಯೇ ಪ್ರಭಾಕರ ಗೌಡ ಅವರಿಗೆ ಆರೋಪಿ ಸಂತೋಷ್‌ರಾವ್‌ನನ್ನು ಗುರುತಿಸಲು ಸಾಧ್ಯವಾಗಿರಲಿಲ್ಲ. ಆರೋಪಿ ಸಂತೋಷ್‌ರಾವ್ ಪೊಲೀಸರ ಕೈಗೆ ಸ್ಥಳೀಯರ ಸಹಕಾರದಿಂದ ಸಿಕ್ಕಿಬಿದ್ದ ನಂತರ ಆತನ ಭಾವಚಿತ್ರ ಮಾಧ್ಯಮಗಳಲ್ಲಿ ಪ್ರಕಟಗೊಂಡ ಹಿನ್ನೆಲೆಯಲ್ಲಿ ಅವರು ಆತನನ್ನು ಗುರುತಿಸಬಲ್ಲೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದ್ದರು.

ಕೊಲೆ ಪ್ರಕರಣದ ವಿಚಾರಣೆಯ ಹಂತದಲ್ಲಿ ಪ್ರಭಾಕರ ಗೌಡ ಅವರ ಸಾಕ್ಷ್ಯ ಪ್ರಮುಖವಾಗುವುದಿಲ್ಲ. ಸಂತ್ರಸ್ತೆಯ ಗುರುತನ್ನು ನ್ಯಾಯಾಲಯ ದೃಢಪಡಿಸಲು ಈ ಸಾಕ್ಷ್ಯ ಪೂರಕವಾಗುತ್ತದೆಯೇ ಹೊರತು ಸಂತ್ರಸ್ತೆಯನ್ನು ಪ್ರಾಸಿಕ್ಯೂಷನ್ ಆರೋಪಿಸಿರುವಂತಹ ಆರೋಪಿಯೇ ಅತ್ಯಾಚಾರ ಮಾಡಿ ಕೊಲೆಗೈದಿದ್ದಾನೆ ಎನ್ನುವುದಕ್ಕೆ ಬಲವಾದ ಸಾಕ್ಷ್ಯವಾಗದು. ಈ ಹಿನ್ನೆಲೆಯಲ್ಲಿಯೇ ಆತನನ್ನು ಪ್ರಾಸಿಕ್ಯೂಷನ್ ಪರ ವಕೀಲರು ಮತ್ತು ಆರೋಪಿ ಪರ ವಕೀಲರು ಗಂಭೀರವಾಗಿ ಪರಿಗಣಿಸದೆ ಎಷ್ಟು ಬೇಕೊ ಅಷ್ಟು ಹೇಳಿಕೆಯನ್ನು ಮಾತ್ರ ಪಡೆದುಕೊಂಡಿದ್ದಾರೆ. ಪ್ರಭಾಕರ ಗೌಡ ಅವರ ಸಾಕ್ಷ್ಯ ಇತರ ಸಾಕ್ಷ್ಯಗಳಿಗೆ ಪೂರಕವಾಗುತ್ತದೆಯೇ ಹೊರತು ಮಾರಕವಾಗುವುದಿಲ್ಲ ಎಂಬ ಕಾರಣಕ್ಕಾಗಿಯೇ ಪ್ರಾಸಿಕ್ಯೂಷನ್ ಅವರ ಸಾಕ್ಷ್ಯವನ್ನು ದಾಖಲಿಸಿಕೊಂಡಿದೆ. ಆರೋಪಿ ಪರ ವಕೀಲರು ಸಹ ಪ್ರಭಾಕರ ಗೌಡ ಅವರನ್ನು ಹೆಚ್ಚು ಪಾಟೀ ಸವಾಲಿಗೆ ಗುರಿಪಡಿಸಿರಲಿಲ್ಲ. ಪ್ರಭಾಕರ ಗೌಡ ಅವರ ಸಾಕ್ಷ್ಯ ಆರೋಪಿಯ ಮೇಲೆ ಪ್ರಾಸಿಕ್ಯೂಷನ್ ಹೊರಿಸಿದಂತಹ ಆರೋಪವನ್ನು ಸಾಬೀತು ಪಡಿಸಲು ಸಾಧ್ಯವಾಗುವುದಿಲ್ಲ ಎಂಬ ಅಂಶ ಸಹಜವಾಗಿಯೇ ಆರೋಪ ಪಟ್ಟಿಯನ್ನು ಅವಲೋಕಿಸಿದ ಸಂದರ್ಭದಲ್ಲಿಯೇ ಶ್ರುತಪಟ್ಟಿತ್ತು.

ಮುಂದುವರಿಯುವುದು.....

**ಸೌಜನ್ಯ ಪ್ರಕರಣ ಸಿಬಿಐಗೆ ಹಸ್ತಾಂತರವಾದ ಬಳಿಕ ಸ್ಥಳಕ್ಕೆ ಬಂದಿದ್ದ ಸಿಬಿಐ ಅಧಿಕಾರಿಗಳು ಸೌಜನ್ಯ ಪ್ರಕರಣದ ಆರೋಪಿ ಸಂತೋಷ್‌ರಾವ್‌ನ ಭಾವಚಿತ್ರವನ್ನು ತೋರಿಸಿದ್ದರು. ಆತನ ಪರಿಚಯ ಇದೆಯಾ ಎಂದು ಕೇಳಿದ್ದರು. ಆ ಸ್ನಾನಘಟ್ಟಕ್ಕೆ ಬಹಳ ಜನರು ಬೇರೆ ಬೇರೆ ರೀತಿ ಬರುವವರಿದ್ದು ಫೋಟೋದಲ್ಲಿದ್ದಂತಹ ವ್ಯಕ್ತಿಯನ್ನು ನೋಡಿಲ್ಲ ಎಂದು ಸಿಬಿಐ ಅಧಿಕಾರಿಗಳಿಗೆ ತಿಳಿಸಿದ್ದರು. ಶವ ಸಿಕ್ಕ ನಂತರ ಆರೋಪಿ ಸಂತೋಷ್‌ರಾವ್‌ನನ್ನು ಸ್ಥಳೀಯರು ಹಿಡಿದು ಪೊಲೀಸರ ವಶಕ್ಕೆ ಕೊಟ್ಟಿದ್ದರು ಎಂಬುದು ಟಿವಿ ಮತ್ತು ಪತ್ರಿಕೆಗಳಲ್ಲಿ ಬಂದ ವರದಿಯಿಂದಾಗಿ ಗೊತ್ತಾಯಿತು.**

# ಶಿಕಾರಿಪುರದಲ್ಲಿ ಅಕ್ರಮ ನಾಡಬಂದೂಕು ವಶ!

**ಒಂದು ಸಣ್ಣ ನಿರ್ಲಕ್ಷ್ಯವೂ ಭಾರೀ ಅನಾಹುತಕ್ಕೆ ಕಾರಣವಾಗಬಹುದಾದ ಸಂದರ್ಭದಲ್ಲಿ, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿ ಪೊಲೀಸ್ ಇಲಾಖೆಯ ಸಮಯೋಚಿತ ಹಾಗೂ ಚಾಣಾಕ್ಷ ಕಾರ್ಯಾಚರಣೆಯಿಂದ ಭಾರೀ ಅಪರಾಧವೊಂದು ತಪ್ಪಿದಂತಾಗಿದೆ. ಅಕ್ರಮವಾಗಿ ನಾಡಬಂದೂಕುಗಳನ್ನು ತಯಾರಿಸಿ ಸಂಗ್ರಹಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ಬಂಧಿಸುವ ಮೂಲಕ, ಸಮಾಜದ ಶಾಂತಿ ಮತ್ತು ಸಾರ್ವಜನಿಕ ಸುರಕ್ಷತೆಯನ್ನು ಕಾಪಾಡುವಲ್ಲಿ ಪೊಲೀಸರು ಮಹತ್ವದ ಯಶಸ್ಸು ಸಾಧಿಸಿದ್ದಾರೆ. ಈ ಪ್ರಕರಣವು ಜಿಲ್ಲೆಯಲ್ಲಿನ ಅಕ್ರಮ ಶಸ್ತ್ರಾಸ್ತ್ರ ಜಾಲದ ಭೀತಿದಾಯಕ ಮುಖವನ್ನೇ ಬಹಿರಂಗಪಡಿಸಿದೆ.**

ಶಿವಮೊಗ್ಗ
✍ ಸಂತೋಷಕುಮಾರ


ಆರೋಪಿ ಲಕ್ಷ್ಮಣಪ್ಪ


ಶಿವಮೊಗ್ಗ ಜಿಲ್ಲೆ ಎಂಬ ಹೆಸರನ್ನು ಕೇಳಿದಾಗ ಇಂದಿಗೂ ಹಲವರ ಮನಸ್ಸಿನಲ್ಲಿ ರೌಡಿಸಂ, ಕೊಲೆ, ಹಲ್ಲೆ, ಭಯಾನಕ ಅಪರಾಧ ಪ್ರಕರಣಗಳ ಚಿತ್ರಣ ಮೂಡುವುದು ದುರಂತವೇ ಸರಿ. ಒಂದು ಕಾಲದಲ್ಲಿ ರಾಜ್ಯದಲ್ಲೇ ಅಪರಾಧಗಳ ದೃಷ್ಟಿಯಿಂದ ಹೆಚ್ಚು ಚರ್ಚೆಯಾಗುತ್ತಿದ್ದ ಜಿಲ್ಲೆಗಳಲ್ಲಿ ಶಿವಮೊಗ್ಗ ಪ್ರಮುಖ ಸ್ಥಾನದಲ್ಲಿತ್ತು. ಕಾಲಕಾಲಕ್ಕೆ ನಡೆದ ಹಿಂಸಾತ್ಮಕ ಘಟನೆಗಳು, ಸಂಘರ್ಷಗಳು ಮತ್ತು ಅಪರಾಧ ಪ್ರಕರಣಗಳು ಜಿಲ್ಲೆಯ ಶಾಂತಿ ಹಾಗೂ ಸುರಕ್ಷತೆ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎಬ್ಬಿಸಿದ್ದವು. ಆದರೆ ಇತ್ತೀಚಿನ ದಿನಗಳಲ್ಲಿ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಯ ಕಟ್ಟುನಿಟ್ಟಿನ ನಿಗಾವಣೆ, ಗುಪ್ತಚರ ವ್ಯವಸ್ಥೆಯ ಬಲವರ್ಧನೆ ಮತ್ತು ನಿರಂತರ ಕಾರ್ಯಾಚರಣೆಗಳಿಂದಾಗಿ ಜಿಲ್ಲೆಯಲ್ಲಿ ಸಂಭವಿಸಬಹುದಾಗಿದ್ದ ಹಲವು ದೊಡ್ಡ ಅನಾಹುತಗಳು ಸಮಯಕ್ಕೆ ಸರಿಯಾಗಿ ತಪ್ಪುತ್ತಿವೆ.


ಇದೇ ರೀತಿಯ ಮತ್ತೊಂದು ಮಹತ್ವದ ಪ್ರಕರಣ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿ ಬೆಳಕಿಗೆ ಬಂದಿದೆ. ಪೊಲೀಸ್ ಇಲಾಖೆಯ ಎಚ್ಚರಿಕೆಯಿಂದಾಗಿ ಸಂಭವಿಸಬಹುದಾಗಿದ್ದ ಭಾರೀ ಘೋರ ಅಪರಾಧವೊಂದು ತಪ್ಪಿದಂತಾಗಿದೆ. ಅಕ್ರಮವಾಗಿ ನಾಡಬಂದೂಕುಗಳನ್ನು ತಯಾರಿಸಿ ಸಂಗ್ರಹಿಸಿ ಮಾರಾಟ ಮಾಡುವ ಉದ್ದೇಶ ಹೊಂದಿದ್ದ ವ್ಯಕ್ತಿಯೊಬ್ಬನನ್ನು ಬಂಧಿಸುವ ಮೂಲಕ ಪೊಲೀಸರು ಮಹತ್ವದ ಸಾಧನೆ ಮಾಡಿದ್ದಾರೆ.


ಅಕ್ರಮ ನಾಡಬಂದೂಕುಗಳು

## ಸಮಯಕ್ಕೆ ಸರಿಯಾಗಿ ಭೇದಿಸಿದ ಪೊಲೀಸರ ಕಾರ್ಯಾಚರಣೆ

ಶಿಕಾರಿಪುರ ತಾಲ್ಲೂಕು ಎಂದರೆ ಸಾಮಾನ್ಯ ಸ್ಥಳವಲ್ಲ, ಇದು ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ ಹಾಗೂ ಹಿರಿಯ ರಾಜಕಾರಣಿ ಬಿ.ಎಸ್. ಯಡಿಯೂರಪ್ಪ ಅವರ ವಿಧಾನಸಭಾ ಕ್ಷೇತ್ರವಾಗಿದ್ದು, ಹಾಲಿ ಕರ್ನಾಟಕ ಬಿಜೆಪಿ ರಾಜ್ಯಾಧ್ಯಕ್ಷರ ತವರು ಕ್ಷೇತ್ರವೂ ಹೌದು. ಇಂತಹ ರಾಜಕೀಯವಾಗಿ ಮಹತ್ವ ಹೊಂದಿರುವ ಪ್ರದೇಶದಲ್ಲೇ ಅಕ್ರಮ ನಾಡಬಂದೂಕುಗಳ ತಯಾರಿಕೆ ನಡೆಯುತ್ತಿರುವುದು ಜಿಲ್ಲೆಯ ಕಾನೂನು ವ್ಯವಸ್ಥೆಗೆ ಸವಾಲಾಗಿತ್ತು ಎಂಬುದು ಗಮನಾರ್ಹ ಅಂಶವಾಗಿದೆ.


ಡಿವೈಎಸ್ಪಿ ಕೇಶವ್ ಕೆ.ಇ.


ಸಿಪಿಐ ಸಂತೋಷ್ ಎಂ. ಪಾಟೀಲ್

ದಿನಾಂಕ 04.02.2026ರಂದು ಶಿಕಾರಿಪುರ ನಗರ ಪೊಲೀಸ್ ಠಾಣೆಯಲ್ಲಿ ಎಎಸ್‌ಐ ವಿಜಯ ಅವರು ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ಪೊಲೀಸರಿಗೆ ಖಚಿತ ಮಾಹಿತಿ ಲಭಿಸಿದೆ. ಭದ್ರಾಪುರ ಗ್ರಾಮದ ಮೂರನೇ ಕ್ರಾಸ್ ಬಳಿ ಒಬ್ಬ ವ್ಯಕ್ತಿ ತನ್ನ ಹಳೆಯ ಮನೆಯಲ್ಲಿ ಅಕ್ರಮವಾಗಿ ನಾಡಬಂದೂಕುಗಳನ್ನು ತಯಾರಿಸುತ್ತಿದ್ದು, ಅವುಗಳನ್ನು ಮಾರಾಟ ಮಾಡುವ ಉದ್ದೇಶ ಹೊಂದಿದ್ದಾನೆ ಎಂಬ ಮಾಹಿತಿ ಬಂದ ತಕ್ಷಣ ಪೊಲೀಸರು ತಕ್ಷಣವೇ ಕಾರ್ಯಪ್ರವೃತ್ತರಾದರು. ಈ ಮಾಹಿತಿಯನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗಿದ್ದು, ಅವರ ಮಾರ್ಗದರ್ಶನದಲ್ಲಿ ವಿಶೇಷ ತಂಡವನ್ನು ರಚಿಸಲಾಯಿತು.


ಎಸ್ಪಿ ಬಿ. ನಿಖಿಲ್

ಶಿಕಾರಿಪುರ ಪಟ್ಟಣದಿಂದ ಸುಮಾರು 2 ರಿಂದ 3 ಕಿಲೋಮೀಟರ್ ದೂರದಲ್ಲಿರುವ ಭದ್ರಾಪುರ ಗ್ರಾಮದ ಮೂರನೇ ಕ್ರಾಸ್ ಪ್ರದೇಶದಲ್ಲಿ ಕಾರ್ಯಾಚರಣೆ ನಡೆಸಲು ಯೋಜನೆ ರೂಪಿಸಲಾಯಿತು. ಶಿಕಾರಿಪುರ ಡಿವೈಎಸ್ಪಿ ಕೇಶವ ಕೆ.ಇ. ಅವರ ನೇತೃತ್ವದಲ್ಲಿ, ನಗರ ಸಿಪಿಐ ಸಂತೋಷ ಪಾಟೀಲ್, ಎಎಸ್‌ಐ ಶರತ್ ಎಚ್., ಹಾಗೂ ಸಿಬ್ಬಂದಿಗಳಾದ ಕೊಟ್ರೇಶಪ್ಪ, ಪ್ರದೀಪ್ ಕೆ., ನಾಗರಾಜ್, ರವಿ ನಾಯ್ಕ ಮತ್ತು ರವಿಕುಮಾರ ಅವರನ್ನು ಒಳಗೊಂಡ ತಂಡವನ್ನು ರಚಿಸಿ ಸ್ಥಳಕ್ಕೆ ದಾಳಿ ನಡೆಸಲಾಯಿತು.

ಕಾರ್ಯಾಚರಣೆಯ ವೇಳೆ ಭದ್ರಾಪುರ ಗ್ರಾಮದ ನಿವಾಸಿಯಾಗಿರುವ ಲಕ್ಷ್ಮಣಪ್ಪ ಬಿನ್ ಮಲ್ಲಪ್ಪ (67) ಎಂಬಾತನ ಮೇಲೆ ಪೊಲೀಸರು ಗಮನ ಕೇಂದ್ರೀಕರಿಸಿದರು. ಬಡಗಿ ಕೆಲಸ ಮಾಡಿಕೊಂಡಿದ್ದ ಈ ವ್ಯಕ್ತಿ ತನ್ನ ಮನೆಯ ಪಕ್ಕದಲ್ಲೇ ಇರುವ ತನ್ನದೇ ಹಳೆಯ ಮನೆಯೊಂದರಲ್ಲಿ ಅಕ್ರಮ ಚಟುವಟಿಕೆ ನಡೆಸುತ್ತಿದ್ದಾನೆ ಎಂಬ ಮಾಹಿತಿ ಸತ್ಯವೆಂದು ದೃಢಪಟ್ಟಿತು. ಪೊಲೀಸರು ಮನೆಗೆ ಧಾಳಿ ನಡೆಸಿ ಸೂಕ್ಷ್ಮವಾಗಿ ಪರಿಶೀಲನೆ ನಡೆಸಿದಾಗ, ಆ ಹಳೆಯ ಮನೆಯಲ್ಲಿ ಬಚ್ಚಿಟ್ಟಿದ್ದ ಏಳು ಸಿಂಗಲ್ ಬ್ಯಾರಲ್ ನಾಡಬಂದೂಕುಗಳು ಪತ್ತೆಯಾಗಿವೆ. ಜೊತೆಗೆ ನಾಡಬಂದೂಕು ತಯಾರಿಸಲು ಬಳಸುತ್ತಿದ್ದ ವಿವಿಧ ಉಪಕರಣಗಳು, ಕಬ್ಬಿಣದ ಭಾಗಗಳು ಹಾಗೂ ಇತರ ವಸ್ತುಗಳನ್ನು ಕೂಡ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಬಂಧಿತ ಆರೋಪಿ ಲಕ್ಷ್ಮಣಪ್ಪನನ್ನು ತಕ್ಷಣವೇ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ. ಪ್ರಾಥಮಿಕ ವಿಚಾರಣೆಯಲ್ಲಿ ಆತ ಅಕ್ರಮವಾಗಿ ನಾಡಬಂದೂಕುಗಳನ್ನು ತಯಾರಿಸುತ್ತಿದ್ದುದನ್ನು ಒಪ್ಪಿಕೊಂಡಿದ್ದಾನೆ ಎನ್ನಲಾಗಿದೆ. ನಂತರ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಈ ಪ್ರಕರಣ ಇದೀಗ ಹಲವು ಅನುಮಾನಗಳಿಗೆ ಕಾರಣವಾಗಿದೆ. ಬಂಧಿತ ಆರೋಪಿ ಈ ನಾಡಬಂದೂಕುಗಳನ್ನು ಕೇವಲ ಬೇಟೆ ಉದ್ದೇಶಕ್ಕಾಗಿ ತಯಾರಿಸುತ್ತಿದ್ದನಾ? ಅಥವಾ ಸಮಾಜಘಾತುಕ ಶಕ್ತಿಗಳಿಗೆ, ಅಪರಾಧ ಜಾಲಗಳಿಗೆ, ಅತಿವಾದಿ ಚಟುವಟಿಕೆಗಳಿಗೆ ಪೂರೈಕೆ ಮಾಡುವ ಉದ್ದೇಶ ಹೊಂದಿದ್ದನಾ? ಎಂಬ ಪ್ರಶ್ನೆಗಳು ಎದ್ದಿವೆ. ಇಷ್ಟೊಂದು ಪ್ರಮಾಣದಲ್ಲಿ ನಾಡಬಂದೂಕುಗಳನ್ನು ತಯಾರಿಸಿರುವುದು ಕೇವಲ ವೈಯಕ್ತಿಕ ಬಳಕೆಗೆ ಅಲ್ಲ ಎಂಬ ಶಂಕೆಯನ್ನು ಪೊಲೀಸರು ವ್ಯಕ್ತಪಡಿಸಿದ್ದಾರೆ.



ಇನ್ನೊಂದು ಗಂಭೀರ ಪ್ರಶ್ನೆ ಎಂದರೆ, ಈ ವ್ಯಕ್ತಿ ಎಷ್ಟು ವರ್ಷಗಳಿಂದ ಈ ಅಕ್ರಮ ಚಟುವಟಿಕೆಯಲ್ಲಿ ತೊಡಗಿದ್ದ? ಇಷ್ಟು ದಿನಗಳ ಕಾಲ ಪೊಲೀಸರ ಗಮನಕ್ಕೆ ಹೇಗೆ ಬಂದಿರಲಿಲ್ಲ? ಗ್ರಾಮೀಣ ಪ್ರದೇಶದಲ್ಲಿ ಮೌನವಾಗಿ ಈ ರೀತಿಯ ಅಕ್ರಮ ಚಟುವಟಿಕೆ ನಡೆಯುತ್ತಿರುವುದರ ಹಿಂದೆ ಯಾರಾದರೂ ಪ್ರಭಾವಶಾಲಿಗಳ ಕೈವಾಡ ಇದೆಯೇ? ಎಂಬ ಅನುಮಾನಗಳು ಕೂಡ ಮೂಡಿವೆ. ಈ ಎಲ್ಲ ಆಯಾಮಗಳನ್ನು ಪೊಲೀಸರು ತನಿಖೆಯ ಭಾಗವಾಗಿ ಗಂಭೀರವಾಗಿ ಪರಿಶೀಲಿಸುತ್ತಿದ್ದಾರೆ.

ಶಿವಮೊಗ್ಗ ಜಿಲ್ಲೆಯ ನೂತನ ಪೊಲೀಸ್ ಅಕ್ಷಕ ಬಿ. ನಿಖಿಲ್ ಅವರ ನೇತೃತ್ವದಲ್ಲಿ ಈ ಪ್ರಕರಣಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದ್ದು, ಸಂಪೂರ್ಣ ಜಾಲವನ್ನು ಪತ್ತೆಹಚ್ಚಲು ತನಿಖೆ ತೀವ್ರಗೊಳಿಸಲಾಗಿದೆ. ಈ ಹಿಂದೆ ಅಕ್ರಮ ಶಸ್ತ್ರಾಸ್ತ್ರ ಪೂರೈಕೆಯಲ್ಲಿ ತೊಡಗಿದ್ದ ಯಾವುದೇ ಗುಂಪುಗಳೊಂದಿಗೆ ಆರೋಪಿ ಸಂಪರ್ಕ ಹೊಂದಿದ್ದಾನೆಯೇ ಎಂಬುದನ್ನು ಕೂಡ ಪರಿಶೀಲಿಸಲಾಗುತ್ತಿದೆ. ಬಂಧಿತ ಆರೋಪಿಯಿಂದ ಲಭ್ಯವಾಗುವ ಮಾಹಿತಿಯ ಆಧಾರದ ಮೇಲೆ ಮುಂದಿನ ದಿನಗಳಲ್ಲಿ ಇನ್ನಷ್ಟು ಬಂಧನಗಳು ಸಂಭವಿಸುವ ಸಾಧ್ಯತೆ ಇರುವುದಾಗಿ ಪೊಲೀಸ್ ಮೂಲಗಳು ತಿಳಿಸಿವೆ.

ಈ ಮಹತ್ವದ ಪ್ರಕರಣವನ್ನು ಪತ್ತೆಹಚ್ಚುವ ಮೂಲಕ ಜಿಲ್ಲೆಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವಲ್ಲಿ ಪೊಲೀಸ್ ಇಲಾಖೆ ಮತ್ತೊಮ್ಮೆ ತನ್ನ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿದೆ. ಸಮಯಕ್ಕೆ ಸರಿಯಾಗಿ ಕಾರ್ಯಾಚರಣೆ ನಡೆಸದೇ ಇದ್ದರೆ, ಈ ಅಕ್ರಮ ನಾಡಬಂದೂಕುಗಳು ಯಾವ ರೀತಿಯ ಅಪರಾಧಗಳಿಗೆ ಬಳಸಲ್ಪಡುತ್ತಿದ್ದವೋ ಎಂಬುದನ್ನು ಊಹಿಸುವುದೇ ಭಯಾನಕವಾಗಿದೆ.

ಈ ಯಶಸ್ವಿ ಕಾರ್ಯಾಚರಣೆಗೆ ಕಾರಣಕರ್ತರಾದ ಶಿವಮೊಗ್ಗ ಜಿಲ್ಲಾ ಪೊಲೀಸ್ ಅಕ್ಷಕ ಬಿ. ನಿಖಿಲ್, ಹೆಚ್ಚುವರಿ ಪೊಲೀಸ್ ಅಕ್ಷಕರಾದ ಕಾರಿಯಪ್ಪ ಹಾಗೂ ರಮೇಶ್, ಶಿಕಾರಿಪುರ ಡಿವೈಎಸ್ಪಿ ಕೇಶವ ಕೆ.ಇ., ನಗರ ಸಿಪಿಐ ಸಂತೋಷ ಪಾಟೀಲ್, ಎಎಸ್‌ಐಗಳಾದ ವಿಜಯ, ಶರತ್ ಎಚ್. ಮತ್ತು ಎಲ್ಲಾ ಪೊಲೀಸ್ ಸಿಬ್ಬಂದಿಯ ಕಾರ್ಯವನ್ನು ಸಾರ್ವಜನಿಕ ವಲಯದಲ್ಲಿ ಶ್ಲಾಘಿಸಲಾಗುತ್ತಿದೆ. 'ಪೊಲೀಸ್ ನ್ಯೂಸ್' ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಅಭಿನಂದಿಸುತ್ತದೆ.

# ಲೇಡಿ ರೌಡಿ ಯಶಸ್ವಿನಿ ಅರೆಸ್ಟ್ ಹಿಂದಿನ ಅಸಲಿ ಸ್ಟೋರಿ...



5 ☞

ಕೇಳಿದರೆ ಯಾರಿಗಾದರೂ ಆಶ್ಚರ್ಯವಾಗುತ್ತದೆ. ಈ ಸಂಘಟಿತ ಅಪರಾಧ ಜಾಲ ಕೆಲಸ ಮಾಡಿರುವುದು ಕೇವಲ 1.50 ಲಕ್ಷ ರೂಪಾಯಿಯ ವ್ಯವಹಾರಕ್ಕಾಗಿ! ಉದ್ಯಮಿ ಮನೋಜ್ ಕುಮಾರ್‌ಗೆ ಪರಿಚಿತನಾಗಿದ್ದ ರಾಜೇಶ್ ಎಂಬಾತ, ಸ್ಯಾಂಡಲ್‌ವುಡ್ ನಿರ್ದೇಶಕ ನಂದಕಿಶೋರ್‌ಗೆ ಒಂದಷ್ಟುಸಾಲ ಕೊಡಿಸಿದ್ದ. ಒಂದು ವರ್ಷ ಕಳೆದರೂ ಸಾಲ ತೀರಿಸದಿದ್ದಾಗ, ಮನೋಜ್ ರಾಜೇಶ್ ಮೇಲೆ ಹಣಕ್ಕಾಗಿ ಒತ್ತಡ ಹೇರಿದ್ದ. ಇದರ ಅಂತಿಮ ಘಟ್ಟವೇ ಈ ಕಿಡ್ನಾಪ್!

ಇಲ್ಲಿ 1.50 ಲಕ್ಷ ರೂಪಾಯಿ ಮುಖ್ಯವಲ್ಲ; ಬದಲಾಗಿ 'ಏರಿಯಾ ಡಾಮಿನೆನ್ಸ್' ಮತ್ತು 'ವಸೂಲಿ ಸಂಸ್ಕೃತಿ' ಮುಖ್ಯವಾಗುತ್ತದೆ. ಮನೋಜ್ ಎಂಬ ಉದ್ಯಮಿ ಹಣ ಕೇಳಿದ್ದಕ್ಕೆ ಪ್ರತಿಯಾಗಿ ಯಶಸ್ವಿನಿ ಗೌಡ ಮತ್ತು ಬೇಕರಿ ರಘುವಿನಂತಹ ರೌಡಿಗಳನ್ನು ಬಳಸಿಕೊಂಡು ಅಪಹರಣ ಮಾಡುವುದು ಭೂಗತ ಲೋಕದ ಭಯಾನಕ ಮುಖವನ್ನು ತೋರಿಸುತ್ತದೆ. ಸಣ್ಣ ಮೊತ್ತದ ವ್ಯವಹಾರಗಳಿಗೂ ಭೂಗತ ಜಗತ್ತಿನ ಮೊರೆ ಹೋಗುವ ಈ ಪ್ರವೃತ್ತಿ ಉದ್ಯಮ ವಲಯದಲ್ಲಿ ಆತಂಕ ಹುಟ್ಟಿಸುವುದಿಲ್ಲವೇ. ಹಣ ಕೊಡಿಸಿದ್ದ ವ್ಯಕ್ತಿಯೇ ಅಂತಿಮವಾಗಿ ಕಿಡ್ನಾಪ್‌ಗೆ ಒಳಗಾಗುವ ಮೂಲಕ ಈ 'ಕಲೆಕ್ಷನ್ ಮಾಫಿಯಾ'ಕ್ಕೆ ಬಲಿಯಾಗಿದ್ದಾನೆ.

**ಎಚ್ಚರಿಕೆಯ ಗಂಟೆ ಆಗಬೇಕು...**

ರಿಯಲ್ ಎಸ್ಟೇಟ್ ಉದ್ಯಮಿ ಮನೋಜ್ ಅಪಹರಣ ಪ್ರಕರಣ ಕೇವಲ ಹಣದ ವಿವಾದವಲ್ಲ, ಇದು ಬೆಂಗಳೂರಿನಲ್ಲಿ ಬೇರೂರುತ್ತಿರುವ ರೌಡಿ ಸಂಸ್ಕೃತಿಯ ಪ್ರತಿಫಲನ. ಯಶಸ್ವಿನಿ ಗೌಡ ಮತ್ತು ಅವಳ ತಂಡಕ್ಕೆ 'ಕೋಕಾ' ಕಾಯ್ದೆಯಡಿ ನೀಡಿರುವ ಈ ಶಾಕ್ ಇನ್ನುಳಿದ ರೌಡಿಗಳಿಗೂ ಎಚ್ಚರಿಕೆಯ ಗಂಟೆಯಾಗಬೇಕು. 1.50 ಲಕ್ಷದಷ್ಟು ಸಣ್ಣ ಮೊತ್ತದ ಸಾಲ ವಸೂಲಾತಿಗೂ ಭೂಗತ ಲೋಕದ ಮಧ್ಯಸ್ಥಿಕೆ ಪಡೆಯುವುದು ಸಮಾಜವನ್ನು ಎತ್ತ ಸಾಗಿಸುತ್ತಿದೆ? ಎಂದು ದಿಗ್ಭ್ರಮೆ ಹುಟ್ಟಿಸುತ್ತದೆ.

ಕಾನೂನಿನ ಹಾದಿಯನ್ನು ಬಿಟ್ಟು ಇಂತಹ ಶಾರ್ಟ್ ಕಟ್ ಮಾರ್ಗಗಳನ್ನು ತುಳಿಯುವವರು ಒಂದು ದಿನ ತಾವೇ ತೋಡಿದ ಖೆಡ್ಡಾಕ್ಕೆ ಬೀಳುವುದು ಗ್ಯಾರಂಟಿ ಎಂಬುದಕ್ಕೆ ಯಶಸ್ವಿನಿ ಬಂಧನವೇ ಸಾಕ್ಷಿ. ವ್ಯವಹಾರಿಕ ಸಂಘರ್ಷಗಳಲ್ಲಿ ರೌಡಿಗಳ ಹಸ್ತಕ್ಷೇಪವನ್ನು ಮಟ್ಟ ಹಾಕಲು ಕಾನೂನು ವ್ಯವಸ್ಥೆ ಮಾತ್ರವಲ್ಲ, ಸಾರ್ವಜನಿಕರು ಕೂಡ ಜಾಗೃತವಾಗಬೇಕಿದೆ. ಪೊಲೀಸ್ ಬೆನ್ನಿಗೆ ಪಬ್ಲಿಕ್ ನಿಂತರೆ ಈ ರೌಡಿಸಂ ಅನ್ನೋದು ನಾಮಾವಶೇಷ ವಾಗುವುದರಲ್ಲಿ ಡೌಟ್ಸ್ ಇಲ್ಲ. ☯





## ಬರೀ 1 ಲಕ್ಷಕ್ಕೆ ರೌಡಿಗಳ ರೇಡ್ ಸೆಟಲ್ಮೆಂಟ್...



ಈ ಇಡೀ ಹೈಡ್ರಾಮಾದ ಹಿಂದಿರುವ ಮೊತ್ತ ಕೇಳಿದರೆ ಯಾರಿಗಾದರೂ ಆಶ್ಚರ್ಯವಾಗುತ್ತದೆ. ಈ ಸಂಘಟಿತ ಅಪರಾಧ ಜಾಲ ಕೆಲಸ ಮಾಡಿರುವುದು ಕೇವಲ 1.50 ಲಕ್ಷ ರೂಪಾಯಿಯ ವ್ಯವಹಾರಕ್ಕಾಗಿ! ಉದ್ಯಮಿ ಮನೋಜ್ ಕುಮಾರ್‌ಗೆ ಪರಿಚಿತನಾಗಿದ್ದ ರಾಜೇಶ್ ಎಂಬಾತ, ಸ್ಯಾಂಡಲ್‌ವುಡ್ ನಿರ್ದೇಶಕ ನಂದಕಿಶೋರ್‌ಗೆ ಒಂದಷ್ಟುಸಾಲ ಕೊಡಿಸಿದ್ದ. ಒಂದು ವರ್ಷ ಕಳೆದರೂ ಸಾಲ ತೀರಿಸದಿದ್ದಾಗ, ಮನೋಜ್ ರಾಜೇಶ್ ಮೇಲೆ ಹಣಕ್ಕಾಗಿ ಒತ್ತಡ ಹೇರಿದ್ದ. ಇದರ ಅಂತಿಮ ಘಟ್ಟವೇ ಈ ಕಿಡ್ನಾಪ್!

ಇಲ್ಲಿ 1.50 ಲಕ್ಷ ರೂಪಾಯಿ ಮುಖ್ಯವಲ್ಲ; ಬದಲಾಗಿ 'ಏರಿಯಾ ಡಾಮಿನೆನ್ಸ್' ಮತ್ತು 'ವಸೂಲಿ ಸಂಸ್ಕೃತಿ' ಮುಖ್ಯವಾಗುತ್ತದೆ. ಮನೋಜ್ ಎಂಬ ಉದ್ಯಮಿ ಹಣ ಕೇಳಿದ್ದಕ್ಕೆ ಪ್ರತಿಯಾಗಿ ಯಶಸ್ವಿನಿ ಗೌಡ ಮತ್ತು ಬೇಕರಿ ರಘುವಿನಂತಹ ರೌಡಿಗಳನ್ನು ಬಳಸಿಕೊಂಡು ಅಪಹರಣ ಮಾಡುವುದು ಭೂಗತ ಲೋಕದ ಭಯಾನಕ ಮುಖವನ್ನು ತೋರಿಸುತ್ತದೆ. ಸಣ್ಣ ಮೊತ್ತದ ವ್ಯವಹಾರಗಳಿಗೂ ಭೂಗತ ಜಗತ್ತಿನ ಮೊರೆ ಹೋಗುವ ಈ ಪ್ರವೃತ್ತಿ ಉದ್ಯಮ ವಲಯದಲ್ಲಿ ಆತಂಕ ಹುಟ್ಟಿಸುವುದಿಲ್ಲವೇ. ಹಣ ಕೊಡಿಸಿದ್ದ ವ್ಯಕ್ತಿಯೇ ಅಂತಿಮವಾಗಿ ಕಿಡ್ನಾಪ್‌ಗೆ ಒಳಗಾಗುವ ಮೂಲಕ ಈ 'ಕಲೆಕ್ಷನ್ ಮಾಫಿಯಾ'ಕ್ಕೆ ಬಲಿಯಾಗಿದ್ದಾನೆ.

**ಎಚ್ಚರಿಕೆಯ ಗಂಟೆ ಆಗಬೇಕು...**

ರಿಯಲ್ ಎಸ್ಟೇಟ್ ಉದ್ಯಮಿ ಮನೋಜ್ ಅಪಹರಣ ಪ್ರಕರಣ ಕೇವಲ ಹಣದ ವಿವಾದವಲ್ಲ, ಇದು ಬೆಂಗಳೂರಿನಲ್ಲಿ ಬೇರೂರುತ್ತಿರುವ ರೌಡಿ ಸಂಸ್ಕೃತಿಯ ಪ್ರತಿಫಲನ. ಯಶಸ್ವಿನಿ ಗೌಡ ಮತ್ತು ಅವಳ ತಂಡಕ್ಕೆ 'ಕೋಕಾ' ಕಾಯ್ದೆಯಡಿ ನೀಡಿರುವ ಈ ಶಾಕ್ ಇನ್ನುಳಿದ ರೌಡಿಗಳಿಗೂ ಎಚ್ಚರಿಕೆಯ ಗಂಟೆಯಾಗಬೇಕು. 1.50 ಲಕ್ಷದಷ್ಟು ಸಣ್ಣ ಮೊತ್ತದ ಸಾಲ ವಸೂಲಾತಿಗೂ ಭೂಗತ ಲೋಕದ ಮಧ್ಯಸ್ಥಿಕೆ ಪಡೆಯುವುದು ಸಮಾಜವನ್ನು ಎತ್ತ ಸಾಗಿಸುತ್ತಿದೆ? ಎಂದು ದಿಗ್ಭ್ರಮೆ ಹುಟ್ಟಿಸುತ್ತದೆ.




ಕಾನೂನಿನ ಹಾದಿಯನ್ನು ಬಿಟ್ಟು ಇಂತಹ ಶಾರ್ಟ್ ಕಟ್ ಮಾರ್ಗಗಳನ್ನು ತುಳಿಯುವವರು ಒಂದು ದಿನ ತಾವೇ ತೋಡಿದ ಖೆಡ್ಡಾಕ್ಕೆ ಬೀಳುವುದು ಗ್ಯಾರಂಟಿ ಎಂಬುದಕ್ಕೆ ಯಶಸ್ವಿನಿ ಬಂಧನವೇ ಸಾಕ್ಷಿ. ವ್ಯವಹಾರಿಕ ಸಂಘರ್ಷಗಳಲ್ಲಿ ರೌಡಿಗಳ ಹಸ್ತಕ್ಷೇಪವನ್ನು ಮಟ್ಟ ಹಾಕಲು ಕಾನೂನು ವ್ಯವಸ್ಥೆ ಮಾತ್ರವಲ್ಲ, ಸಾರ್ವಜನಿಕರು ಕೂಡ ಜಾಗೃತವಾಗಬೇಕಿದೆ. ಪೊಲೀಸ್ ಬೆನ್ನಿಗೆ ಪಬ್ಲಿಕ್ ನಿಂತರೆ ಈ ರೌಡಿಸಂ ಅನ್ನೋದು ನಾಮವಶೇಷ ವಾಗುವುದರಲ್ಲಿ ಡೌಟ್ಸ್ ಇಲ್ಲ. ☯

# ಕಾಮದಾಸೆಗೆ ಮಗು ಹೆತ್ತು 5 ಲಕ್ಷಕ್ಕೆ ಮಾರಾಟ

4 ☞

ಬೇಕೆಂದು ಕೇಳಿದರು. ಅದರಂತೆ ನಾನು ಮಗು ಮಾರಾಟ ಮಾಡುವವರಿಗಾಗಿ ಹುಡುಕಾಡುತ್ತಿದ್ದೆನು. ಆಗ ಶ್ರೀನಿವಾಸಪುರ ನೀತು ಮತ್ತು ರಾಘವೇಂದ್ರ ಎನ್ನುವವರು



ಮಗುವಿನೊಂದಿಗೆ ಖರೀದಿದಾರಳಾದ ಮಂಜುಳಾ

ಗಂಡು ಮಗು ಇದೆ ಎಂದು ಹೇಳಿ 2 ಲಕ್ಷ ಹಣಕ್ಕೆ ಆರು ದಿನದ ಮಗುವನ್ನು ಮಾರಾಟ ಮಾಡಿದರು. ನಾನು ಆ ಮಗುವನ್ನು ತೆಗೆದುಕೊಂಡು ಹೋಗಿ ಚಿಂತಾಮಣಿಯ ಕೃಷ್ಣ ಮತ್ತು ಮಂಜುಳಾ ದಂಪತಿಗಳಿಗೆ 5 ಲಕ್ಷ ಹಣಕ್ಕೆ ಮಗುವನ್ನು ಮಾರಾಟ ಮಾಡಿರುವುದಾಗಿ ಹೇಳಿದನು. ಪೊಲೀಸರು ಅವನಿಂದ ಹೇಳಿಕೆ ಪಡೆದ ನಂತರ ಮಗುವನ್ನು ತೆಗೆದುಕೊಂಡಿರುವವರ ಮನೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದ್ದು, ಅದರಂತೆ ಬ್ರೋಕರ್ ನಾರಾಯಣಸ್ವಾಮಿ ಚಿಂತಾಮಣಿಯಲ್ಲಿರುವ ಕೃಷ್ಣ ಮತ್ತು ಮಂಜುಳಾ ದಂಪತಿಗಳ ಮನೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಮಗುವಿನೊಂದಿಗೆ ದಂಪತಿಗಳನ್ನು ವಶಕ್ಕೆ ಪಡೆದು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆ ಮಾಡಲಾಗಿ ಮಕ್ಕಳಿಲ್ಲದ ಕಾರಣ ಎಷ್ಟು ಲಕ್ಷಗಳಾದರೂ ಪರವಾಗಿಲ್ಲ, ಒಂದು ಗಂಡು ಮಗು ಬೇಕೆಂದು ಬ್ರೋಕರ್ ನಾರಾಯಣಸ್ವಾಮಿರವರನ್ನು ಕೇಳಿದ್ದು ಅದರಂತೆ ಅವರು ಫೆಬ್ರವರಿ 6ರಂದು ರಾತ್ರಿ ಈ ಮಗುವನ್ನು ತಂದುಕೊಟ್ಟು 5 ಲಕ್ಷ ಹಣವನ್ನು ತೆಗೆದುಕೊಂಡು ಹೋಗಿರುವುದಾಗಿ ತಿಳಿಸಿದರು.

ಹೇಳಿಕೆ ಪಡೆದ ನಂತರ ಕೃಷ್ಣ, ಮಂಜುಳಾ ದಂಪತಿಗಳಿಂದ ಮಗುವನ್ನು ವಶಕ್ಕೆ ಪಡೆದ ಪೊಲೀಸರು ಸುರಕ್ಷಿತವಾಗಿ ಹೆತ್ತತಾಯಿಯ ಮಡಿಲಿಗೆ ಸೇರಿಸಿದ್ದಾರೆ. ಮಗುವಿನ ತಂದೆ, ತಾಯಿ, ನೀತು, ರಾಘವೇಂದ್ರ, ಮಧ್ಯವರ್ತಿ ನಾರಾಯಣಸ್ವಾಮಿ ಹಾಗೂ ಖರೀದಿದಾರರಾದ ಕೃಷ್ಣ, ಮಂಜುಳಾ ದಂಪತಿಗಳ ವಿರುದ್ಧ ಶ್ರೀನಿವಾಸಪುರ ಪೊಲೀಸರು ದೂರು ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ. ಕಾಮದ ಆಸೆಗಾಗಿ ಮಗು ಮಾಡಿಕೊಂಡು, ಹೆತ್ತಮಗುವನ್ನು ಸಾಕಲಾರದೆ, ಹಣದಾಸೆಗೆ ಅದನ್ನು ಮಾರುಕಟ್ಟೆಯ ವಸ್ತುವಿನಂತೆ ಮಾರಾಟಕ್ಕಿಡುವುದು ಪವಿತ್ರವಾದ ತಾಯಿತನಕ್ಕೆ ಮಾಡಿದ ದೊಡ್ಡ ಅವಮಾನ.

ಈಗಾಗಲೇ ಮಗು ಮಾರಾಟ ಜಾಲವನ್ನು ಭೇದಿಸುವಲ್ಲಿ ಶ್ರೀನಿವಾಸಪುರ ಪೊಲೀಸರು ಯಶಸ್ವಿಯಾಗಿದ್ದು, ಐದು ಜನರ ವಿರುದ್ಧ ಪ್ರಕರಣವನ್ನು ದಾಖಲಿಸಿಕೊಂಡು ಅಕ್ರಮವಾಗಿ ಮಗು ಮಾರಾಟ ಜಾಲದಲ್ಲಿ ಇನ್ನು



ಮಗು ಕಳ್ಳರನ್ನು ಬಂಧಿಸಿರುವ ಪೊಲೀಸರು

ಯಾರಾದರೂ ಭಾಗಿಯಾಗಿದ್ದಾರೆ ಹಾಗೂ ಶ್ರೀನಿವಾಸಪುರ ಸೇರಿದಂತೆ ಜಿಲ್ಲೆಯ ವ್ಯಾಪ್ತಿಯಲ್ಲಿ ಮಕ್ಕಳ ಮಾರಾಟ ಜಾಲದ ಬಗ್ಗೆ ಉನ್ನತ ತನಿಖೆ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕನ್ನಿಕಾ ಸುಕ್ರಿವಾಲ್ ರವರು ತಿಳಿಸಿದ್ದಾರೆ. ☯


ಕರ್ನಾಟಕ ಸರ್ಕಾರ
ಸಂವಿಧಾನವೇ ಸ್ಫೂರ್ತಿ
ಗಾಂಧಿ ಮಾರ್ಗವೇ ದಿಕ್ಸೂಚಿ
ಮಹಾತ್ಮ ಗಾಂಧೀಜಿಯವರ ಕನಸಿನ 'ಅಂತ್ಯೋದಯ' ಮತ್ತು 'ಸರ್ವೋದಯ'ದ ಹಾದಿಯಲ್ಲಿ, ಸಾಂವಿಧಾನಿಕ ಮೌಲ್ಯಗಳನ್ನು ಪಾಲಿಸುತ್ತಾ ಪ್ರತಿ ಕುಟುಂಬದ ಕಲ್ಯಾಣಕ್ಕೆ ನಮ್ಮ 'ಗ್ಯಾರಂಟಿ ಸರ್ಕಾರ' ಕಂಕಣಬದ್ಧವಾಗಿದೆ. ಅಧಿಕಾರವನ್ನು ಜನಸೇವೆಯನ್ನಾಗಿಸಿ, ಸ್ವಾಭಿಮಾನದ ಬದುಕಿಗೆ ಆಸರೆಯಾಗಿದ್ದೇವೆ.
ಬನ್ನಿ, ಈ ಗಣರಾಜ್ಯೋತ್ಸವ ದಿನದಂದು ನ್ಯಾಯ, ಸಮಾನತೆ ಮತ್ತು ಘನತೆಯ ಬುನಾದಿಯ ಮೇಲೆ ನಿಂತಿರುವ ನಮ್ಮ ಸಂವಿಧಾನದ ಮೇಲಿನ ನಂಬಿಕೆಯನ್ನು ಮತ್ತಷ್ಟು ಗಟ್ಟಿಗೊಳಿಸೋಣ.
ಸರ್ವರಿಗೂ
77ನೇ
ಗಣರಾಜ್ಯೋತ್ಸವದ
ಹಾರ್ದಿಕ ಶುಭಾಶಯಗಳು
ಸರ್ವರಿಗೂ ಸಮಪಾಲು
ಸರ್ವರಿಗೂ ಸಮಬಾಳು
ಶಕ್ತಿ
ಅನ್ನಭಾಗ್ಯ
ಗೃಹ ಜ್ಯೋತಿ
ಗೃಹಲಕ್ಷ್ಮಿ
ಯುವನಿಧಿ
CMofKarnataka
https://dipr.karnataka.gov.in/
ಕರ್ನಾಟಕ ವಾರ್ತೆ

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 8.2.2026



# ಹೆಬ್ಬಗೋಡಿಯ ಕನ್ನಡ ಹಬ್ಬದಲ್ಲಿ ರವಿಚಂದ್ರನ್ ಕ್ರೇಜಿ ಹಾಡುಗಳ ಮೋಡಿ

ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟರ ಬಣ ಆಯೋಜಿಸಿದ್ದ ಕನ್ನಡಿಗರ ಹಬ್ಬಕ್ಕೆ ಕಳೆದ ಶನಿವಾರ ಸಂಜೆ ಹಿರಿಯ ನಟ ರವಿಚಂದ್ರನ್ ಚಾಲನೆ ನೀಡಿದರು. ಹಬ್ಬದ ಪ್ರಯುಕ್ತ ನಡೆದ ರವಿಚಂದ್ರನ್ ಸಿನಿಮಾ ಗೀತೆಗಳ ಗಾಯನ ಪ್ರೇಕ್ಷರದಲ್ಲಿ ಮೋಡಿ ಮಾಡಿದವು. ಯುವಗಾಯಕಿ ಅಂಕಿತ ಕುಂಡು ಹಾಡಿದ ರಾಮಚಾರಿ ಚಿತ್ರದ 'ಆಕಾಶದಾಗೆ ಯಾರೋ ಮಾಯಗಾರನು....' ಶ್ರೀಹರ್ಷ ಮತ್ತು ಅಂಕಿತ ಕುಂಡು ಜೋಡಿ ಕಂಠಿದಲ್ಲಿ ಮೂಡಿದ ಬಂದ ಶ್ರೀರಾಮಚಂದ್ರ ಚಿತ್ರ 'ಗಗನದಲ್ಲಿ ಮಳೆಯ ದಿನ ಗುಡುಗಿನ ತನನ...' ಹಾಡಿಗೆ ಪ್ರೇಕ್ಷಕರು ಫಿಧಾ ಆದರು.

ಶ್ರೀಹರ್ಷ ಹಾಡಿದ 'ಮಲ್ಲ' ಸಿನಿಮಾದ 'ಕರುನಾಡೇ ಕರುನಾಡೇ', ಯುಗ ಪುರುಷ ಚಿತ್ರದ 'ಯಾವುದೋ ಈ ಗೊಂಬೆ ಯಾವುದೋ',ಮನೆ ದೇವ್ರು ಚಿತ್ರದ 'ಸುಂದರಿ ಸುಂದರಿ ಸುಂದರಿ' ಸೇರಿದಂತೆ ವಿವಿಧ ಗೀತೆಗಳು ಪ್ರೇಕ್ಷಕರನ್ನು ನಿಜವಾಗಿಯೂ ಪ್ರೇಮಲೋಕಕ್ಕೆ ಕರೆದ್ಯೊಯ್ದವು.

ಹೆಬ್ಬಗೋಡಿಯ ಎಸ್ಎಫ್ಎಸ್ ಶಾಲೆಯ ವಿಶಾಲ ಮೈದಾನ ಸಂಗೀತ ಪ್ರಿಯರಿಂದ ತುಂಬಿ ತುಳುಕುತ್ತಿತ್ತು. ಸಂಗೀತ ರಸದೌತಣ ಸವಿಯಲು ಬೆಂಗಳೂರು ದಕ್ಷಿಣ,ಆನೇಕಲ್ ತಾಲ್ಲೂಕಿನ ನಾನಾ ಕಡೆಗಳಿಂದ ಜನ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ನಿರೂಪಕಿ ಅನುಶ್ರೀ ಅವರು ಪ್ರತಿ ಹಾಡಿನ ನಂತರ ರವಿಚಂದ್ರನ್ ಅವರಿಗೆ ಈ ಹಾಡು ಸೂರ್ತಿಯಾಗಲು ಕಾರಣ ಕೇಳುತ್ತಾ ಪ್ರೇಕ್ಷಕರನ್ನು ರಂಜಿಸಿದರು.



ಗಾಯಕರಾದ ಹೇಮಂತ್, ಅನುರಾಧ ಭಟ್, ಅಶ್ವಿನ್ ಶರ್ಮ, ಶ್ರೀಹರ್ಷ, ಅಂಕಿತಾ ಕುಂಡು, ಶಿವಾನಿ, ಲಕ್ಷ್ಮೀ ವಿಜಯ್ ಗಾಯನ ನಡೆಸಿಕೊಟ್ಟರು. ಅಂತರರಾಷ್ಟ್ರೀಯ ಡ್ರಮ್ ವಾದಕ ಅರುಣ್‌ಕುಮಾರ್ ಡ್ರಮ್ ವಾದನ ನಡೆಸಿಕೊಟ್ಟರು. ಮಾರನೇ ದಿನ ಭಾನುವಾರ ಅರ್ಜುನ್ ಜನ್ಯ ಮತ್ತು ತಂಡದವರು ಸಂಗೀತ ಸಂಭ್ರಮ ನಡೆಸಿಕೊಟ್ಟರು. ಐಶ್ವರ್ಯ ರಂಗ ರಾಜನ್, ಪೃಥ್ವಿ ಭಟ್, ದರ್ಶನ್, ಸುನೀಲ್, ವ್ಯಾಸರಾಜ್ ಮತ್ತು ತಂಡದವರು ಆಕರ್ಷಕ ಗೀತೆಗಳನ್ನು ಪ್ರಸ್ತುತ ಪಡಿಸಿದರು. ಕರವೇ ಬಳಗ ಪ್ರತಿವರ್ಷ ಹೆಬ್ಬಗೋಡಿಯಲ್ಲಿ ಹಮ್ಮಿಕೊಳ್ಳುವ 'ಕನ್ನಡಿಗರ ಹಬ್ಬ'ದಲ್ಲಿ ವಿಶೇಷವಾಗಿ ಕನ್ನಡ ಪ್ರೇಮಗೀತೆಗಳ ಮೂಲಕ ಅನ್ಯಭಾಷಿಕರಿಗೆ ಕನ್ನಡದ ಮಹತ್ವ ಸಾರುತ್ತಿರುವುದು ವಿಶೇಷವಾಗಿದೆ. ಮುಖ್ಯ ಅತಿಥಿ ರವಿಚಂದ್ರನ್ ಮಾತನಾಡಿ, 'ನಮ್ಮ ಕನ್ನಡ ಭಾಷೆಯನ್ನು ಪ್ರತಿಯೊಬ್ಬರಿಗೂ ತಲುಪಿಸಬೇಕಾದುದ್ದು ನಮ್ಮ ಜವಾಬ್ದಾರಿಯಾಗಿದೆ. ಬಹುತೇಕ ಎಲ್ಲಾ ಕಾರ್ಯಕ್ರಮದಲ್ಲಿಯೂ ಅರ್ಧ ಗಂಟೆ ಇರುತ್ತಿದೆ. ಆದರೆ ಇಲ್ಲಿ ರವಿಚಂದ್ರನ್ ಚಿತ್ರ ಗೀತೆಗಳ ಗಾಯನ ಇರುವುದರಿಂದ ಹೆಚ್ಚು ಸಮಯ ಕಳೆಯುತ್ತಿದ್ದೇನೆ' ಎಂದು ಹೇಳಿದರು.

ಆನೇಕಲ್ ತಾಲ್ಲೂಕು ಗಡಿಭಾಗದಲ್ಲಿದ್ದರು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬರವಿಲ್ಲ. ಪ್ರತಿ ವರ್ಷ ಕನ್ನಡಿಗರ ಹಬ್ಬದಲ್ಲಿ ಖ್ಯಾತ ಗಾಯಕರನ್ನು ಕರೆಯಿಸಿ ಸಂಗೀತ ಕಾರ್ಯಕ್ರಮ ಏರ್ಪಡಿಸ ಲಾಗುತ್ತಿದೆ. ಗಡಿಯಲ್ಲಿ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ಹೆಚ್ಚಾಗಬೇಕು ಎಂದು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಹೇಳಿದರು. ಅವತ್ತು ಅಲ್ಲಿ ಆನೇಕಲ್ ಶಾಸಕ ಬಿ. ಶಿವಣ್ಣ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಮಿಕರ ಘಟಕದ ಅಧ್ಯಕ್ಷ ಎಚ್.ಎಂ. ಅಂಬರೀಷ್, ಕರವೇ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಜಿಗಣಿ ಬಿಜೆಪಿ ಕೌನ್ಸಿಲರ್ ಪುನೀತ್ ಮತ್ತು ಗಟ್ಟಹಳ್ಳಿ ಸೀನಪ್ಪ ಮುಂತಾದ ವರಿದ್ದರು. ☯

# ಎತ್ತ ನೋಡಿದ್ರು ಸಲಿಂಗ ಸಂಕಟ!!

ಮೊನ್ನೆಯಷ್ಟೇ 17 ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಮುಗಿಯಿತು. ಮಾಮೂಲಿನಂತೆ ಪ್ರತಿದಿನ ನಾಲ್ಕರಿಂದ ಐದು ಸಿನಿಮಾ ನೋಡುತ್ತಿದ್ದೆ. ನನಗೆ ಮಾತ್ರವಲ್ಲ, ಎಲ್ಲರಿಗೂ ಈ ಚಿತ್ರೋತ್ಸವ ವಿಶೇಷ. ಈ ಜಗತ್ತಿನ ಬೇರೆ ಬೇರೆ ದೇಶಗಳ ಆಚಾರ, ವಿಚಾರ, ಜನ ಜೀವನ, ಅವರ ಕಷ್ಟಸುಖಗಳು, ಇವತ್ತಿನ ಜಗದ ಬಿಕ್ಕಟ್ಟುಗಳು ಮಂತಾದವುಗಳನ್ನು ಅರಿಯಲು ಇರುವ ಒಂದು ಅವಕಾಶವಿದು. ಹಾಗಾಗಿ ನಾನು ಭಾರತೀಯ ಸಿನಿಮಾಗಳನ್ನು ಅಷ್ಟಾಗಿ ನೋಡುವುದಿಲ್ಲ. ನೋಡಬಾರದು ಅಂತ ಅಲ್ಲ, ಅವುಗಳನ್ನು ಮುಂದೆ ಯಾವಾಗ ಬೇಕಿದ್ರೂ ನೋಡಬಹುದು.....




ಡಾ.ರಾಜ್ ಕುಮಾರ್ ಅವರ ಹಳೆಯ ಸಿನಿಮಾಗಳನ್ನು ಮಾತ್ರ ಜಿದ್ದಿಗೆ ಬಿದ್ದು ನೋಡಿ ಕೊಳ್ಳುತ್ತೇವೆ, ಅದು ಬೇರೆ ರೀತಿಯ ಅಭಿಮಾನ ಬಿಡ್ರಿ! ಅದಿರಲಿ, ಪ್ರತಿ ವರ್ಷ ಇಲ್ಲಿಗೆ ಅಂದ್ರೆ, ಚಿತ್ರೋತ್ಸವಕ್ಕೆ ಆಗಮಿಸುವ ಪ್ರೇಕ್ಷಕರು ಆಡುವ ಒಂದು ಕಾಮನ್ ಮಾತು ಏನಪ್ಪ ಅಂದ್ರೆ 'ಹೋದ ವರ್ಷ ಸಿನಿಮಾಗಳು ತುಂಬಾ ಚೆನ್ನಾಗಿದ್ವು, ಈ ವರ್ಷ ಅಷ್ಟು ಚೆನ್ನಾಗಿಲ್ಲ' ಅನ್ನುವುದು! ಪ್ರತಿ ವರ್ಷ 300 ರಿಂದ400 ಸಿನಿಮಾಗಳು ಪ್ರದರ್ಶನವಾಗುತ್ತವೆ. ಒಬ್ಬ ಪ್ರೇಕ್ಷಕ ಅತಿ ಹೆಚ್ಚು ಅಂದ್ರೆ 40 ಸಿನಿಮಾ ನೋಡಬಹುದು ಅಷ್ಟೇ. ಅದರಲ್ಲಿ ಅವನ ಅಭಿರುಚಿಗೆ ಇಷ್ಟವಾಗುವ ಎಷ್ಟು ಸಿನಿಮಾಗಳು ಅವನಿಗೆ ನೋಡಲು ಸಿಗಬಹುದು? ಮತ್ತು ಒಬ್ಬನಿಗೆ ಇಷ್ಟವಾಗುವ ಸಿನಿಮಾ ಇನ್ನೊಬ್ಬನಿಗೆ ಇಷ್ಟವಾಗಲೇಬೇಕು ಅನ್ನುವ ನಿಯಮವೇನಿಲ್ಲ. ಹಾಗಾಗಿ ಅವನಿಗೆ ಸಿಕ್ಕಿದ ಸಿನಿಮಾಗಳ ಆಧಾರದ ಮೇಲೆ ಅವನು ತನ್ನ ಜಡ್ಜ್‌ಮೆಂಟ್ ಕೊಡುತ್ತಾನೆ.

ಬಹಳ ಸಿನಿಮಾಗಳನ್ನು ನೋಡಿದ ಮೇಲೆ, ಪ್ರತಿವರ್ಷ ನನಗೆ ಮೂಡುವ ಒಂದು ಕಾಮನ್ ಅಭಿಪ್ರಾಯ ಏನಪ್ಪ ಅಂದ್ರೆ 'ಈ ಜಗತ್ತಿನ ಎಲ್ಲಾ ಮನುಷ್ಯರ ಆಲೋಚನೆಗಳು ಒಂದೇ ಥರ ಇದ್ದಾವೆ' ಅನ್ನುವುದು!!! ಜಾತಿ,ಮತ,ಧರ್ಮ.ವರ್ಣ ಯಾವುದೇ ಇರಲಿ ಅಲ್ಲಿ ಜನರಲ್ಲಾಗಿ ಕಾಣುವುದು ಬಡವಶ್ರೀಮಂತ ಮತ್ತು ಗಂಡು ಹೆಣ್ಣು ಅನ್ನುವ ವ್ಯತ್ಯಾಸಗಳು ಮಾತ್ರ! ಯಾವ ಬಡವನು ಸುಖವಾಗಿಲ್ಲ, ಯಾವ ಶ್ರೀಮಂತನೂ ನೆಮ್ಮದಿಯಾಗಿಲ್ಲ ಅನ್ನುವುದು ಇನ್ನೊಂದು ಸತ್ಯ!!

ಬಡ ದೇಶಗಳ ಸಂಕಷ್ಟಗಳೇ ಬೇರೆ, ಶ್ರೀಮಂತ ದೇಶಗಳ ಸಂಕಟಗಳೇ ಬೇರೆ! ಈ ಬಾರಿ ಐದಾರು ಫ್ರೆಂಚ್ ಮತ್ತು ಪೋರ್ಚುಗೀಸ್ ಸಿನಿಮಾಗಳನ್ನು ನೋಡಿದೆ. ಕಥೆ ಬೇರೆ ಬೇರೆ ಥರ ಇದ್ದರೂ ಒಂದು ಕಾಮನ್ ಫ್ಯಾಕ್ಟರ್ ಏನಪ್ಪ ಅಂದ್ರೆ, ಈ ಎಲ್ಲಾ ಸಿನಿಮಾಗಳಲ್ಲಿ ಬರುವ ಗಂಡುಹೆಣ್ಣುಗಳು ಸಲಿಂಗ ಕಾಮಿಗಳು! ಇಡೀ ದೇಶವೇ ಸಲಿಂಗಿ ಆಗಿಬಿಟ್ಟಿದೆಯೆ??? ಅನ್ನುವ ಅನುಮಾನ ನನ್ನದು!!! ಶ್ರೀಮಂತ ದೇಶಗಳ ಜನ ಜೀವನ, ಅವರ ಬಿಕ್ಕಟ್ಟುಗಳು, ಅವರ 'ಸಂಬಂಧ ಸಂಕಟ'ಗಳನ್ನು ನೋಡಿದರೆ, ಕೂಳಿಗಾಗಿ ಹೊಡೆದಾಡಿಕೊಳ್ಳುವ ಬಡ ದೇಶಗಳೇ ನೆಮ್ಮದಿಯಾಗಿವೆ ಅಂತನ್ನಿಸುತ್ತದೆ... ☯

# ರಕ್ಕಸ ಪುರದೊಳ್....ಎಂಬ ಸಸ್ಪೆನ್ಸ್ ಕ್ರೈಂ ಥ್ರಿಲ್ಲರ್

ರವಿ ಸಾರಂಗ ನಿರ್ದೇಶನದ, ರಾಜ್ ಬಿ. ಶೆಟ್ಟಿ ನಟನೆಯ 'ರಕ್ಕಸ ಪುರದೊಳ್' ಒಂದು ವಿಭಿನ್ನ ಕ್ರೈಂ ಥ್ರಿಲ್ಲರ್. ಹಳ್ಳಿಯಲ್ಲಿ ನಡೆಯುವ ಸರಣಿ ಕೊಲೆಗಳನ್ನು ತನಿಖೆ ಮಾಡುವ ಕಥಾವಸ್ತು. ಮಾನಸಿಕ ಸಂಘರ್ಷ ಮತ್ತು 'ಕೊಳ್ಳಿ ದೆವ್ವ'ದ ದಂತಕತೆಯನ್ನು ಬೆರೆಸಿದೆ. ರಾಜ್ ಶೆಟ್ಟಿಯ ನಟನೆ ಬಗ್ಗೆ ಹೇಳುವಂತೆಯೇ ಇಲ್ಲ. ಅರ್ಜುನ್ ಜನ್ಯ ಹಿನ್ನೆಲೆ ಸಂಗೀತ ಅದ್ಭುತವಾಗಿದೆ. ಮೊದಲಾರ್ಧ ನಿಧಾನವಾಗಿಯೇ ಸಾಗಿದರೂ ಸೆಕೆಂಡ್ ಆಫ್ ಸ್ಪೀಡ್ ಮತ್ತು ರೋಚಕವಾಗಿದೆ. ಹಳ್ಳಿಯೊಂದರಲ್ಲಿ ನಿಗೂಢವಾಗಿ ನಡೆಯುವ ಮಹಿಳೆಯರ ಕೊಲೆಗಳು ಮತ್ತು ಆ ಗ್ರಾಮದ ಜನರಲ್ಲಿನ 'ಕೊಳ್ಳಿ ದೆವ್ವ'ದ ಭಯದ ಸುತ್ತ ಚಿತ್ರಕಥೆ ಸುತ್ತುತ್ತದೆ. ಸಸ್ಪೆಂಡೆಡ್ ಪೊಲೀಸ್ ಆಫೀಸರ್ ಶಿವ (ರಾಜ್ ಬಿ. ಶೆಟ್ಟಿ) ಸ್ವಯಂ ಪ್ರೇರಿತನಾಗಿ ತನಿಖೆ ನಡೆಸುತ್ತಾನೆ. ಅವರ ಸಂಯಮದ ನಟನೆಯೇ ಚಿತ್ರದ ಬೆನ್ನೆಲುಬು... ಉಳಿದಂತೆ ಗೋಪಾಲಕೃಷ್ಣ ದೇಶಪಾಂಡೆ, ಬಿ. ಸುರೇಶ್ ಮತ್ತು ಅನಿರುದ್ಧ ಭಟ್ ಗಮನಾರ್ಹ ಪಾತ್ರಗಳನ್ನು ನಿರ್ವಹಿಸಿದ್ದಾರೆ. ರವಿ ಸಾರಂಗ ಅವರಿಗೆ ಇದು ಚೊಚ್ಚಲ ನಿರ್ದೇಶನ. ಮೊದಲ ಪ್ರಯತ್ನವೇ ಪ್ರಭಾವಶಾಲಿಯಾಗಿದೆ.




ಒಟ್ಟಾರೆ ಇದೊಂದು ಸ್ಲೋಬರ್ನ್ ಸಸ್ಪೆನ್ಸ್ ಥ್ರಿಲ್ಲರ್. ಚಿತ್ರದ ಆರಂಭದಲ್ಲಿ ಸ್ವಲ್ಪ ನಿಧಾನವೆನಿಸಿದರೂ, ತನಿಖೆ ಮುಂದು ವರೆದಂತೆ ಆಸಕ್ತಿ ಹೆಚ್ಚಿಸುತ್ತದೆ. ತಾಂತ್ರಿಕವಾಗಿ ಉತ್ತಮವಾಗಿ ಮೂಡಿಬಂದಿರುವ ಈ ಚಿತ್ರವು ನೋಡಲೇಬೇಕಾದ ಸಸ್ಪೆನ್ಸ್ ಕ್ರೈಂ ಥ್ರಿಲ್ಲರ್. ಶಿವನ ತನಿಖೆಯು ಅವನ 'ಸ್ಕಿಜೋಫ್ರೇನಿಯಾ'ದಿಂದ ಜಟಿಲವಾಗಿದ್ದು, ನೋಡುಗರಿಗೆ ಕಿಕ್ ಏರಿಸುತ್ತದೆ ಮತ್ತು ಸತ್ತವ ರೊಂದಿಗೆ 'ಸಂಪರ್ಕ' ಮಾಡಲು ಅನುವು ಮಾಡಿಕೊಡುತ್ತದೆ!! ಅಂದಹಾಗೆ, ಇದು ಖ್ಯಾತ ಸ್ಟಂಟ್ ಮಾಸ್ಟರ್ ರವಿ ವರ್ಮ ನಿರ್ಮಾಣದ ಚಿತ್ರ. ರಾಜ್ ಬಿ. ಶೆಟ್ಟಿ ಇಚ್ಛೆಯಂತೆ ಕಡಿಮೆ ಬಜೆಟ್‌ನಲ್ಲಿ ಉತ್ತಮ ಸಿನಿಮಾ ಕೊಟ್ಟಿದ್ದಾರೆ. ☯

Vol. 41 No. 36 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 cenewsreporter@gmail.com
http//policenews.news https://www.facebook.com/profile.php?id=61579674874846 tps://www.instagram.com/police_news?igsh=MWJ6bHJwZDRmZDc1aQ==